# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಮಂಗಳವಾರ, ಸೆಪ್ಟೆಂಬರ್ 03, 2024

ಸಂಪುಟ : 51 ಸಂಚಿಕೆ : 112 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




**ಸೋಮಾವತಿ ಅಮವಾಸ್ಯೆ..** ಸೋಮವಾರ ಹರಿದ್ವಾರದಲ್ಲಿ ಸೋಮಾವತಿ ಅಮವಾಸ್ಯೆಯ ಸಂದರ್ಭದಲ್ಲಿ ಗಂಗಾ ನದಿಯಲ್ಲಿ ಪವಿತ್ರ ಸ್ನಾನ ಮಾಡಲು ಅಪಾರ ಸಂಖ್ಯೆಯ ಭಕ್ತರು ಆಗಮಿಸಿದ್ದರು. ತಮ್ಮ ಪೂರ್ವಜರಿಗೆ ಗೌರವ ಸಲ್ಲಿಸಲು, ಪೂರ್ವಜರನ್ನು ಪೂಜಿಸಲು ಈ ಅಮಾವಾಸೆಯ ಮಹತ್ವದ್ದು ಎಂಬ ನಂಬಿಕೆ ಇದೆ.

# ಸಪ್ತ ಕೃಷಿ ಯೋಜನೆಗಳಿಗೆ 14 ಸಹಸ್ರ ಕೋಟಿ ರೂ. : ಕೇಂದ್ರ

ನವದೆಹಲಿ, ಸೆ. 2 - ಕೃಷಿ ಹಾಗೂ ಸಂಬಂಧಿಸಿದ ವಲಯಗಳ ಸಮಗ್ರ ಬೆಳವಣಿಗೆಗಾಗಿ ಏಳು ಯೋಜನೆಗಳನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ. ಇವುಗಳಿಗೆ 14,000 ಕೋಟಿ ರೂ. ಅನುದಾನ ನೀಡಲಾಗುವುದು.

ಕೇಂದ್ರ ಸಂಪುಟ ಒಪ್ಪಿಗೆ ನೀಡಿರುವ ಯೋಜನೆಗಳಲ್ಲಿ ಡಿಜಿಟಲ್ ಕೃಷಿ ಯೋಜನೆಗೆ 2,817 ಕೋಟಿ ರೂ. ಹಾಗೂ ಕೃಷಿ ವಿಜ್ಞಾನ ಯೋಜನೆಗೆ 3,979 ಕೋಟಿ ರೂ. ಒದಗಿಸುವುದೂ ಸಹ ಸೇರಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ರೈತರ ಜೀವನ ಸುಧಾರಿಸುವ ಹಾಗೂ ಆದಾಯ ಹೆಚ್ಚಿಸುವ ಏಳು ಯೋಜನೆಗಳಿಗೆ ಒಪ್ಪಿಗೆ ನೀಡಲಾಗಿದೆ. ಇವುಗಳ ಒಟ್ಟು ಮೊತ್ತ 13,966 ಕೋಟಿ ರೂ. ಎಂದು ಅಧಿಕೃತ



ಹೇಳಿಕೆಯಲ್ಲಿ ತಿಳಿಸಲಾಗಿದೆ.

ಸಂಪುಟ ಸಭೆಯ ನಂತರ ಮಾತನಾಡಿರುವ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್, ಸಂಶೋಧನೆ, ಪರಿಸರ ಬದಲಾವಣೆ ಎದುರಿಸುವುದು, ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಹಾಗೂ ಕೃಷಿ ವಲಯಕ್ಕೆ ಅಗತ್ಯ ಡಿಜಿಟಲೀಕರಣ ಒದಗಿಸಲು ಯೋಜನೆಗಳಿಗೆ ಒಪ್ಪಿಗೆ ನೀಡಲಾಗಿದೆ ಎಂದು ಹೇಳಿದರು.

ಪರಿಸರಕ್ಕೆ ಅನುಗುಣವಾದ ಬೆಳೆಗಳನ್ನು ರೂಪಿಸುವ ತಂತ್ರಜ್ಞಾನ ಅಭಿವೃದ್ಧಿಗಾಗಿ 3,979 ಕೋಟಿ ರೂ. ಒದಗಿಸಲು ಸಂಪುಟ ಒಪ್ಪಿಗೆ ನೀಡಿದೆ. ಇದರಲ್ಲಿ ತಳಿಗಳ ನಿರ್ವಹಣೆ, ತಳಿಗಳ ಸುಧಾರಣೆ, ಬೇಳೆ ಹಾಗೂ ಖಾದ್ಯ ತೈಲ ಬೀಜಗಳ ಸುಧಾರಣೆ, ವಾಣಿಜ್ಯ ಬೆಳೆಗಳ ಸುಧಾರಣೆ ಹಾಗೂ ಕೀಟಗಳು ಮತ್ತು ಸೂಕ್ಷ್ಮಾಣು ಜೀವಿಗಳ ಅಧ್ಯಯನ ಸಹ ಸೇರಿದೆ.

ಕೃಷಿ ಶಿಕ್ಷಣ ಬಲಗೊಳಿಸಲು 2,291 ಕೋಟಿ ರೂ. ಒದಗಿಸಲು ಸಂಪುಟ ಒಪ್ಪಿಗೆ ನೀಡಿದೆ. ನೂತನ ಶಿಕ್ಷಣ ನೀತಿಯ ಅನ್ವಯ ಕೃಷಿ ಸಂಶೋಧನೆ ಹಾಗೂ ಶಿಕ್ಷಣವನ್ನು ಆಧುನೀಕರಣಗೊಳಿಸಲು ಈ ಅನುದಾನ ನೀಡಲಾಗುತ್ತಿದೆ. ಜಾನುವಾರು (2ನೇ ಪುಟಕ್ಕೆ)

# ಹರಿಹರ ನಗರಸಭೆ ಅಧ್ಯಕ್ಷರಾಗಿ ಕವಿತಾ ಮಾರುತಿ

ಹರಿಹರ, ಸೆ.2- ಇಲ್ಲಿನ ನಗರಸಭೆ ಅಧ್ಯಕ್ಷರಾಗಿ ಜೆಡಿಎಸ್ ಕವಿತಾ ಮಾರುತಿ ಬೇಡರ್ ಮತ್ತು ಉಪಾಧ್ಯಕ್ಷರಾಗಿ ಜಂಬಣ್ಣ ಗುತ್ತೂರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ

ನಗರಸಭೆ ಆವರಣದ ಸದಸ್ಯರ ಕೊಠಡಿಯಲ್ಲಿ ಉಪವಿಭಾಗಾಧಿಕಾರಿ ಸಂತೋಷ್ ಬೆಳಗ್ಗೆ 10 ಗಂಟೆಗೆ ಚುನಾವಣೆ ಪ್ರಕ್ರಿಯೆ ಪ್ರಾರಂಭಿಸಿದರು. ಅಧ್ಯಕ್ಷ ಸ್ಥಾನಕ್ಕೆ ಕವಿತಾ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಜಂಬಣ್ಣ ಅವರುಗಳು ಮಾತ್ರ ನಾಮಪತ್ರ ಸಲ್ಲಿಸಿದರು. ಇವರ ಹೊರತು ಮತ್ಯಾರು ನಾಮಪತ್ರ ಸಲ್ಲಿಸದ ಕಾರಣ ಚುನಾವಣಾ ಅಧಿಕಾರಿ ಅವಿರೋಧ ಆಯ್ಕೆಯನ್ನು ಘೋಷಣೆ ಮಾಡಿದರು.

ಅಧ್ಯಕ್ಷ ಸ್ಥಾನಕ್ಕೆ ಎಸ್ಟಿ ಮಹಿಳಾ ಮೀಸಲು ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಸಾಮಾನ್ಯ ಸ್ಥಾನದ ಮೀಸಲಾತಿಯನ್ನು ಸರ್ಕಾರ ಘೋಷಣೆ ಮಾಡಿತ್ತು. 31 ಜನ ಸದಸ್ಯರಲ್ಲಿ ಎಸ್ಟಿ ಮಹಿಳಾ ಸದಸ್ಯರಾಗಿ ಕವಿತಾ



ಮಾರುತಿ ಮಾತ್ರ ಆಯ್ಕೆಯಾಗಿದ್ದು, ಹಾಗಾಗಿ ಅಧ್ಯಕ್ಷ ಸ್ಥಾನಕ್ಕೆ ಪೈಪೋಟಿ ನಡೆಸುವುದಕ್ಕೆ ಅವಕಾಶ ಇಲ್ಲದಂತಾಗಿತ್ತು.

ಉಪಾಧ್ಯಕ್ಷ ಸ್ಥಾನಕ್ಕೆ ಜೆಡಿಸ್ ವತಿಯಿಂದ ಆರ್.ಸಿ. ಜಾವೇದ್, ಲಕ್ಷ್ಮಿ ಮೋಹನ್, ಜಂಬಣ್ಣ ಗುತ್ತೂರು, ಕಾಂಗ್ರೆಸ್ ಪಕ್ಷದಿಂದ ಅಬ್ದುಲ್ ಅಲಿಂ, ಬಿಜೆಪಿ ಅಶ್ವಿನಿ ಕೃಷ್ಣ

**ಉಪಾಧ್ಯಕ್ಷರಾಗಿ ಜಂಬಣ್ಣ ಗುತ್ತೂರು ಅವಿರೋಧ ಆಯ್ಕೆ**

ಸೇರಿದಂತೆ ಹಲವರು ಆಕಾಂಕ್ಷಿತರು ಇದ್ದರೂ ಎಂಬ ಮಾತುಗಳು ಹರಿದಾಡಿದ್ದವು.

ಆಯ್ಕೆ ಪ್ರಕ್ರಿಯೆ ಮುಗಿಯುತ್ತಿದಂತೆ ಶಾಸಕ ಬಿ.ಪಿ. ಹರೀಶ್, ಬಿಜೆಪಿ ಮಾಜಿ ಜಿಲ್ಲಾ ಅಧ್ಯಕ್ಷ ಎಸ್.ಎಂ ವೀರೇಶ್ ಹನಗವಾಡಿ, ನಗರಸಭೆ ಸದಸ್ಯರು, ವಿವಿಧ ಪಕ್ಷಗಳ ಮುಖಂಡರು, ಕಾರ್ಯಕರ್ತರು ನೂತನ ಅಧ್ಯಕ್ಷರು ಮತ್ತು (4ನೇ ಪುಟಕ್ಕೆ)

# ಈಗ ಖರ್ಗೆ ಕುಟುಂಬಕ್ಕೆ ಸಂಕಷ್ಟ

## ಕುಟುಂಬ ನಡೆಸುವ ಟ್ರಸ್ಟ್‌ಗೆ ಸರ್ಕಾರ ಉಚಿತವಾಗಿ 19 ಎಕರೆ ಜಮೀನು ಉಚಿತವಾಗಿ ನೀಡಿದೆ ಎಂದು ಸಿರೋಯ ಆರೋಪ

ಬೆಂಗಳೂರು, ಸೆ. 2 - ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕುಟುಂಬದ ಸಿದ್ಧಾರ್ಥ ವಿಹಾರ ಟ್ರಸ್ಟ್ ನಡೆಸುವ ಸಂಸ್ಥೆಯೊಂದಕ್ಕೆ ರಾಜ್ಯ ಸರ್ಕಾರ 19 ಎಕರೆ ಜಮೀನನ್ನು ಉಚಿತವಾಗಿ ನೀಡಿದೆ ಎಂದು ಬಿಜೆಪಿ ಸಂಸದ ಲಹರ್ ಸಿಂಗ್ ಸಿರೋಯ ಆರೋಪಿಸಿದ್ದಾರೆ.



ಕಲಬುರಗಿಯಲ್ಲಿರುವ ಇಂಟರ್‌ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಪಾಲಿ, ಸಂಸ್ಕೃತ ಅಂಡ್ ಕಂಪ್ಯಾರಿಟಿವ್ ಫಿಲಾಸಫಿ ಸಂಸ್ಥೆಯನ್ನು ಖರ್ಗೆ ಅವರ ಕುಟುಂಬದ ಟ್ರಸ್ಟ್ ನಡೆಸುತ್ತಿದೆ ಎಂದು ಸಿರೋಯ ಹೇಳಿದ್ದಾರೆ. ಈ ಟ್ರಸ್ಟ್‌ನಲ್ಲಿ ಖರ್ಗೆಯವರ ಪತ್ನಿ, ಅಳಿಯ ಹಾಗೂ ಇಬ್ಬರು (4ನೇ ಪುಟಕ್ಕೆ)

### ವಿವರಣೆ ಕೇಳಿದ ಗೆಹ್ಲೋಟ್

ಬೆಂಗಳೂರು, ಸೆ. 2 - ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು ಎಂಬ ಅರ್ಜಿಯ ಕುರಿತು ರಾಜ್ಯಪಾಲ ತಾವರ್ ಚಂದ್ ಗೆಹ್ಲೋಟ್ ಅವರು ರಾಜ್ಯ ಸರ್ಕಾರದಿಂದ ವಿವರಣೆ ಕೇಳಿದ್ದಾರೆ.

ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಅವರ ತಂದೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸದಸ್ಯರಾಗಿರುವ ಕುಟುಂಬ ನಡೆಸುವ ಟ್ರಸ್ಟ್‌ಗೆ ಜಮೀನು ನೀಡಿರುವ ಹಿನ್ನೆಲೆಯಲ್ಲಿ ಪ್ರಿಯಾಂಕ್ ಖರ್ಗೆ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು ಎಂದು (4ನೇ ಪುಟಕ್ಕೆ)

# ಕೆಪಿಎಸ್‌ಸಿ ಮರು ಪರೀಕ್ಷೆಗೆ ಸಿಎಂ ಆದೇಶ

ಬೆಂಗಳೂರು, ಸೆ. 2 - ಕರ್ನಾಟಕ ಲೋಕ ಸೇವಾ ಆಯೋಗ (ಕೆಪಿಎಸ್‌ಸಿ) ದ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಪೂರ್ವಭಾವಿ ಪರೀಕ್ಷೆಯ ಕನ್ನಡ ಅನುವಾದಿತ ಪ್ರಶ್ನೆಗಳು ಅಸಮರ್ಪಕವಾಗಿರುವ ಆರೋಪದ ಹಿನ್ನೆಲೆಯಲ್ಲಿ ಕರ್ತವ್ಯ ಲೋಪ ಎಸಗಿದ ಅಧಿಕಾರಿಗಳನ್ನು ಅಮಾನತ್ತು ಮಾಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶ ಹೊರಡಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಕೆಪಿಎಸ್‌ಸಿ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಪರೀಕ್ಷಾರ್ಥಿಗಳಿಗೆ ಅನ್ಯಾಯವಾಗಬಾರದು. ಮುಂದಿನ ಎರಡು ತಿಂಗಳಲ್ಲಿ ಮರು ಪರೀಕ್ಷೆ ನಡೆಸುವಂತೆ ಆಯೋಗಕ್ಕೆ ಸೂಚನೆ ನೀಡಿದ್ದಾರೆ.

ಮುಂದೆ ಕೈಗೊಳ್ಳಲಾಗುವ ಗೆಜೆಟೆಡ್ ಪ್ರೊಬೇಷನರಿ ಮರುಪರೀಕ್ಷೆಗಳನ್ನು ಅತ್ಯಂತ ಜವಾಬ್ದಾರಿ ಹಾಗೂ (4ನೇ ಪುಟಕ್ಕೆ)

# ದಾವಣಗೆರೆ ಮೇಯರ್ ಬಿಸಿಎ, ಉಪ ಮೇಯರ್ ಬಿಸಿಬಿ

ಬೆಂಗಳೂರು, ಸೆ.2- ದಾವಣಗೆರೆ ಮಹಾನಗರ ಪಾಲಿಕೆ ಮಹಾಪೌರ ಸ್ಥಾನಕ್ಕೆ ಬಿಸಿಎ ಮತ್ತು ಉಪ ಮಹಾಪೌರ ಸ್ಥಾನಕ್ಕೆ ಬಿಸಿಬಿ ಗೆ ಮೀಸಲಿರಿಸಿ ಸರ್ಕಾರ ಇಂದು ಆದೇಶ ಹೊರಡಿಸಿದೆ.

ರಾಜ್ಯದ ಎಲ್ಲಾ 10 ಮಹಾನಗರ ಪಾಲಿಕೆಗಳ ಮೇಯರ್ ಮತ್ತು ಉಪ ಮೇಯರ್ ಸ್ಥಾನಗಳಿಗೆ ಮೀಸಲಾತಿ ಕಲ್ಪಿಸಲಾಗಿದ್ದು, ಈ ಸಂಬಂಧ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

# ಮುಡಾ ಆಯುಕ್ತರಾಗಿದ್ದ ದಿನೇಶ್ ಸಸ್ಪೆಂಡ್

ಬೆಂಗಳೂರು, ಸೆ. 2 – ಮುಡಾದ ಹಿಂದಿನ ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ಅವರನ್ನು ಅಮಾನತ್ತು ಮಾಡಲಾಗಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸೈಟ್ ಹಂಚಿಕೆ ವಿವಾದದ ನಡುವೆ ದಿನೇಶ್ ಕುಮಾರ್ ಅವರನ್ನು ಹಾವೇರಿ ವಿಶ್ವವಿದ್ಯಾಲಯದ ಕುಲಸಚಿವರಾಗಿ ನೇಮಿಸಲಾಗಿತ್ತು. ಈಗ ರಾಜ್ಯಪಾಲರ ಆದೇಶದಂತೆ ಅವರನ್ನು ಅಮಾನತ್ತುಗೊಳಿಸಲಾಗಿದೆ. ದಿನೇಶ್ ಕುಮಾರ್ ವಿರುದ್ಧ ತನಿಖೆ ನಡೆಯುತ್ತಿದ್ದರೂ ಹಾವೇರಿ ವಿಶ್ವವಿದ್ಯಾಲಯದ ಕುಲಸಚಿವರನ್ನಾಗಿ ನೇಮಕ ಮಾಡಿರುವ ರಾಜ್ಯ ಸರ್ಕಾರದ ಕ್ರಮವನ್ನು ಬಿಜೆಪಿ ಟೀಕಿಸಿತ್ತು.

# ರೈತರ ಪ್ರತಿಭಟನೆ ಇತ್ಯರ್ಥಕ್ಕೆ ಸಮಿತಿ ರಚಿಸಿದ ಸುಪ್ರೀಂ

ನವದೆಹಲಿ, ಸೆ. 2 - ರೈತರ ಪ್ರತಿಭಟನೆಯನ್ನು ರಾಜಕೀಯಗೊಳಿಸಬಾರದು ಎಂದು ಹೇಳಿರುವ ಸುಪ್ರೀಂ ಕೋರ್ಟ್, ಶಂಭು ಗಡಿ ಬಳಿ ಪ್ರತಿಭಟನೆ ನಡೆಸುತ್ತಿರುವ ರೈತರ ದೂರುಗಳನ್ನು ಇತ್ಯರ್ಥ ಪಡಿಸಲು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಮಾಜಿ ನ್ಯಾಯಮೂರ್ತಿ ನವಾಬ್ ಸಿಂಗ್ ಅಧ್ಯಕ್ಷತೆಯಲ್ಲಿ ಉನ್ನತ ಹಂತದ ಸಮಿತಿಯೊಂದನ್ನು ರಚಿಸಿದೆ.

ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಉಜ್ಜಲ್ ಭುಯಾನ್ ಅವರನ್ನು ಒಳಗೊಂಡ ಪೀಠ ಈ ಬಗ್ಗೆ ಸೂಚನೆ ನೀಡಿದೆ. ಸಮಿತಿ ವಾರದ ಒಳಗೆ ತನ್ನ ಮೊದಲ ಸಭೆ ನಡೆಸಬೇಕು ಹಾಗೂ ಪ್ರತಿಭಟನಾ ನಿರತ ರೈತರನ್ನು ಭೇಟಿ ಮಾಡಿ ಹೆದ್ದಾರಿಯಿಂದ ಟ್ರ್ಯಾಕ್ಟರ್, ಟ್ರ್ಯಾಲಿ ಇತ್ಯಾದಿಗಳನ್ನು ತೆರವುಗೊಳಿಸಬೇಕು ಎಂದು ಸುಪ್ರೀಂಕೋರ್ಟ್ ಪೀಠ ಹೇಳಿದೆ.

ಪಂಜಾಬ್ ಹಾಗೂ ಹರಿಯಾಣ ಸರ್ಕಾರಗಳೆರಡೂ ಸಮಿತಿಗೆ ಸಲಹೆ ನೀಡಲು ಮುಕ್ತವಾಗಿವೆ ಎಂದು ಸುಪ್ರೀಂ ಕೋರ್ಟ್ ಪೀಠ ಹೇಳಿದೆ. ಈ ಸಮಿತಿಯಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಪಿ.ಎಸ್. ಸಂಧು, ದೇವೇಂದ್ರ ಶರ್ಮ, ಪ್ರಾಧ್ಯಾಪಕ (2ನೇ ಪುಟಕ್ಕೆ)

# ಬಿಎನ್‌ಎಂರ 'ಉತ್ತರೆ ಮಳೆ' ಕವಿತೆ ಬಿಎಸ್ಸಿ ತರಗತಿ ಪಠ್ಯಕ್ಕೆ ಆಯ್ಕೆ



ದಾವಣಗೆರೆ, ಸೆ. 2- ಸ್ಥಳೀಯ ಕವಿ - ಲೇಖಕ ಬಿ.ಎನ್. ಮಲ್ಲೇಶ್ ಅವರ 'ಟ್ರ್ಯಾಕುಗಳ ಮೇಲೆ ಹುಣ್ಣಿಮೆ' ಕವನ ಸಂಕಲನದಿಂದ 'ಉತ್ತರೆ ಮಳೆ' ಎಂಬ ಕವಿತೆಯನ್ನು ದಾವಣಗೆರೆ ವಿಶ್ವವಿದ್ಯಾಲಯದ ಪ್ರಥಮ ಬಿಎಸ್ಸಿ ತರಗತಿಗೆ ಪಠ್ಯವನ್ನಾಗಿ ಆಯ್ಕೆ ಮಾಡಲಾಗಿದೆ. ವಿಶ್ವವಿದ್ಯಾಲಯದ ಸ್ನಾತಕ ಅಧ್ಯಯನ ಕೇಂದ್ರದ ಅಧ್ಯಕ್ಷ (4ನೇ ಪುಟಕ್ಕೆ)

## ದ್ವಿತೀಯ ವರ್ಷದ ಪುಣ್ಯಸ್ಮರಣೆ



**ಲಿಂ।। ಶ್ರೀ ಹವಳದ ಮೌನೇಶಪ್ಪ**

ನಿಧನ : 03.09.2022

ಸರ್ವರಿಗೂ ಸಮಪಾಲು, ಸರ್ವರಿಗೆ ಸಮಬಾಳು ಎಂಬ ಕಲ್ಪನೆಯೊಂದಿಗೆ ಕಾಯಕವೇ ಕೈಲಾಸವೆಂಬ ತತ್ವದೊಂದಿಗೆ ನಮ್ಮ ಮನೆ - ಮನಗಳಲ್ಲಿ ದೀಪ ಮುಡಿಸಿ, ಶಿಸ್ತು-ಸಂಸ್ಕೃತಿ-ಸಂಸ್ಕಾರ ಕಲಿಸಿದ್ದೀರಿ. ನಮಗೆ ನೀಡಿದ ಮಮಕಾರ, ಪ್ರೀತಿ-ವಾತ್ಸಲ್ಯಕ್ಕಾಗಿ ನಾವು ಸದಾ ಚಿರಋಣಿ.


ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಬೇಡುವ.

ಪತ್ನಿ : ಶ್ರೀಮತಿ ಅನ್ನಪೂರ್ಣಮ್ಮ

ಮಕ್ಕಳಾದ : ವಿಶ್ವನಾಥ್ ಹೆಚ್.ಎಂ. ಮತ್ತು ಶ್ರೀಮತಿ ಅಮಿತಾ ಶಿವಶಂಕರಪ್ಪ, ಹೆಚ್.ಎಂ., ಶಿವಾನಂದ ಹೆಚ್.ಎಂ.

ಮೊಮ್ಮಗಳು : ಸಹನಾ ಹಾಗೂ ಹವಳದ ವಂಶಸ್ಥರು, ಬಂಧು-ಮಿತ್ರರು.

## ದಾವಣಗೆರೆ ತಾಲ್ಲೂಕು ಮಳಲಕೆರೆ ಗ್ರಾಮದ ಎಂ.ಎಸ್. ಸೋಮಶೇಖರಯ್ಯ ನಿಧನ



ದಾವಣಗೆರೆ ತಾಲ್ಲೂಕು ಮಳಲಕೆರೆ ವಾಸಿ ದಿ।। ಎಂ. ಸಿದ್ದಪ್ಪಯ್ಯನವರ ಹಿರಿಯ ಪುತ್ರ ಮಳಲಕೆರೆ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷರಾದ

**ಶ್ರೀ ಎಂ. ಎಸ್. ಸೋಮಶೇಖರಯ್ಯ**

ಇವರು ದಿನಾಂಕ 2.9.2024ರ ಸೋಮವಾರ ಬೆಳಿಗ್ಗೆ 9.15ಕ್ಕೆ ನಿಧನರಾದರು. ಮೃತರಿಗೆ 86 ವರ್ಷ ವಯಸ್ಸಾಗಿತ್ತು, ಪತ್ನಿ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 3.9.2024ರ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ದಾವಣಗೆರೆ ತಾಲ್ಲೂಕು ಮಳಲಕೆರೆ ಗ್ರಾಮದಲ್ಲಿ ನೆರವೇರಿಸಲಾಗುವುದು.

: ದುಃಖತಪ್ತರು :

ಪತ್ನಿ : ಶ್ರೀಮತಿ ಸುವರ್ಣಮ್ಮ ಸೋಮಶೇಖರಯ್ಯ, ಸಹೋದರರು, ಸಹೋದರಿಯರು ಮತ್ತು ಕುಟುಂಬದವರು ಹಾಗೂ ಮಳಲಕೆರೆ ಗ್ರಾಮಸ್ಥರು. ಮೊ : 99027 57307


INSIGHTSIAS SIMPLIFYING IAS EXAM PREPARATION INSTAKAS




ಕೆ.ಪಿ.ಎಸ್.ಸಿ ಪ್ರಿಲಿಮ್ಸ್-ಕಮ್-ಮೇನ್ಸ್ ಕೋರ್ಸ್ @ದಾವಣಗೆರೆಯಲ್ಲಿ

ಬ್ಯಾಚ್ - 1 | ಪ್ರಾರಂಭ-9ನೇ ಸೆಪ್ಟೆಂಬರ್ 2024

ಕಾರ್ಯಕ್ರಮದ ಅವಧಿ - 7 ರಿಂದ 8 ತಿಂಗಳು

ತರಗತಿಯ ಮಾಧ್ಯಮ - ಇಂಗ್ಲಿಷ್ ಹಾಗು ಕನ್ನಡ

ಚಂದಾದಾರರಾಗಿರಿ



ವಿನಯ್ ಸರ್ ಮಾರ್ಗದರ್ಶನದಲ್ಲಿ ಸ್ಥಾಪಕರು ಮತ್ತು ನಿರ್ದೇಶಕರು, ಇನ್‌ಸೈಟ್ಸ್ ಐಎಎಸ್

ವೈಶಿಷ್ಟ್ಯತೆಗಳು

- ಇನ್ಸ್ಟಾ ಕೆಎಎಸ್-ದಾವಣಗೆರೆಯಲ್ಲಿ ಮತ್ತು ಇನ್ಸ್ಟಾ ಕೆಎಎಸ್- ಬೆಂಗಳೂರಿನ ಅಧ್ಯಾಪಕರು ಒಂದೇ ಆಗಿರುತ್ತಾರೆ
- ದ್ವಿಭಾಷಾ ಭೋಧನಾ ಮಾಧ್ಯಮ -(ಇಂಗ್ಲಿಷ್ ಮತ್ತು ಕನ್ನಡ)
- ಪೂರ್ವಭಾವಿ ಹಾಗು ಮುಖ್ಯ ಪರೀಕ್ಷೆಗಾಗಿ ಸಂಯೋಜಿತ ತರಗತಿಗಳು
- ಮುಖ್ಯ ಪರೀಕ್ಷೆಗೆ ಉತ್ತರ ಬರೆಯುವ ಅಭ್ಯಾಸಕ್ಕೆ ಒತ್ತು ನೀಡುವುದು
- ವೈಯಕ್ತಿಕ ಮಾರ್ಗದರ್ಶನ ಸೌಲಭ್ಯ
- ಅರ್ಹತಾ ಪತ್ರಿಕೆಗಾಗಿ ರೆಕಾರ್ಡ್ ಮಾಡಿದ ಇಂಗ್ಲಿಷ್ ವ್ಯಾಕರಣ ತರಗತಿಗಳನ್ನು ಒದಗಿಸಲಾಗುತ್ತದೆ
- ಉಚಿತ ಅನನ್ಯ ಸಾಧನ (ಪ್ರಚಲಿತ ವಿದ್ಯಮಾನಗಳ ಕನ್ನಡ ಮಾಸಪತ್ರಿಕೆ)
- ಅಧ್ಯಯನ ಸಾಮಗ್ರಿಗಳು ಮತ್ತು ವಿದ್ಯುನ್ಮಾನ ಪ್ರತಿಗಳನ್ನು ಒದಗಿಸಲಾಗುವುದು (ಸಾಫ್ಟ್ ಕಾಪಿ) ಉಚಿತ ಪೂರ್ವಭಾವಿ ಹಾಗು ಮುಖ್ಯ ಪರೀಕ್ಷಾ ಸರಣಿ




FEE:

ದಾವಣಗೆರೆಯಲ್ಲಿ (ಆಫ್ ಲೈನ್) ~~ರೂ. 50000~~ incl. taxes

₹ 42,500/-

ಆರಂಭಿಕ ಕೊಡುಗೆ ರಿಯಾಯಿತಿ 15% DISCOUNT

ದಾವಣಗೆರೆ ಕಚೇರಿ: #1092, ಜಾಧವ ಕಾಂಪ್ಲೆಕ್ಸ್, ರಿಂಗ್ ರೋಡ್, ನಿಜಲಿಂಗಪ್ಪ ಬಡಾವಣೆ, ಎಜು ಏಷ್ಯಾ ಶಾಲೆ ಎದುರು, ದಾವಣಗೆರೆ, ಕರ್ನಾಟಕ.577004

ಸಂಪರ್ಕ: 08069405206

ಮೇಲ್: support@insightsias.com

www.insightsonindia.com instacourses.insightsonindia.com

ಶಾಖೆಗಳು: ಬೆಂಗಳೂರು | ದೆಹಲಿ | ಲಕ್ನೋ | ಹೈದರಾಬಾದ್ | ಶ್ರೀನಗರ | ಧಾರವಾಡ

# ವಿಮಾ ರಂಗದಲ್ಲಿ ಭಾರತೀಯ ಜೀವ ವಿಮೆ ನಿಗಮ ಅಗ್ರಗಣ್ಯ



## ವಿಮಾ ಸಪ್ತಾಹದಲ್ಲಿ ಹರಪನಹಳ್ಳಿ ಶಾಖಾಧಿಕಾರಿ ಹೆಚ್.ಜಿ.ರಾಜೇಶ್

ಹರಪನಹಳ್ಳಿ, ಸೆ.2- ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರು ಹಾಗೂ ಹಣಕಾಸು ಸಚಿವರಾದ ಸಿ.ಡಿ.ದೇಶಮುಖ್ ರವರ ದೂರದೃಷ್ಟಿಯ ಧ್ಯೋತಕವಾಗಿ 1956 ಸೆ.1 ರಂದು ರಾಷ್ಟ್ರೀಕರಣಗೊಂಡ ಭಾರತೀಯ ಜೀವ ವಿಮಾ ನಿಗಮ ಇಂದಿಗೂ ಅನೇಕ ಖಾಸಗಿ ವಿಮಾ ಕಂಪನಿಗಳ ಪೈಪೋಟಿಗಳ ಮಧ್ಯೆಯೂ ಮುಂಚೂಣಿ ವ್ಯವಹಾರದ ಮೂಲಕ ವಿಮಾ ರಂಗದಲ್ಲಿ ಅಗ್ರಗಣ್ಯ ಸಂಸ್ಥೆಯಾಗಿದೆ ಎಂದು ಹರಪನಹಳ್ಳಿ ಶಾಖಾಧಿಕಾರಿ ಹೆಚ್.ಜಿ.ರಾಜೇಶ್ ಹೇಳಿದರು.

ಪಟ್ಟಣದ ಭಾರತೀಯ ಜೀವ ವಿಮಾ ನಿಗಮದ ಕಚೇರಿಯಲ್ಲಿ ಜರುಗಿದ 68 ನೇ ವರ್ಷದ ವಿಮಾ ಸಪ್ತಾಹ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜನರು ನಮ್ಮ ವಿಮಾ ಸಂಸ್ಥೆಯಲ್ಲಿ ಇಟ್ಟಿರುವ ನಂಬಿಕೆ ಮತ್ತು ವಿಶ್ವಾಸವೇ ಕಾರಣ. ಸಂಸ್ಥೆಯಲ್ಲಿ ಪ್ರತಿನಿಧಿಗಳ ಅವಿರತ ಶ್ರಮ, ಸಿಬ್ಬಂದಿಗಳ ಪ್ರಾಮಾಣಿಕ ಸೇವೆಯಿಂದ ಸಾಧ್ಯವಾಗಿದೆ ಎಂದರು.

ವಿಮಾ ನೌಕರರ ಸಂಘದ ಅಧ್ಯಕ್ಷ ಕೆ. ಹನುಮಂತಪ್ಪ ಮಾತನಾಡಿ, ಸಂಸ್ಥೆಯು ಕೇಂದ್ರ ಸರ್ಕಾರಕ್ಕೆ ಪಂಚವಾರ್ಷಿಕ ಯೋಜನೆಗಳ ಮುಖಾಂತರ ಹಣ ಒದಗಿಸುತ್ತಿದೆ ಎಂದರು.

ಆಡಳಿತಾಧಿಕಾರಿ ಕೆ.ಹೆಚ್ ಬಸವರಾಜ್ ಮಾತನಾಡಿ, ಅವಧಿ ಮುಗಿದ ಹಾಗೂ ಮರಣ ದಾವೆ ಹಣ ಕೊಡುವಲ್ಲಿ ಎಲ್‌ಐಸಿ ಮಂಚೂಣಿಯಲ್ಲಿದ್ದು, ಪಾಲಿಸಿದಾರರಿಗೆ ಉತ್ತಮ ಸೌಲಭ್ಯ ಒದಗಿಸುತ್ತಿದೆ ಎಂದರು.

ಶಾಖೆಯ ಇಂದಿನ ಪ್ರಥಮ ಪಾಲಿಸಿದಾರ ಸಣ್ಣ ರಂಗಪ್ಪ ಆರಂಭದಲ್ಲಿ ಜ್ಯೋತಿ ಬೆಳಗಿಸಿ ಚಾಲನೆ ನೀಡಿದರು.

ಉಪ ಶಾಖಾಧಿಕಾರಿ ಅಜಿತ್ ರಾಯರೆಡ್ಡಿ, ಅಭಿವೃದ್ಧಿ ಅಧಿಕಾರಿ ಸಿದ್ದರಾಮೇಶ, ವೆಂಕಪ್ಪ ಗೊಲ್ಲರ, ನೌಕರರ ಸಂಘದ ಕಾರ್ಯದರ್ಶಿ ನಾಗನಗೌಡ, ಪ್ರತಿನಿಧಿಗಳ ಸಂಘದ ಅಧ್ಯಕ್ಷ ಎಂ. ಅಂಬಣ್ಣ, ರಾಯಚೂರು ವಿಭಾಗೀಯ ಮುಖ್ಯ ಜೀವ ವಿಮಾ ಸಲಹೆಗಾರರ ವಿಭಾಗೀಯ ಅಧ್ಯಕ್ಷ ಹೇಮಣ್ಣ ಮೋರಿಗೇರಿ ಮಾತನಾಡಿದರು.

ಸಹಾಯಕ ಆಡಳಿತಾಧಿಕಾರಿಗಳಾದ ಹಿಮಾಂಶು, ಶಿವಕುಮಾರ್, ವೆಂಕಟೇಶ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಗ್ರಾಮೀಣಾಭಿವೃದ್ಧಿಯೇ ಸರ್ಕಾರದ ಆದ್ಯತೆ

## ಗುಡ್ಡದಹಟ್ಟಿ ಗ್ರಾಮಕ್ಕೆ ಬಸ್ ಸಂಚಾರ ಆರಂಭಕ್ಕೆ ಚಾಲನೆ ನೀಡಿದ ಸಂಸದೆ ಡಾ. ಪ್ರಭಾ



ಮಾಯಕೊಂಡ, ಸೆ.2- ರಸ್ತೆ, ಆಸ್ಪತ್ರೆ, ಅಂಗನವಾಡಿ ಅಭಿವೃದ್ಧಿಪಡಿಸಿ, ಆರೋಗ್ಯಕರ ಸಮಾಜ ನಿರ್ಮಿಸಲು, ಎಲ್ಲರೂ ಸರ್ಕಾರದೊಂದಿಗೆ ಕೈಜೋಡಿಸಬೇಕು ಎಂದು ಸಂಸತ್ ಸದಸ್ಯೆ ಡಾ. ಪ್ರಭಾ ಮಲ್ಲಿಕಾರ್ಜುನ್ ಕರೆ ನೀಡಿದರು.

ಸಮೀಪದ ನರಗನಹಳ್ಳಿಯ ಗುಡ್ಡದಹಟ್ಟಿ ಗ್ರಾಮಕ್ಕೆ ಸೋಮವಾರ ಬಸ್ ಸಂಚಾರ ಆರಂಭಕ್ಕೆ ಚಾಲನೆ ನೀಡಿ ಮಾತನಾಡಿದರು.

ಚುನಾವಣಾ ಪ್ರಚಾರದಲ್ಲಿಯೇ ರಸ್ತೆ ಬೇಡಿಕೆ ಗಮನಿಸಿದ್ದೇನೆ. ಇಲ್ಲಿನ ವಿದ್ಯಾರ್ಥಿಗಳು ಹೆಚ್ಚಿನ ಶಿಕ್ಷಣಕ್ಕೆ ನರಗನಹಳ್ಳಿಗೆ ನಡೆದು ಹೋಗುವುದು ನೋವು ತಂದಿದೆ. ದಾವಣಗೆರೆಲ್ಲಿಯೇ ಕೂರದೇ, ಹಳ್ಳಿಗಳ ಭೇಟಿ ಮಾಡುವೆ. ಅಂಗನವಾಡಿ, ಆಸ್ಪತ್ರೆ ಅಭಿವೃದ್ಧಿಪಡಿಸಿದರೆ ಸಮುದಾಯದ ಆರೋಗ್ಯ ಕಾಪಾಡಬಹುದು. ಹಳ್ಳಿಗಳ, ಬಡವರ ಉದ್ದಾರಕ್ಕೆ ಸರ್ಕಾರ ಆದ್ಯತೆ ನೀಡುತ್ತಿದೆ ಎಂದರು.

ಪ್ರಾಥಮಿಕ ಶಾಲೆ ಇರುವ ಊರಿನಿಂದ ಕಾಲೇಜು, ಹೈಸ್ಕೂಲ್ ಇರುವ ಕಡೆಗೆ ಸಾರಿಗೆ ಸಂಪರ್ಕ ಕಲ್ಪಿಸಲಾಗುತ್ತದೆ. ಹಳೇ ವಿದ್ಯಾರ್ಥಿಗಳು ಸಂಘ ರಚಿಸಿಕೊಂಡು ತಾವು ಓದಿದ ಶಾಲೆಗಳ ಉದ್ದಾರಕ್ಕೆ ಶ್ರಮಿಸಬೇಕು. ಸರ್ಕಾರದ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣವಿದ್ದರೂ ಸೌಕರ್ಯದ ಕೊರತೆಯಿದೆ. ಅಭಿವೃದ್ಧಿಗಾಗಿ ಸರ್ಕಾರದ ಜತೆ ನಾಗರಿಕರು, ಯುವಕರು ಎಲ್ಲರೂ ಕೈಜೋಡಿಸಬೇಕು, ಎಂದು ಕರೆ ನೀಡಿದರು.

ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ, ಬಸ್ ಇಲ್ಲದೇ ಪರದಾಡುತ್ತಿದ್ದ ಗುಡ್ಡದಹಟ್ಟಿ ಗ್ರಾಮಸ್ಥರ ಸಂಕಷ್ಟ ಬಗೆಹರಿದಿದೆ. ಕಾಂಗ್ರೆಸ್ ಸರ್ಕಾರ ಉಚಿತ ಬಸ್ ಪ್ರಯಾಣ ನೀಡಿದೆ. ಈ ಊರಿನ ಎಲ್ಲಾ ಸಮಸ್ಯೆಗಳಿಗೆ ಸ್ಪಂದಿಸುತ್ತೇನೆ. ಶಾಲೆಗೆ ಕಾಂಪೌಂಡ್, ದೇವಸ್ಥಾನ ನಿರ್ಮಾಣ ಮಾಡಲಾಗುತ್ತದೆ. ಸಿರಿಗೆರೆ ಶ್ರೀಗಳಿಗೆ ನೀಡಿದ ಮಾತಿನಂತೆ 8 ಕೋಟಿ ರೂ. ಬಿಡುಗಡೆ ಮಾಡಿಸಿದ್ದೇನೆ. ಮಾಯಕೊಂಡ ಕ್ಷೇತ್ರದಲ್ಲಿಯೇ ಅತೀ ಹೆಚ್ಚು ರಸ್ತೆ ಹಾಳಾಗಿದ್ದು, ಶೀಘ್ರ ಸರಿಪಡಿಸುತ್ತೇನೆ. ಪಡಿತರ ವಿತರಣೆ, ಮತಗಟ್ಟೆ ವ್ಯವಸ್ಥೆ ಮಾಡಿಸುತ್ತೇವೆ. ಮಾಯಕೊಂಡ ಬುಳ್ಳಾಪುರದ ಕೆರೆ ನಿರ್ಮಾಣ ಮಾಡಲು ಯೋಜನೆ ರೂಪಿಸಲಾಗಿದೆ. ಹಿಂದಿನ ಸರ್ಕಾರದಲ್ಲಿ ನಿರ್ಮಿಸಿದ 22 ಕೆರೆ ಏತ ನೀರಾವರಿ ಯೋಜನೆ ಕಳಪೆಯಾಗಿದೆ. ಹೊಸ ಪೈಪ್ ಲೈನ್ ಮಾಡಿಸಲು ಕ್ರಮಕೈಗೊಳ್ಳಲಾಗಿದೆ ಎಂದರು.

ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ, ಗ್ರಾಮಸ್ಥರ ಕೋರಿಕೆ ಗಮನಿಸಲಾಗಿದೆ. ಬೇಡಿಕೆಗೆ ಒತ್ತಯಿಸಿದಂತೆ ಊರನ್ನೂ ಸ್ವಚ್ಛವಿರಿಸಬೇಕು. ದೇಗುಲದಂತೆ ಶಾಲೆಗಳೂ ಸ್ವಚ್ಛವಾಗಿರಬೇಕು. ಸ್ವಚ್ಛತೆ ಗ್ರಾಮಸ್ಥರ ಸ್ವಂತ ಜವಾಬ್ದಾರಿಯಾಗಬೇಕು ಎಂದರು.

ಕೆಎಸ್‌ಆರ್‌ಟಿಸಿ ಜಿಲ್ಲಾ ನಿಯಂತ್ರಣಾಧಿಕಾರಿ ಸಿದ್ದೇಶ್ವರ ಹೆಬ್ಬಾಳು, ಡಿಡಿಪಿಐ ಕೊಟ್ರೇಶ್, ಗ್ರಾಮ ಪಂಚಾಯತಿ ಅಧ್ಯಕ್ಷೆ ಆಶಾ ನಾಗರಾಜ್, ಉಪಾಧ್ಯಕ್ಷೆ ಆಶಾ ಸಂತೋಷ್, ಮಾಜಿ ಉಪಾಧ್ಯಕ್ಷ ಚಂದ್ರಶೇಖರ್, ತಹಶೀಲ್ದಾರ್ ಅಶ್ವಥ, ಇ. ಓ. ರಾಮಬೋವಿ, ಉಪ ತಹಶಿಲ್ದಾರ ರಾಮಸ್ವಾಮಿ, ಪಿಎಸ್ ಐ ಅಜ್ಜಪ್ಪ, ಮುಖಂಡರಾದ ಕುಮಾರ್, ದೇವೆಂದ್ರಪ್ಪ, ಹನುಮಂತಪ್ಪ, ಸಿದ್ದೇಶ್, ಮಾಯಕೊಂಡ ಹನುಮಂತಪ್ಪ, ರುದ್ರೇಶ್ ಮತ್ತಿತರರಿದ್ದರು.

ಮಲ್ಲೇಶ್ ಸ್ವಾಗತಿಸಿದರು. ಶಿಕ್ಷಕ ಉಮಾಪತಿ ನಿರೂಪಿಸಿದರು.

### ಸಂಭ್ರಮ....ಸಮಸ್ಯೆಗಳ ಸರಮಾಲೆ

ಗ್ರಾಮಸ್ಥರು ಅಧಿಕಾರಿಗಳ ಜನಪ್ರತಿನಿಧಿಗಳ ಆಗಮನದಿಂದ, ಬಹುದಿನದ ಬಸ್ ಸಂಚಾರದ ಬೇಡಿಕೆ ಈಡೇರಿದ್ದರಿಂದ ಸಂಭ್ರಮಿಸಿದರು. ಊರನ್ನು ತಳಿರು ತೋರಣದಿಂದ ಸಿಂಗರಿಸಿದ್ದರು. ಊರಿಗೆ ಬಂದ ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ, ಸಿಇಒ ಇಟ್ನಾಳ್ ಎದುರು ನಾಮುಂದು, ತಾಮುಂದು ಎಂದು ಸಮಸ್ಯೆ ವಿವರಿಸಲು ಮುಂದಾದರು.

ನರಗನಹಳ್ಳಿಗೆ ಪಿಎಚ್ಸಿ ಮಂಜೂರು ಮಾಡಿ, ಗೊಲ್ಲರಹಟ್ಟಿ ಶಾಲೆಯ ಛಾವಣಿ ಕುಸಿದಿದೆ, ಪಡಿತರ ಸಿಗೊಲ್ಲ, ಶಾಲೆ ಬೀಳುವಂತಿದೆ, ಚರಂಡಿ ಇಲ್ಲ, ಮನೆಗೆ ನೀರು ನುಗ್ಗುತ್ತೆ, ಬಂದು ನೋಡಿ ಎಂದು ಕೆಲವರು ಪದೇ ಪದೇ ದುಂಬಾಲುಬಿದ್ದರು. ವೇದಿಕೆ ಮುಂದೂ ಕಿರಿಕಿರಿ ಮಾಡಿದರು. ಕೆಲವರು ಗೃಹ ಲಕ್ಷ್ಮೀ ಹಣನೇ ಬಂದಿಲ್ಲ, ಆಶ್ರಯ ಮನೆ ಕೊಟ್ಟಿಲ್ಲ ಎಂದೂ ದೂರಿದರು.

ಸಂಸತ್ ಸದಸ್ಯೆ ಡಾ. ಪ್ರಭಾ ಮಲ್ಲಿಕಾರ್ಜುನ, ಶಾಸಕ ಬಸವಂತಪ್ಪ, ಜಿಲ್ಲಾಧಿಕಾರಿ ಹಸಿರು ನಿಶಾನೆ ತೋರಿ, ಬಸ್‌ಗೆ ಚಾಲನೆ ನೀಡಿದರು. ವಿದ್ಯಾರ್ಥಿಗಳೊಂದಿಗೆ ಬಸ್ಸಿನಲ್ಲಿ ಕೂತು ಪ್ರಯಾಣಿಸಿದರು. ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಸಮಸ್ಯೆ ಆಲಿಸಿದರು.

# ಹೊಂಡದ ರಸ್ತೆ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ



ದಾವಣಗೆರೆ, ಸೆ. 2- ನಗರದ ಹೊಂಡದ ರಸ್ತೆ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವು ಎಸ್‌ಪಿಎಸ್ ನಗರ 2ನೇ ಹಂತದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಿನ್ನೆ ನಡೆಯಿತು.

ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಸುಧಾ ಇಟ್ಟಿಗುಡಿ ಮಂಜುನಾಥ್ ಕಾರ್ಯಕ್ರಮ ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜಿ. ಕೊಟ್ರೇಶ್, ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಆರ್. ಶೇರ್ ಅಲಿ, ಉತ್ತರ ವಲಯ ಕ್ಷೇತ್ರ ಸಮನ್ವಯಾಧಿಕಾರಿ ಫಸೀಹ್ ಉದ್ದೀನ್ ಶಾಕೀರ್, ಎಸ್‌ಡಿಎಂಸಿ ಅಧ್ಯಕ್ಷರಾದ ಶ್ರೀಮತಿ ಬಿ. ನಿರ್ಮಲ, ಉಪಾಧ್ಯಕ್ಷ ಕೆ.ಸಿ. ಮಂಜುನಾಥ್, ಪದವೀಧರೇತರ ಮುಖ್ಯೋಪಾಧ್ಯಾಯ ಎನ್.ವಿ. ನಾಗರಾಜನಾಯ್ಕ್, ಸಂಪನ್ಮೂಲ ವ್ಯಕ್ತಿ ಹೆಚ್.ಎಸ್. ಜ್ಯೋತಿ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಆರ್. ವಾಸುದೇವ, ಕೆ.ಎಸ್. ಬಸವರಾಜ್, ರವಿಶಂಕರ್, ಶ್ರೀಮತಿ ಪದ್ಮ, ಶ್ರೀಮತಿ ಶೋಭಾರಾಣಿ, ಅಕ್ರಂ ಭಾಷಾ, ಶ್ರೀಮತಿ ಸುಜಾತ, ಶ್ರೀಮತಿ ಜ್ಯೋತಿ ಮತ್ತು ಶಿಕ್ಷಕರು ಉಪಸ್ಥಿತರಿದ್ದರು.

# ಜಿಗಳಿಯಲ್ಲಿ ಸಿದ್ಧಾರೂಢರ ಪುರಾಣ



ಮಲೇಬೆನ್ನೂರು, ಸೆ.2- ಜಿಗಳಿ ಗ್ರಾಮದ ಶ್ರೀ ಸಿದ್ಧಾರೂಢರ ಮಠದಲ್ಲಿ ಶ್ರಾವಣದ ಮಾಸದ ಅಂಗವಾಗಿ ಕಳೆದ ಒಂದು ತಿಂಗಳಿನಿಂದ ನಡೆದುಕೊಂಡ ಬಂದ ಶ್ರೀ ಸದ್ಗುರು ಸಿದ್ಧಾರೂಢರ ಪುರಾಣ ಸೋಮವಾರ ಮುಕ್ತಾಯಗೊಂಡಿತು.

ಗ್ರಾಮದ ಮುಖಂಡರಾದ ಜಿ.ಆನಂದಪ್ಪ, ಬಿ.ಎಂ.ದೇವೇಂದ್ರಪ್ಪ, ಗೌಡ್ರ ಬಸವರಾಜಪ್ಪ, ಎಂ.ಜಯಣ್ಣ, ಶ್ರೀಮತಿ ಕೆಂಚಮ್ಮ, ಪಿಎಸಿಎಸ್ ಸಿಇಓ ಎನ್. ಎನ್.ತಳವಾರ್, ನಿವೃತ್ತ ಶಿಕ್ಷಕರಾದ ಡಿ.ರವೀಂದ್ರಪ್ಪ, ಜಿ.ಆರ್.ನಾಗರಾಜ್, ಪತ್ರಕರ್ತ ಪ್ರಕಾಶ್, ಕುಂಬಳೂರು ವಾಸು ಸೇರಿದಂತೆ ಗ್ರಾಮದ ಅನೇಕರು ಪುರಾಣ ಮುಕ್ತಾಯ ಪೂಜೆಯಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ಪುರಾಣ ಓದಿದ ಕೆ.ಜಯಪ್ಪ ಅವರನ್ನು ಗೌರವಿಸಲಾಯಿತು. ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.


# ಡೆಂಗ್ಯೂ ಜ್ವರ : ಲಿಂಗಪುರ ವಿಮಲಾ ಸಾವು



ಹೊನ್ನಾಳಿ, ಸೆ. 2 - ತಾಲ್ಲೂಕಿನ ಲಿಂಗಾಪುರ ಗ್ರಾಮದ 27 ವರ್ಷದ ವಿಮಲ ನಾಗರಾಜ್ ಡೆಂಗ್ಯೂ ಜ್ವರದಿಂದ ಸಾವಿಗೀಡಾಗಿದ್ದಾರೆ. ಆಗಸ್ಟ್ 27ರಿಂದ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಸೆಪ್ಟೆಂಬರ್ 1ರ ತಡರಾತ್ರಿ ಮೃತಪಟ್ಟಿದ್ದಾರೆ. ಮೂವರು ಗಂಡು ಮಕ್ಕಳನ್ನು ಅಗಲಿದ್ದಾರೆ.

### ಭದ್ರಾ ಜಲಾಶಯ

ನೀರಿನ ಮಟ್ಟ : 183 ಅಡಿ
ಒಳ ಹರಿವು : 7128 ಕ್ಯೂಸೆಕ್ಸ್
ಹೊರ ಹರಿವು : 5948 ಕ್ಯೂಸೆಕ್ಸ್
ಕಳೆದ ವರ್ಷ : 163 ಅಡಿ 9 ಇಂಚು



### ದಿದ್ದಿಗೆ ಮಹದೇವಪ್ಪನವರಿಗೆ ಮಾತೃ ವಿಯೋಗ



ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು ದಿದ್ದಿಗೆ ಗ್ರಾಮದ

**ಕೆಂಚಾಪುರದ ರತ್ನಮ್ಮ**

ಇವರು ದಿನಾಂಕ 2.9.2024ರ ಸೋಮವಾರ ಬೆಳಿಗ್ಗೆ 9.45ಕ್ಕೆ ನಿಧನರಾದರು. ಮೃತರಿಗೆ 76 ವರ್ಷ ವಯಸ್ಸಾಗಿತ್ತು, ಪುತ್ರ, ಪುತ್ರಿ, ಸಹೋದರ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ಅಂದೇ ದಿನಾಂಕ 2.9.2024ರ ಸೋಮವಾರ 3 ಗಂಟೆಗೆ ಜಗಳೂರು ತಾಲ್ಲೂಕು ದಿದ್ದಿಗೆ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಯಿತು.

**ದುಃಖತಪ್ತ ಕುಟುಂಬ ವರ್ಗದವರು, ಮೊ : 9972699813**

### ಶ್ರೀಮತಿ ಜೆ.ಎನ್.ಪದ್ಮಾವತಿ ನಿಧನ



ದಾವಣಗೆರೆ ವಿನೋಬನಗರ 4ನೇ ಮೇನ್, 3ನೇ ಕ್ರಾಸ್ ವಾಸಿ, ಡಿ.ಇ.ಎ.ವಿದ್ಯಾಸಂಸ್ಥೆ ನಿವೃತ್ತ ಮುಖ್ಯೋಪಾಧ್ಯಾಯರಾಗಿದ್ದ ದಿವಂಗತ ವೆಂಕಟರಮಣಶ್ರೇಷ್ಠಿಯವರ ಧರ್ಮಪತ್ನಿ

**ಶ್ರೀಮತಿ ಜೆ.ಎನ್.ಪದ್ಮಾವತಿ**

ಇವರು ದಿನಾಂಕ : 2.9.2024ರ ಸೋಮವಾರ ಸಂಜೆ 7 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 72 ವರ್ಷ ವಯಸ್ಸಾಗಿತ್ತು. 3 ಜನ ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 3.9.2024ರ ಮಂಗಳವಾರ ಮಧ್ಯಾಹ್ನ 12.30ಕ್ಕೆ ನಗರದ ಆರ್.ಹೆಚ್.ಬೃಂದಾವನದಲ್ಲಿ ನೆರವೇರಲಿದೆ.

**ದು:ಖತಪ್ತ ಕುಟುಂಬ ವರ್ಗ : ನಾಗರಾಜ್ ಗುಪ್ತ : 9986055311, ಸುಧೀಂದ್ರ ಗುಪ್ತ : 9886042840, ನಿರಂಜನ್ ಗುಪ್ತ - 9986446395**

# ಇತ್ಯರ್ಥಕ್ಕೆ ಸಮಿತಿ ರಚಿಸಿದ ಸುಪ್ರೀಂ ಕೋರ್ಟ್

(1ನೇ ಪುಟದಿಂದ) ರಣಜಿತ್ ಸಿಂಗ್ ಗುಮನ್ ಹಾಗೂ ಕೃಷಿ ಪರಿಣಿತ ಡಾ. ಸುಖಪಾಲ್ ಸಿಂಗ್ ಅವರಿದ್ದಾರೆ.

ಪ್ರತಿಭಟನಾ ನಿರತ ರೈತರು ರಾಜಕೀಯ ಪಕ್ಷಗಳಿಂದ ಅಂತರ ಕಾಯ್ದುಕೊಳ್ಳಬೇಕು ಹಾಗೂ ಈಡೇರಿಸಲು ಸಾಧ್ಯವಾಗದೇ ಇರುವ ಬೇಡಿಕೆಗಳನ್ನು ಮುಂದಿಡಬಾರದು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ರೈತರು ತಮ್ಮ ಶಾಂತಿಯುತ ಪ್ರತಿಭಟನೆಯನ್ನು ಬೇರೆ ಕಡೆ ಸ್ಥಳಾಂತರಿಸಲು ಮುಕ್ತವಾಗಿದ್ದಾರೆ ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.

ಶಂಭು ಗಡಿಯಲ್ಲಿ ಅಳವಡಿಸಲಾಗಿರುವ ಬ್ಯಾರಿಕೇಡ್‌ಗಳನ್ನು ವಾರದಲ್ಲೇ ತೆರವುಗೊಳಿಸಬೇಕು ಎಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ, ಹರಿಯಾಣ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿತ್ತು. ಕಳೆದ ಫೆಬ್ರುವರಿ 13 ರಿಂದ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ.

ಬೇಡಿಕೆ ಈಡೇರಿಕೆಗಾಗಿ ದೆಹಲಿ ಕಡೆ ತೆರಳುವುದಾಗಿ ಸಂಯುಕ್ತ ಕಿಸಾನ್ ಮೋರ್ಚಾ ಹಾಗೂ ಕಿಸಾನ್ ಮೋರ್ಚಾಗಳು ಘೋಷಿಸಿದ್ದು. ನಂತರ ಹರಿಯಾಣ ಸರ್ಕಾರವು ಅಂಬಾಲ - ನವದೆಹಲಿ ಹೆದ್ದಾರಿಯಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಿತ್ತು.

# ಕೊಕ್ಕನೂರಿನಲ್ಲಿ ಕರಡಿ ಸೆರೆ ಹಿಡಿದ ಗ್ರಾಮಸ್ಥರು



ಮಲೇಬೆನ್ನೂರು, ಸೆ.2- ಕಳೆದು ಒಂದೂವರೆ ತಿಂಗಳಿನಿಂದ ಹಿಂಡಸಘಟ್ಟಿ ಮತ್ತು ಕೊಕ್ಕನೂರು ಗ್ರಾಮಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಕರಡಿಯನ್ನು ಭಾನುವಾರ ತಡರಾತ್ರಿ ಕೊಕ್ಕನೂರು ಗ್ರಾಮಸ್ಥರ ಸಹಕಾರದಿಂದ ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಯಶಸ್ವಿಯಾಗಿದೆ.

ಕರಡಿ ಸೆರೆ ಹಿಡಿಯುವ ಕಾರ್ಯಾಚರಣೆ ವೇಳೆ ಗ್ರಾಮದ ಬಲ್ಲಪ್ಪರ ಮಂಜು (26) ಎಂಬಾತನ ಬೆರಳನ್ನು ಕರಡಿ ಕಚ್ಚಿ ಗಾಯಗೊಳಿಸಿದೆ. ತಕ್ಷಣ ಆತನನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿದೆ.

ಭಾನುವಾರ ಸಂಜೆ ಕೊಕ್ಕನೂರಿನ ಹಿಂಡಸಘಟ್ಟಿ ರಸ್ತೆಯಲ್ಲಿರುವ ಅಭಿ ಪಾಟೀಲ್ ಅರವ ಮನೆ ಬಳಿ ಕಾಣಿಸಿಕೊಂಡ ಕರಡಿ ನಂತರ ಗ್ರಾಮದ ದೊಬ್ಬೇರ ಬೀರಪ್ಪ ಅವರ ಮನೆ ಬಳಿ ಇರುವ ಮರವನ್ನೇರಿ ಕುಡಿತುಕೊಂಡಿತು. ಅರಣ್ಯ ಇಲಾಖೆಯವರು ಅಲ್ಲಿಗೆ ಬೋನ್ ತಂದಿಟ್ಟು, ಅದರ ಸುತ್ತಲು ಹಂದಿಗಳನ್ನು ನಿಲ್ಲಿಸಿ ಕಾದರೂ ಕರಡಿ ಬರಲಿಲ್ಲ. ಸೋಮವಾರ ಬೆಳಗಿನ ಜಾವ 3 ಗಂಟೆ ವೇಳೆಗೆ ಗ್ರಾಮಸ್ಥರ ಸಹಕಾರದೊಂದಿಗೆ ಬಲೆ ಅರಣ್ಯ ಇಲಾಖೆಯವರು ಹಾಕಿ ಕರಡಿ ಸೆರೆ ಹಿಡಿದಿದ್ದಾರೆ.

ನಂತರ ಆ ಕರಡಿಯನ್ನು ಬೋನಿನಲ್ಲಿ ಹಾಕಿಕೊಂಡು ಆನಗೋಡು ಬಳಿ ಇರುವ ಪ್ರಾಣಿ ಸಂಗ್ರಹಾಲಯಕ್ಕೆ ಬಿಟ್ಟು ಬಂದಿದ್ದೇವೆ ಎಂದು ಗ್ರಾಮದ ಅಭಿ ಪಾಟೀಲ್ 'ಜನತಾವಾಣಿ'ಗೆ ತಿಳಿಸಿದ್ದಾರೆ.

ಎಪಿಎಫ್ ಶಶಿಧರ್ ಅವರ ನೇತೃತ್ವದಲ್ಲಿ ಅರಣ್ಯ ಇಲಾಖೆಯ ರೇವಂತ್ ಸದರನ್ ಹಾಗೂ ಸಿಬ್ಬಂದಿ ವರ್ಗದವರು ಮತ್ತು ಕೊಕ್ಕನೂರು ಗ್ರಾಮದ ದೊಬ್ಬೇರ್ ಬೀರಪ್ಪ, ಬಲ್ಲಪ್ಪರ ವೆಂಕಟೇಶ್, ಗಡಿಸಿ ರವಿ, ಹೊಸೂರು ಆಂಜನೇಯ, ಹರೀಶ್, ಹುಳ್ಳೇರ್ ಮಲ್ಲಪ್ಪ, ಚನ್ನಗಿರಿ ಮಲ್ಲೇಶಪ್ಪ ಸೇರಿದಂತೆ ಇನ್ನೂ ಅನೇಕರು ಕರಡಿ ಹಿಡಿಯುವ ಕಾರ್ಯಾಚರಣೆಯಲ್ಲಿ ಇದ್ದರು.

# ಲಿಂಗದಹಳ್ಳಿಯಲ್ಲಿ ಇಂದು

ಏಷ್ಯಾ ಖಂಡದಲ್ಲಿ ದೊಡ್ಡದಾದ ಸ್ಪಟಿಕ ಲಿಂಗವಿರುವ ರಾಣೇಬೆನ್ನೂರು ತಾಲ್ಲೂಕಿನ ಲಿಂಗದಹಳ್ಳಿ ಹಿರೇಮಠದಲ್ಲಿ ಶ್ರಾವಣ ಮಾಸದ ಮಹಾ ರುದ್ರಾಭಿಷೇಕದ ಮಂಗಲ ಕಾರ್ಯಕ್ರಮ ಇಂದು ಬೆಳಿಗ್ಗೆ ಪೀಠಾಧಿಪತಿ ಶ್ರೀ ವೀರಭದ್ರಸ್ವಾಮಿಗಳ ಸಾನ್ನಿಧ್ಯದಲ್ಲಿ ನಡೆಯಲಿದೆ.

ಅಭಿಷೇಕದ ನಂತರ ವಾದ್ಯ ವೈಭವಗಳು ಹಾಗೂ ಸುಮಂಗಲೆಯರ ಗಂಗಾಪೂಜೆ ಮತ್ತು ಪೂರ್ಣ ಕುಂಭದೊಂದಿಗೆ ಶ್ರೀ ರೇಣುಕಾ ಚಾರ್ಯರ ಪಲ್ಲಕ್ಕಿ ಉತ್ಸವ, ಮಹಾ ದಾಸೋಹ ನಂತರ ಆಂಧ್ರ ಪ್ರದೇಶದ ಪ್ರಸಿದ್ದ ಅಜ್ಜಯ್ಯ ಅವರಿಂದ ಸಂಗೀತ ಸೇವೆ ನಡೆಯಲಿದೆ.

# ನಗರದಲ್ಲಿ ಇಂದು ಪ್ರವಚನ

ಜಗದ್ಗುರು ಮುರುಘ ರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ ವತಿಯಿಂದ ವಿರಕ್ತ ಮಠದ ಬಸವ ಕೇಂದ್ರದಲ್ಲಿ ಇಂದು ಸಂಜೆ 6ಕ್ಕೆ ಕಲ್ಯಾಣದಿಂದ ಉಳವಿಯೆಡೆಗೆ ಪ್ರವಚನ ಮಂಗಲ ಸಮಾರಂಭ ನಡೆಯಲಿದೆ. ಕಾರ್ಯಕ್ರಮದಲ್ಲಿ ಶ್ರೀ ಬಸವ ಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಮೈಸೂರು ಬಸವ ಧ್ಯಾನ ಮಂದಿರದ ಬಸವಲಿಂಗಮೂರ್ತಿ ಶ್ರೀಗಳು ಪ್ರವಚನ ನುಡಿಗಳನ್ನಾಡುವರು.

ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ, ಎಸ್.ಲಿಂಗಮೂರ್ತಿ, ಎಚ್. ಆನಂದಪ್ಪ, ಜಿತೇಂದ್ರ ಹುಲಿಕುಂಟೆ, ಕೋಗುಂಡಿ ಬಕ್ಕಪ್ಪ, ಚಿಂದೋಡಿ ವೀರಣ್ಣ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

# ಕೃಷಿ ಯೋಜನೆಗಳಿಗೆ 14 ಸಹಸ್ರ ಕೋಟಿ

(1ನೇ ಪುಟದಿಂದ) ಹಾಗೂ ಹೈನುಗಾರಿಕೆಗೆ ಉತ್ತೇಜನ ನೀಡುವ ಸಲುವಾಗಿ 1,702 ಕೋಟಿ ರೂ.ಗಳ ಯೋಜನೆಗೆ ಸಂಪುಟ ಒಪ್ಪಿಗೆ ನೀಡಿದೆ. ಜಾನುವಾರುಗಳ ಆರೋಗ್ಯ ನಿರ್ವಹಣೆ, ತಂತ್ರಜ್ಞಾನ ಅಭಿವೃದ್ಧಿ, ಜಾನುವಾರು ತಳಿಗಳ ನಿರ್ವಹಣೆ. ಮುಂತಾದ ವಿಷಯಗಳಿಗಾಗಿ ಈ ಅನುದಾನ ಬಳಕೆಯಾಗಲಿದೆ.

ಕೃಷಿ ವಿಜ್ಞಾನ ಕೇಂದ್ರಗಳನ್ನು ಬಲಪಡಿಸಲು 1,202 ಕೋಟಿ ರೂ. ನೀಡಲು ಸಂಪುಟ ಒಪ್ಪಿಗೆ ನೀಡಿದೆ. ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಗಾಗಿ 1,115 ಕೋಟಿ ರೂ. ಯೋಜನೆಗೆ ಒಪ್ಪಿಗೆ ನೀಡಲಾಗಿದೆ. ದೇಶದಲ್ಲಿ 700ಕ್ಕೂ ಹೆಚ್ಚು ಕೃಷಿ ವಿಜ್ಞಾನ ಕೇಂದ್ರಗಳಿವೆ.

# ನಗರದಲ್ಲಿ ಕ್ವಿಲ್ಲಿಂಗ್ ಕಲಾ ಪ್ರದರ್ಶನ



ದಾವಣಗೆರೆ, ಸೆ. 2 - ಕ್ವಿಲ್ಲಿಂಗ್ ಕಲೆಯ ಮೂಲಕ ವೈವಿಧ್ಯಮಯ ಗಣೇಶ, ಬಸವಣ್ಣನವರು ಮತ್ತಿತರೆ ಕಲಾಕೃತಿ ನೋಡಿ ಸಂತೋಷ ಆಗಿದೆ. ಈ ಭಾಗದಲ್ಲಿ ಹೆಚ್ಚಿನವರಿಗೆ ಇದು ತಿಳಿದಿಲ್ಲ. ಸಹನೆ ಹಾಗೂ ಕ್ರಿಯಾಶೀಲ ವ್ಯಕ್ತಿಗಳಿಂದ ಮಾತ್ರ ಇದು ಸಾಧ್ಯ ಎಂದು ಮಾಜಿ ಮೇಯರ್ ಸುಧಾ ಜಯರುದ್ರೇಶ್ ಹೇಳಿದರು.

ಚೌಕಿಪೇಟೆಯ ಗೌಡರ ಜಯದೇವಪ್ಪ ಮಳಿಗೆಯ ಮಹಡಿಯಲ್ಲಿ ಸೋಮವಾರ ನೀತಾ ಎಚ್. ಗೌಡರ್ ಅವರ ಕ್ವಿಲ್ಲಿಂಗ್ ಕಲಾಕೃತಿಗಳ ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು.

1ವಾರಗಳ ಕಾಲ ನಡೆಯುವ ಕ್ವಿಲ್ಲಿಂಗ್ ಕಲಾ ಪ್ರದರ್ಶನ ಸಾರ್ವಜನಿಕರಿಗೆ ಮುಕ್ತವಾಗಿದೆ. 13 ದೊಡ್ಡ ಗಾತ್ರದ ಕಲಾಕೃತಿ ಹಾಗೂ 314 ಕ್ಕಿಂತ ಹೆಚ್ಚು ಗಣಪತಿ ಇಡಲಾಗಿದೆ ಎಂದು ಕಲಾವಿದೆ ನೀತಾ ಗೌಡರ್ ಹೇಳಿದರು.

ಈ ಸಂದರ್ಭದಲ್ಲಿ ದಾವಣಗೆರೆ ಅರ್ಬನ್ ಬ್ಯಾಂಕ್ ಉಪಾಧ್ಯಕ್ಷ ಟಿ.ಎಸ್ ಜಯರುದ್ರೇಶ್, ಗೌಡರ ಮಹಾಲಿಂಗಪ್ಪ, ಉಷಾ ಎಂ ಗೌಡರ್, ಗಂಗಾಧರ್, ಮಧುರಾ, ಹರ್ಷ ಮತ್ತಿತರರು ಉಪಸ್ಥಿತರಿದ್ದರು.

# ವೀರಭದ್ರೇಶ್ವರ ದೇವಸ್ಥಾನದಲ್ಲಿ ಇಂದು



ದಾವಣಗೆರೆಯ ಹಳೇಪೇಟೆಯಲ್ಲಿರುವ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇಂದು ಬೆಳಿಗ್ಗೆ 6 ಗಂಟೆಗೆ ರುದ್ರಾಭಿಷೇಕ, ಅಷ್ಟೋತ್ತರ ಹಾಗೂ ಮಹಾಮಂಗಳಾರತಿ ಹಾಗೂ ಹೂವಿನ ಅಲಂಕಾರ ನೆರವೇರಿಸಲಾಗುವುದು ಎಂದು ದೇವಸ್ಥಾನದ ವೀರಯ್ಯ ಶಾಸ್ತ್ರಿಗಳು ತಿಳಿಸಿದ್ದಾರೆ.

# ರಾಜ್ಯ ಹೆದ್ದಾರಿ ವಿಸ್ತರಣೆಗೆ ದೃಢ ನಿರ್ಧಾರ : ಡಿಸಿ ಗಂಗಾಧರ ಸ್ವಾಮಿ



ಜಗಳೂರು, ಸೆ. 2 - ಪಟ್ಟಣದ ಮಲ್ಪೆ-ಮೊಳಕಾಲ್ಮೂರು ರಾಜ್ಯ ಹೆದ್ದಾರಿ ಮುಖ್ಯ ರಸ್ತೆ ವಿಸ್ತರಣೆಗೆ ಸರ್ಕಾರದ ನಿಯಮಗಳಡಿ ಅಗಲೀಕರಣಕ್ಕೆ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಜಿ.ಎಂ.ಗಂಗಾಧರ ಸ್ವಾಮಿ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಇಂದು ರಸ್ತೆ ವಿಸ್ತರಣೆ ಕುರಿತು ಶಾಸಕ ಬಿ. ದೇವೇಂದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ಕರೆದಿದ್ದ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳ ಸಭೆಯ ನಂತರ ಅವರು ಮಾತನಾಡಿದರು.

ಪಟ್ಟಣದ ಅಭಿವೃದ್ದಿಗೆ ಜಾರಿಗೊಂಡಿರುವ ಸ್ಥಳೀಯ ಅಭಿವೃದ್ದಿ ಪ್ರಾಧಿಕಾರಗಳ ಮಾಸ್ಟರ್ ಪ್ಲಾನ್ ಪ್ರಕಾರ ಮಹಾ ಯೋಜನೆ 2008ರ ನೋಟಿಫಿಕೇಶನ್ ಅಡಿಯಲ್ಲಿ ರಾಜ್ಯ ಹೆದ್ದಾರಿ ಮಧ್ಯ ಭಾಗದಿಂದ ಎರಡೂ ಬದಿಯಲ್ಲಿ 21 ಮೀಟರ್ ಅಗಲ ವಿಸ್ತರಣೆ ಕಡ್ಡಾಯವಾಗಿದ್ದು, ಯಾವುದೇ ರಾಜಿ ಇಲ್ಲಾ, ರಿಯಾಯ್ತಿ ಇಲ್ಲಾ ಎಂದು ಹೇಳಿದರು.

ನ್ಯಾಷನಲ್ ರೋಡ್ ಅಫೆಕ್ಷನ್ ಬಾಡಿ ಅನ್ವಯ ಚಳ್ಳಕೆರೆ ವೃತ್ತದಿಂದ ಅಂಬೇಡ್ಕರ್ ವೃತ್ತದವರೆಗೆ 1.3 ಕಿ.ಮೀ ಉದ್ದದ ರಸ್ತೆ ಅಗಲೀಕರಣದ ಮಾರ್ಕಿಂಗ್ ಮಾಡಲಾಗಿದ್ದು, ಯಾವುದೇ ಮಾರ್ಜಿನ್ ಇಲ್ಲ. ಪ್ರಾಥಮಿಕ ಆಕ್ಷೇಪಣಾ ಸಭೆ ಕರೆಯಲಾಗಿತ್ತು.ಇದೀಗ ಸ್ಥಳೀಯ ಹಿರಿಯರಿಂದ ಹಾಗೂ ಶಾಸಕರಿಂದ ಸಲಹೆ ಪಡೆಯಲಾಗಿದೆ. ರಾಜಕಾಲುವೆ, ಕೆರೆ ಪಕ್ಕ 30 ಅಡಿ ಅಂತರದಲ್ಲಿ ಯಾವುದೇ ಕಟ್ಟಡಗಳನ್ನು ನಿರ್ಮಿಸಲು ಅನುಮತಿ ನೀಡುವಂತಿಲ್ಲ. ಸರ್ಕಾರದ ನಿಯಮಾನುಸಾರ ಪರಿಶೀಲನೆ ನಡೆಸಿ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಲಾಗುವುದು ಎಂದರು.

ಕೋರ್ಟ್ ಕಾನೂನಿಗೆ ಪ್ರತಿಯೊಬ್ಬರೂ ತಲೆಬಾಗಬೇಕಿದೆ. ಪಟ್ಟಣದಲ್ಲಿ ಈ ರಸ್ತೆಯಲ್ಲಿ ಇರುವ ವಿದ್ಯುತ್ ಕಂಬಗಳು ಸ್ಥಳಾಂತರಿಸಲು, ಟೆಲಿಫೋನ್, ಕುಡಿಯುವ ನೀರಿನ ಪೈಪ್ ಲೈನ್ ಗಳಿಗೆ ತೊಂದರೆಯಾಗದಂತೆ ಸೂಕ್ತ ಕ್ರಮ ಅನುಸರಿಸಲು ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.


ಶಾಸಕ ಬಿ.ದೇವೇಂದ್ರಪ್ಪ ಮಾತನಾಡಿ, ಇತ್ತೀಚೆಗೆ ನಡೆದ ಭೀಕರ ಅಪಘಾತ, ಅಮಾಯಕರ ಸಾವು ನೋವುಗಳು ಸಾರ್ವಜನಿಕರನ್ನು ಆಕ್ರೋಶ ಭರಿತರನ್ನಾಗಿಸಿವೆ.ರಸ್ತೆ ಅಗಲೀಕರಣಕ್ಕೆ ನನ್ನ ಸಹಮತವಿದೆ. ಸಾರ್ವಜನಿಕ ಸ್ಥಳಗಳಲ್ಲಿ ಅತಿಕ್ರಮಣಗೊಳಿಸಿದ ಭೂಕಳ್ಳರು, ತೆರಿಗೆ ವಂಚಿತರ ವಿರುದ್ಧ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

**ವಕೀಲರ ಸಂಘ ಮನವಿ:** ದಶಕಗಳ ಕಾಲ ಒತ್ತುವರಿ ಜಾಗದಲ್ಲಿ ಸಾಕಷ್ಟು ವ್ಯವಹಾರಿಕ ಲಾಭ ನಡೆಸುತ್ತಿರುವವರು ರಸ್ತೆ ವಿಸ್ತರಣೆ ವಿಷಯವಾಗಿ ತಡೆಯಾಜ್ಞೆಗೆ ಮುಂದಾಗಿದ್ದಾರೆ. ಇದು ಸರಿಯಲ್ಲಾ . ಸಾರ್ವಜನಿಕರ ಅನುಕೂಲಕ್ಕೆ ರಸ್ತೆ ಅಗಲೀಕರಣ ಮಾಡಬೇಕು ಎಂದು ಒತ್ತಾಯಿಸಿ ತಾಲೂಕು ವಕೀಲರ ಸಂಘದ ಪಧಾದಿಕಾರಿಗಳು ಮನವಿಮಾಡಿದರು.

**ಪ್ರವಾಸಿ ಮಂದಿರದಲ್ಲಿ ಜಮಾಯಿಸಿದ ಸಾರ್ವಜನಿಕರು ಸಂಘಟನೆಗಳು:** ರಸ್ತೆ ವಿಸ್ತರಣೆಗೆ ಶೀಘ್ರ ಕ್ರಮಕೈಗೊಳ್ಳಲು ಒತ್ತಾಯಿಸಿ ಕರವೇ, ರೈತಸಂಘಗಳು, ಸಾರ್ವಜನಿಕರು ಒಂದೆಡೆ ಜಮಾಯಿಸಿದರೆ. ರಸ್ತೆ ಬದಿಯ ಬಡ ನಿವಾಸಿಗಳು ಮನೆಗಳನ್ನು ತೆರವುಮಾಡದಂತೆ ಒತ್ತಾಯಿಸಿ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಲೋಕೇಶ್, ಅಪರ ಜಿಲ್ಲಾ ರಕ್ಷಣಾಧಿಕಾರಿ ಜಿ.ಮಂಜುನಾಥ್, ತಹಶೀಲ್ದಾರ್ ಸೈಯ್ಯದ್ ಕಲೀಂ ಉಲ್ಲಾ, ಪಿಡಬ್ಲ್ಯೂಡಿ ಇ ಇ ನರೇಂದ್ರ ಬಾಬು, ಎಇಇ ನಾಗರಾಜ್, ಜಿ.ಪಂ ಎಇಇ ಶಿವಮೂರ್ತಿ, ಬೆಸ್ಕಾಂ ಎಇಇ ಸುಧಾಮಣಿ, ಪಿಐ ಶ್ರೀನಿವಾಸ್ ರಾವ್, ಮುಖ್ಯಾದಿಕಾರಿ ಲೋಕ್ಯಾ ನಾಯ್ಕ್, ವಕೀಲರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಟಿ.ಬಸವರಾಜ್, ಮುಖಂಡರಾದ ಎಂ.ಡಿ. ಕೀರ್ತಿಕುಮಾರ್, ಕೆ.ಪಿ.ಪಾಲಯ್ಯ, ಪಲ್ಲಾಗಟ್ಟೆ ಶೇಖರಪ್ಪ, ಬಿ.ಮಹೇಶ್ ಇದ್ದರು.

## ಹರಿಹರ : ಶ್ರೀ ಸಿದ್ದಾರೂಢ ಸ್ವಾಮಿಗಳ ಕಥಾಮೃತ ಮುಕ್ತಾಯ ಸಮಾರಂಭ



ಕುರುಬರ ಬೀದಿಯಲ್ಲಿರುವ ಶ್ರೀ ಸಿದ್ಧಾರೂಢ ಭಕ್ತ ಮಂಡಳಿ ಇವರ ಆಶ್ರಯದಲ್ಲಿ ನಡೆಯುವ ಹೊಸಪೇಟೆ ಬೀದಿಯ ಶ್ರೀ ಗ್ರಾಮದೇವತೆ ಸಮುದಾಯ ಭವನದಲ್ಲಿ ಇಂದು ಸಂಜೆ 6 ಗಂಟೆಗೆ ಶ್ರೀ ಸಿದ್ಧಾರೂಢ ಸ್ವಾಮಿಗಳವರ ಕಥಾಮೃತ ಶ್ರಾವಣದ 35ನೇ ವರ್ಷದ ಮುಕ್ತಾಯ ಸಮಾರಂಭ ನಡೆಯಲಿದೆ.

ದಿವ್ಯ ಸಾನ್ನಿಧ್ಯವನ್ನು ಹರಿಹರ ಸದ್ಗುರು ಶ್ರೀ ಬ್ರಹ್ಮಾನಂದ ಮಠದ ಶ್ರೀ ಅಭಿನವ ಕೃಪಾನಂದ ಭಾರತಿಸ್ವಾಮೀಜಿ, ಪೂಜ್ಯ ಶ್ರೀ ನೀಲಕಂಠಪ್ಪ ಅಗಡಿ, ಮಲ್ಲಿಕಾರ್ಜುನ ದೇವಾಂಗದ, ಮಂಜಯ್ಯ ಒಡೆಯರ್, ಹನುಮಂತಪ್ಪ ಅವಧೂತರು ವಹಿಸುವರು.

ಮುಖ್ಯ ಅತಿಥಿಗಳಾಗಿ ರಾಮಚಂದ್ರ ಕಲಾಲ್, ಶ್ರೀ ವಿವೇಕಾನಂದ ಸ್ವಾಮಿ, ಶ್ರೀಮತಿ ಪಕ್ಕೀರಮ್ಮ ಹುಲಿಕಟ್ಟಿ, ಜಕ್ಕವ್ವರ ರೇವಣಸಿದ್ದಪ್ಪ, ಕೆ. ಜಡಿಯಪ್ಪ, ಡಾ. ಶಂಕರೋಜಿ ರಾವ್ ಎಂ.ಎಸ್ ಮತ್ತು ಇತರರು ಭಾಗವಹಿಸುವರು.

**ಸಂಗೀತ ಸೇವೆ:** ಮೌನೇಶ್ ಬಡಿಗೇರ್, ಶ್ರೀ ಶಿವಾನಂದಪ್ಪ, ಕಾಶಿನಾಥಾಚಾರ್, ಧನಂಜಯ ಆಚಾರ್ ನಡೆಸಿಕೊಡಲಿದ್ದಾರೆ ಎಂದು ಶ್ರೀ ಸಿದ್ಧಾರೂಢ ಭಕ್ತ ಮಂಡಳಿಯ ಮೂಗಿನವರ ಕೆ. ಹನುಮಂತಪ್ಪ (99640 18679) ತಿಳಿಸಿದ್ದಾರೆ.

## ಅಂಚೆ ಕುಂಚ ಚಿತ್ರ ಬರೆಯುವ ಸ್ಪರ್ಧೆ

ದಾವಣಗೆರೆ, ಸೆ. 2 - ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಶ್ರೀ ಗಣೇಶೋತ್ಸವದ ಪ್ರಯುಕ್ತ 50 ಪೈಸೆ ಅಂಚೆ ಕಾರ್ಡಿನಲ್ಲಿ ಶ್ರೀ ಗಣೇಶನ ಚಿತ್ರ ಬರೆಯುವ ರಾಜ್ಯ ಮಟ್ಟದ ಉಚಿತ ಚಿತ್ರ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ. ವಿವಿಧ ಕಲಾ ಪ್ರಕಾರಗಳಲ್ಲಿ ಶ್ರೀ ಗಣಪತಿ ಚಿತ್ರ ಬರೆಯಬಹುದು. ಚಿತ್ರ ಬರೆದು ಕಳಿಸುವ ವಿಳಾಸ ಕಲಾ ಕುಂಚ #588, 'ಕನ್ನಡ ಕೃಪ', ಮೊದಲನೇ ಮಹಡಿ, ಕುವೆಂಪು ರಸ್ತೆ, ಕಸ್ತೂರ್ಬಾ ಬಡಾವಣೆ, ದಾವಣಗೆರೆ - 577002. ಹೆಚ್ಚಿನ ಮಾಹಿತಿಗೆ 95387 32777 ಸಂಪರ್ಕಿಸಬಹುದು. ಚಿತ್ರ ಬರೆದು ಕಳಿಸುವ ಕೊನೆಯ ದಿನಾಂಕ 15 ಎಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕೆ.ಸಿ. ಉಮೇಶ್ ತಿಳಿಸಿದ್ದಾರೆ.

# ಮಾನವನ ಅಂತರಂಗದಲ್ಲೇ ದೇವರು ಸದಾ ಇರುತ್ತಾನೆ

## ಸಾಮೂಹಿಕ ಇಷ್ಟಲಿಂಗ ಪೂಜೆಯಲ್ಲಿ ಶ್ರೀ ಬಸವ ಪ್ರಭು ಸ್ವಾಮೀಜಿ ಆಶೀರ್ವಚನ

ದಾವಣಗೆರೆ, ಸೆ.2- ಕಲ್ಲಿನಲ್ಲಿ ಬಂಗಾರವಿದೆ. ಕರ್ನಾಟಕದ ಕೆ.ಜಿ.ಎಫ್ ನಲ್ಲಿ ಅದಿರು ಸಿಗುತ್ತದೆ. ಅದನ್ನು ಶುದ್ದಿ ಮಾಡಿದಾಗ ಚಿನ್ನ ದೊರಕುತ್ತದೆ. ಹಾಲಿನಲ್ಲಿ ತುಪ್ಪವಿದೆ ಅದು ಕಣ್ಣಿಗೆ ಕಾಣುವುದಿಲ್ಲ. ಹಾಲಿಗೆ ಸಂಸ್ಕಾರವನ್ನು ನೀಡಿದಾಗ ತುಪ್ಪ ದೊರಕುತ್ತದೆ ಹಾಗೆಯೇ ಮಾನವನ ಅಂತರಂಗದಲ್ಲಿಯೇ ದೇವರು ಇದ್ದಾನೆ. ನಮ್ಮೊಳಗಿರುವ ದೇವರನ್ನು ವಿಶ್ವಗುರು ಬಸವಣ್ಣನವರು ಇಷ್ಟಲಿಂಗದ ಮೂಲಕ ನೀಡಿದ್ದಾರೆ ಎಂದು ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ಹೇಳಿದರು.



ನಗರದ ವಿರಕ್ತ ಮಠದಲ್ಲಿ ನಿನ್ನೆ ನಡೆದ ಸಾಮೂಹಿಕ ಇಷ್ಟಲಿಂಗ ಪೂಜೆ ಮತ್ತು ಇಷ್ಟಲಿಂಗ ದೀಕ್ಷಾ ಸಮಾರಂಭದ ನೇತೃತ್ವವನ್ನು ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಇಷ್ಟಲಿಂಗವನ್ನು ನಾವು ಧರಿಸಿ, ಪ್ರತಿದಿನವೂ ಶಿವಯೋಗವನ್ನು ಮಾಡುತ್ತಾ ಬಂದಾಗ, ಮೊದಲು ನಮ್ಮ ತನುವನ್ನು ಶುದ್ಧೀಕರಣ ಮಾಡುತ್ತದೆ. ಈ ಶರೀರದೊಳಗಿರುವ ದುಶ್ಚಟ, ದುರ್ಗುಣಗಳನ್ನು ತೊಡೆದುಹಾಕುತ್ತದೆ. ಮನಸ್ಸಿನಲ್ಲಿರುವ ವಿಕಾರಗಳನ್ನು ಕಿತ್ತುಹಾಕುತ್ತದೆ. ಭಾವದೊಳಗಿರುವ ಅರಿಷಡ್ವರ್ಗಗಳನ್ನು ಸುಟ್ಟುಹಾಕುತ್ತದೆ. ತನು, ಮನ, ಭಾವಗಳಲ್ಲಿರುವ ವಿಷಯ ವಾಸನೆಗಳು ನಿವಾರಣೆಯಾಗಿ ಭಕ್ತನ ಶರೀರವು ಬಸವಣ್ಣನವರು ಹೇಳಿದಂತೆ ದೇಹವು ದೇಗುಲವಾಗುತ್ತದೆ. ಆಗ ಮಾನವ ಚಲಿಸುವ ದೇವಾಲಯ, ಮಾತನಾಡುವ ದೇವರು ಆಗುತ್ತಾನೆ. ಇಂತಹ ವಿಶೇಷ ತತ್ವಗಳನ್ನು ಬಸವಣ್ಣನವರು ಲಿಂಗಾಯತ ಧರ್ಮದಲ್ಲಿ ನೀಡಿದ್ದಾರೆ.

ಈಗ ಎಲ್ಲರ ಬಳಿಯೂ ಮೊಬೈಲ್ ಫೋನ್ ಇದೆ. ಇದು ಜನ ಸಂಪರ್ಕ ಮಾಡಲು ಸುಲಭವಾಗಿದೆ. ಹಾಗೆಯೇ ದೇವರನ್ನು ಸಂಪರ್ಕ ಮಾಡಲು ಬಸವಣ್ಣನವರು ಈ ಇಷ್ಟಲಿಂಗವೆಂಬ ಮೊಬೈಲ್ ನೀಡಿದ್ದಾರೆ. ಇದನ್ನು ಪೂಜಿಸುತ್ತಾ ಎಷ್ಟು ಬೇಕಾದರೂ ನಾವು ದೇವರೊಂದಿಗೆ ಮಾತನಾಡುವ ಅವಕಾಶವನ್ನು ನೀಡಿದ್ದಾರೆ.

ಮೊಬೈಲ್ ಅನ್ನು ಪ್ರತಿದಿನವೂ ಚಾರ್ಜ್ ಮಾಡಿದಂತೆ, ಮನಸ್ಸನ್ನು ಇಷ್ಟಲಿಂಗ ಧ್ಯಾನದ ಮೂಲಕ ಚಾರ್ಜ್ ಮಾಡಿದರೆ, ನಮ್ಮ ಮನಸ್ಸಿನಲ್ಲಿ ಯಾವುದೇ ಮನೋವಿಕಾರಗಳು, ದ್ವೇಷ ಭಾವನೆಗಳು ಬರುವುದಿಲ್ಲ. ಹಾಗಾಗಿ ಪ್ರತಿದಿನವೂ ನಾವು ಶಿವಯೋಗ ಮಾಡಬೇಕು ಎಂದು ಸ್ವಾಮೀಜಿ ಹೇಳಿದರು.

ಮೈಸೂರಿನ ಶ್ರೀ ಬಸವಲಿಂಗಮೂರ್ತಿ ಸ್ವಾಮೀಜಿ, ವಿರಕ್ತ ಮಠದ ಕಮಿಟಿಯವರಾದ ಹಾಸಭಾವಿ ಕರಿಬಸಪ್ಪ, ಕಣಕುಪ್ಪಿ ಮುರುಗೇಶಪ್ಪ, ಲಂಬಿ ಮುರುಗೇಶಪ್ಪ, ಟಿ.ಎಂ.ವೀರೇಂದ್ರ, ಎಸ್.ಜಿ.ಸಂಗಪ್ಪ, ಮಹದೇವಮ್ಮ ಇತರರು ಉಪಸ್ಥಿತರಿದ್ದರು.

# ರಜೆ ಪಡೆಯಲೊಪ್ಪದ ಜಪಾನಿಯರು, ಸರ್ಕಾರಕ್ಕೆ ತಲೆ ನೋವು

ನವದೆಹಲಿ, ಆ. 2 - ಇನ್ಫೋಸಿಸ್ ಸ್ಥಾಪಕ ನಾರಾಯಣ ಮೂರ್ತಿ ಅವರು ವಾರದಲ್ಲಿ 70 ಗಂಟೆಗಳ ಕಾಲ ಕೆಲಸ ಮಾಡುವಂತೆ ಯುವಕರಿಗೆ ನೀಡಿದ ಸಲಹೆ ಭಾರತದಲ್ಲಿ ವಿಪರೀತ ಚರ್ಚೆ ಹಾಗೂ ಟೀಕೆಗಳಿಗೆ ಕಾರಣವಾಗಿತ್ತು.

ಆದರೆ, ಜಪಾನ್ ದೇಶದಲ್ಲಿ ಪರಿಸ್ಥಿತಿ ತದ್ವಿರುದ್ಧವಾಗಿದೆ. ಜಪಾನ್ ಜನತೆ ಎಷ್ಟು ಪರಿಶ್ರಮಿಗಳಾಗಿದ್ದಾರೆ ಎಂದರೆ, ಅತಿಯಾದ ದುಡಿಮೆ ಕೆಲವೊಮ್ಮೆ ಸಾವಿಗೂ ಕಾರಣವಾಗುತ್ತಿದೆ. ಇಂತಹ ಚಿಂತಾಜನಕ ಪರಿಸ್ಥಿತಿಯನ್ನು ಬದಲಿಸಲು ಹರಸಾಹಸ ನಡೆಸಲಾಗುತ್ತಿದೆ.



**ಜಪಾನ್ ಸರ್ಕಾರ ಅತಿ ಪರಿಶ್ರಮದ ಕುರಿತು ಇತ್ತೀಚೆಗೆ ವರದಿಯೊಂದನ್ನು ರೂಪಿಸಿತ್ತು. ಇದಕ್ಕೆ ಕರೋಶಿ ಎಂಬ ಹೆಸರಿಡಲಾಗಿತ್ತು. ಕರೋಶಿ ಎಂದರೆ ಅತಿ ಕೆಲಸದಿಂದ ಸಾವು ಎಂದರ್ಥ. ವರ್ಷದಲ್ಲಿ ಈ ರೀತಿಯ 54 ಸಾವುಗಳು ಸಂಭವಿಸುತ್ತಿವೆ ಎಂದು ಗುರುತಿಸಲಾಗಿದೆ.**

ಉದ್ಯೋಗಿಗಳ ಕೆಲಸದ ಅವಧಿಯನ್ನು ಇಳಿಕೆ ಮಾಡುವ ಕ್ರಮಗಳಿಗೆ ಜಪಾನ್ ಸರ್ಕಾರ 2021 ರಲ್ಲಿ ಬೆಂಬಲ ಘೋಷಿಸಿತ್ತು. ಹಲವಾರು ಶಾಸಕರು ಈ ವಿಚಾರವನ್ನು ಬೆಂಬಲಿಸಿದ್ದರು. ಆದರೆ, ಸರ್ಕಾರದ ಕ್ರಮಕ್ಕೆ ಇದುವರೆಗೂ ನಿರೀಕ್ಷಿತ ಸ್ಪಂದನೆ ದೊರೆತಿಲ್ಲ.

ಕೆಲಸದ ಅವಧಿಯನ್ನು ತಗ್ಗಿಸಿ ಆರೋಗ್ಯ ಹೆಚ್ಚಿಸುವ ಸಲುವಾಗಿ, ಕಂಪನಿಗಳು ವಾರಕ್ಕೆ ನಾಲ್ಕು ದಿನಗಳ ಕಾಲ ಮಾತ್ರ ಉದ್ಯೋಗದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಜಪಾನ್ ಸರ್ಕಾರ ಸಲಹೆ ನೀಡಿದೆ. ಶೇ. 8ರಷ್ಟು ಕಂಪನಿಗಳು ಮಾತ್ರ ವಾರಕ್ಕೆ ಮೂರು ಇಲ್ಲವೇ ಹೆಚ್ಚಿನ ರಜೆಗೆ ಅನುಮತಿ ನೀಡುತ್ತಿವೆ.

ಸರ್ಕಾರ ಈಗ ಕೆಲಸದ ಶೈಲಿಯಲ್ಲಿ ಸುಧಾರಣೆ ತರುವ ಅಭಿಯಾನ ಆರಂಭಿಸಿದೆ. ಕೆಲಸದ ಅವಧಿಯನ್ನು ತಗ್ಗಿಸುವ ಜೊತೆಗೆ, ಓವರ್ ಟೈಮ್ ಮೇಲೆ ಮಿತಿ ಹಾಕಿದೆ. ವೇತನ ಸಹಿತ ರಜೆಯ ದಿನಗಳನ್ನು ಹೆಚ್ಚಿಸಿದೆ. ಜನರು ಕೆಲಸದ ಅವಧಿ ತಗ್ಗಿಸುವ ಸಲುವಾಗಿ ಉಚಿತ ಆಪ್ತ ಸಮಾಲೋಚನೆ ಹಾಗೂ ಅನುದಾನ ನೀಡಲು ಕಾರ್ಮಿಕ ಸಚಿವಾಲಯ ಮುಂದಾಗಿದೆ.

ಕೆಲಸದ ವಿಧಾನದಲ್ಲಿ ಆವಿಷ್ಕಾರ ತರಲೂ ಕಾರ್ಮಿಕ ಸಚಿವಾಲಯ ಮುಂದಾಗಿದೆ. ಇದಕ್ಕಾಗಿ ಕಂಪನಿಗಳಿಗೆ ಸಲಹೆ ನೀಡುವುದಾಗಿ ತಿಳಿಸಿದೆ. ಆದರೆ ಇದುವರೆಗೂ ಕೇವಲ ಮೂರು ಕಂಪನಿಗಳು ಸಲಹೆ ಪಡೆಯಲು ಮುಂದೆ ಬಂದಿವೆ.

ಅಷ್ಟೇ ಅಲ್ಲದೇ, ವಾರದಲ್ಲಿ ಮೂರು ದಿನಗಳ ರಜೆಯನ್ನು ಉದ್ಯೋಗಿಗಳು ತಮಗೆ ಸೂಕ್ತವಾದ ರೀತಿಯಲ್ಲಿ ಪಡೆಯಲು ಹೆಚ್ಚಿನ ಅವಕಾಶ ನೀಡಲಾಗಿದೆ. ವಾರಾಂತ್ಯದಲ್ಲಷ್ಟೇ ಅಲ್ಲದೇ, ವಾರದ ನಡುವೆಯೂ ರಜೆ ಪಡೆಯಲು ಅವಕಾಶ ನೀಡಲಾಗಿದೆ.

ಪ್ಯಾನಸೋನಿಕ್ ಹೋಲ್ಡಿಂಗ್ಸ್ ಕಂಪನಿಯ 63,000 ಉದ್ಯೋಗಿಗಳು ವಾರದಲ್ಲಿ ಮೂರು ದಿನ ರಜೆ ಪಡೆಯುವ ಅರ್ಹತೆ ಹೊಂದಿದ್ದಾರೆ. ಆದರೆ ಇದುವರೆಗೂ ಕೇವಲ 150 ಉದ್ಯೋಗಿಗಳು ಮಾತ್ರ ಈ ರಜೆ ಪಡೆಯಲು ಮುಂದೆ ಬಂದಿದ್ದಾರೆ. ಇದು ಪರಿಸ್ಥಿತಿಯ ಗಂಭೀರತೆ ತೋರಿಸುತ್ತದೆ.

ಜಪಾನ್ ಸಮಾಜ ಪರಿಶ್ರಮದ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಬಂದಿದೆ. ಜನರ ಅವಿರತ ಪರಿಶ್ರಮವೇ ಎರಡನೇ ಮಹಾಯುದ್ಧದ ನಂತರ ಜಪಾನ್ ಚೇತರಿಸಿಕೊಳ್ಳಲು ಹಾಗೂ ಆರ್ಥಿಕ ಶಕ್ತಿಯಾಗಿ ಬೆಳೆಯಲು ನೆರವಾಯಿತು.

ತಾವು ಕಾರ್ಯನಿರ್ವಹಿಸುವ ಸಂಸ್ಥೆಗಳ ಹಿತಕ್ಕಾಗಿ ಕ್ಷಮಿಸುವುದು ಜಪಾನ್ ಜನತೆಯ ರಕ್ತಗತ ಗುಣವಾಗಿ ಮಾರ್ಪಟ್ಟಿದೆ. ತಾವು ಕೆಲಸವನ್ನು ನಿರ್ಲಕ್ಷಿಸುತ್ತಿಲ್ಲ ಎಂಬುದನ್ನು ಬಿಂಬಿಸುವ ಸಲುವಾಗಿ ಕಂಪನಿಯ ಬಹುತೇಕ ಉದ್ಯೋಗಿಗಳು ಒಂದೇ ಸಮಯದಲ್ಲಿ ರಜೆ ಪಡೆಯುತ್ತಾರೆ. ಇದರಿಂದಾಗಿ ತಾವು ಕೆಲಸವನ್ನು ನಿರ್ಲಕ್ಷಿಸುತ್ತಿಲ್ಲ ಎಂಬುದನ್ನು ಬಿಂಬಿಸಲು ಸಾಧ್ಯವಾಗುತ್ತದೆ.

ನಮ್ಮ ಉದ್ಯೋಗಿಗಳಿಗೆ ವಾರಕ್ಕೆ ಎರಡು ದಿನ ರಜೆ ನೀಡುತ್ತಿರುವುದಾಗಿ ಶೇ. 85ರಷ್ಟು ಕಂಪನಿಗಳು ತಿಳಿಸುತ್ತಿವೆ. ಓವರ್ ಟೈಮ್ ಮೇಲೆ ಕಡಿವಾಣ ಹಾಕಲು ಕಾನೂನುಗಳು ಇವೆ. ಇದಕ್ಕಾಗಿ ಕಾರ್ಮಿಕ ಸಂಘಟನೆಗಳ ಜೊತೆ ಸುದೀರ್ಘ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ಆದರೂ ಕೆಲವರು ಓವರ್ ಟೈಮ್ ಸೇವೆ ಸಲ್ಲಿಸುತ್ತಿದ್ದಾರೆ. ಇದನ್ನು ದಾಖಲೆಗಳಲ್ಲಿ ಗುರುತಿಸುತ್ತಿಲ್ಲ ಹಾಗೂ ಹೆಚ್ಚುವರಿ ವೇತನವನ್ನು ನೀಡುತ್ತಿಲ್ಲ.

ಪರಿಶ್ರಮದ ಬಗ್ಗೆ ಜಪಾನ್ ಜನತೆ ಅತಿ ಹೆಚ್ಚಿನ ಕಾಳಜಿ ವಹಿಸುತ್ತಾರೆ. ಪರಿಶ್ರಮವೇ ಸಹೋದ್ಯೋಗಿಗಳು ಹಾಗೂ ಕಂಪನಿಗಳನ್ನು ಬೆಸೆಯುತ್ತಿದೆ. ಹೀಗಾಗಿ ಜಪಾನ್ ಜನತೆಗೆ ಕೆಲಸ ಕೇವಲ ದುಡಿಯುವ ಮಾರ್ಗವಷ್ಟೇ ಅಲ್ಲದೇ, ಸಾಮಾಜಿಕ ಗೌರವವೂ ಆಗಿದೆ.

ಜಪಾನ್‌ನಲ್ಲಿ ಜನನ ದರ ಇಳಿಮುಖವಾಗಿರುವುದು ಮತ್ತೊಂದು ಸಮಸ್ಯೆಗೆ ಕಾರಣವಾಗಿದೆ. ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಮುಂದಿನ ದಿನಗಳಲ್ಲಿ ಶ್ರಮಿಕ ವರ್ಗದವರ ಸಂಖ್ಯೆ ಕಡಿಮೆಯಾಗುವ ಕಳವಳ ಇದೆ.

ಹೀಗಾಗಿ ವಾರಕ್ಕೆ ಮೂರು ದಿನ ರಜೆ ನೀಡಿದರೆ ಜನರು ಹೆಚ್ಚು ಮಕ್ಕಳನ್ನು ಹೊಂದಲು ಹಾಗೂ ಮನೆಯಲ್ಲಿರುವ ಹಿರಿಯರನ್ನು ನೋಡಿಕೊಳ್ಳಲು ನೆರವಾಗಲಿದೆ ಎಂದೂ ಹೇಳಲಾಗುತ್ತಿದೆ.

## ರಂಭಾಪುರಿ ಜಗದ್ಗುರುಗಳ ಪ್ರವಾಸ



ರಂಭಾಪುರಿ ಪೀಠ (ಬಾಳೆಹೊನ್ನೂರು) ಸೆ.2- ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳವರ ಸೆಪ್ಟಂಬರ್ ಮಾಹೆಯ ಪ್ರವಾಸ ಕಾರ್ಯಕ್ರಮ ಈ ಕೆಳಗಿನಂತಿದೆ.

ನಾಡಿದ್ದು ದಿನಾಂಕ 4 ರಂದು ಅಜ್ಜಂಪುರ ತಾಲ್ಲೂಕು ಮಾಕೋನಹಳ್ಳಿಯಲ್ಲಿ ಇಷ್ಟಲಿಂಗ ಮಹಾಪೂಜೆ, ದಿನಾಂಕ 5 ರಂದು ಶಿವಮೊಗ್ಗದಲ್ಲಿ ಶ್ರೀ ಸ್ವಯಂಭು ಸೋಮೇಶ್ವರ ಸಭಾ ಭವನದ ಉದ್ಘಾಟನೆ, ದಿನಾಂಕ 8 ರಂದು ರಾಯಚೂರು ಕಿಲ್ಲಾ ಬೃಹನ್ಮಠದಲ್ಲಿ ಪುರಾಣ ಮಂಗಲ ಸಮಾರಂಭ, ದಿನಾಂಕ 9 ರಂದು ಹುಬ್ಬಳ್ಳಿ ತಾಲ್ಲೂಕು ಸುಳ್ಳದ ಪಂಚಗೃಹ ಹಿರೇಮಠದಲ್ಲಿ ಪುರಾಣ ಮಂಗಲ ಸಮಾರಂಭ, ದಿನಾಂಕ 10 ರಂದು ಬೆಳಗಾವಿ ಜಿಲ್ಲೆ, ರಾಮದುರ್ಗ ತಾಲ್ಲೂಕಿನ ಗೊಡಚಿ ಕ್ಷೇತ್ರದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲ ಕಟ್ಟಡದ ಶಿಲಾನ್ಯಾಸ ನೆರವೇರಿಸುವರು.

ದಿನಾಂಕ 11 ರಂದು ಹರಿಹರ ತಾಲ್ಲೂಕು ಮಲೆಬೆನ್ನೂರಿನಲ್ಲಿ ಇಷ್ಟಲಿಂಗ ಮಹಾಪೂಜಾ, ದಿನಾಂಕ 12 ಮತ್ತು ದಿನಾಂಕ 13 ರಂದು ಶಿವಮೊಗ್ಗ ಮತ್ತು ಚೋರಡಿಯಲ್ಲಿ ಪೂಜೆ, ದಿನಾಂಕ 14 ರಂದು ಬೆಂಗಳೂರಿನಲ್ಲಿ ಇಷ್ಟಲಿಂಗ ಪೂಜಾ - ಧರ್ಮ ದರ್ಶನ, ದಿನಾಂಕ 15 ರಂದು ಕೋಲಾರ ಜಿಲ್ಲೆ ನಾಗಲಾಪುರದಲ್ಲಿ ಇಷ್ಟಲಿಂಗ ಪೂಜಾ, ದಿನಾಂಕ 16 ರಂದು ಬೆಂಗಳೂರಿನಲ್ಲಿ ಇಷ್ಟಲಿಂಗ ಪೂಜೆ ನಡೆಸುವರು.

ದಿನಾಂಕ 18 ರಂದು ಬಾಳೆಹೊನ್ನೂರು ಶ್ರೀ ಪೀಠದಲ್ಲಿ ಪೌರ್ಣಿಮೆಯ ನಿಮಿತ್ಯ ವಾಸ್ತವ್ಯವಿದ್ದು, ಭಕ್ತಾದಿಗಳಿಗೆ ದರ್ಶನಾಶೀರ್ವಾದ ನೀಡುವರು. ದಿನಾಂಕ 20 ರಂದು ಅಜ್ಜಂಪುರ ತಾಲ್ಲೂಕು ಬುಕ್ಕಾಂಬುಧಿಯಲ್ಲಿ ದಾಸೋಹ ಮಂದಿರ ಉದ್ಘಾಟನಾ ಸಮಾರಂಭ, ದಿನಾಂಕ 22 ರಂದು ಶಿವಮೊಗ್ಗದಲ್ಲಿ ಇಷ್ಟಲಿಂಗ ಮಹಾಪೂಜಾ ಹಾಗೂ ದಿನಾಂಕ 23 ರಂದು ಹಾವೇರಿಯಲ್ಲಿ ಶ್ರೀ ಮಾಹೇಶ್ವರ ಕ್ರೆಡಿಟ್ ಕೋ ಆಪ್ ಸೊಸೈಟಿಯ 26ನೇ ವಾರ್ಷಿಕೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸುವರು ಎಂದು ಶ್ರೀ ಪೀಠದ ವಾರ್ತಾ ಸಂಯೋಜನಾಧಿಕಾರಿ ಸಿ.ಹೆಚ್.ಬಾಳನಗೌಡ್ರ ತಿಳಿಸಿದ್ದಾರೆ.

## ಆಂಧ್ರ, ತೆಲಂಗಾಣದಲ್ಲಿ ಮಳೆಯಿಂದ 31 ಸಾವು

ಹೈದರಾಬಾದ್, ಸೆ. 2 - ತೆಲುಗು ಭಾಷಿಗರ ಅವಳಿ ರಾಜ್ಯಗಳಾದ ತೆಲಂಗಾಣ ಹಾಗೂ ಆಂಧ್ರ ಪ್ರದೇಶದಲ್ಲಿ ಪ್ರವಾಹ ಪರಿಸ್ಥಿತಿ ಉಲ್ಬಣಿಸಿದ್ದು, 31 ಜನ ಸಾವನ್ನಪ್ಪಿದ್ದಾರೆ.

ತೆಲಂಗಾಣದಲ್ಲಿ ಮಳೆ ಸಂಬಂಧದ ಅವಘಡಗಳಲ್ಲಿ 16 ಜನ ಸಾವನ್ನಪ್ಪಿದ್ದಾರೆ. ಮಳೆ ಹಾಗೂ ಪ್ರವಾಹದಿಂದ 5,000 ಕೋಟಿ ರೂ.ಗಳ ಹಾನಿಯಾಗಿದೆ ಹಾಗೂ ಕೇಂದ್ರ ಸರ್ಕಾರ ತಕ್ಷಣಕ್ಕೆ 2,000 ಕೋಟಿ ರೂ.ಗಳ ನೆರವು ನೀಡಬೇಕು ಎಂದು ರಾಜ್ಯ ಸರ್ಕಾರ ಮನವಿ ಮಾಡಿಕೊಂಡಿದೆ. ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ ಹಾಗೂ ಕೃಷಿ ಬೆಳೆಗೆ ಅಪಾರ ಹಾನಿಯಾಗಿದೆ. ಆಂಧ್ರಪ್ರದೇಶದ ಜೊತೆಗಿನ ರೈಲ್ವೆ ಹಾಗೂ ರಸ್ತೆ ಸಂಪರ್ಕಕ್ಕೆ ಅಡ್ಡಿಯಾಗಿದೆ.

ಆಂಧ್ರಪ್ರದೇಶದಲ್ಲೂ ಸಹ ಮಳೆ ಸಂಬಂಧದ ಘಟನೆಗಳಿಂದ ಹದಿನೈದು ಜನ ಸಾವನ್ನಪ್ಪಿದ್ದಾರೆ. ಇಂಟರ್ನೆಟ್ ಹಾಗೂ ಮೊಬೈಲ್ ಸಂಪರ್ಕಕ್ಕೆ ಅಡ್ಡಿಯಾಗಿದ್ದರೆ, ಸಂಚಾರ ವ್ಯವಸ್ಥೆ ಅಸ್ತವ್ಯಸ್ತವಾಗಿದೆ. ಪ್ರಕಾಶಂ ಬ್ಯಾರೇಜ್‌ನಿಂದ 11.3 ಲಕ್ಷ ಕ್ಯೂಸೆಕ್ಸ್ ಪ್ರವಾಹದ ನೀರನ್ನು ಹೊರ ಬಿಡಲಾಗಿದೆ.

## ಕೇರಳ ಸಿಎಂ ಆಪ್ತರ ವಿರುದ್ಧ ಶಾಸಕನ ಆರೋಪ, ತನಿಖೆಗೆ ಆದೇಶ

ಕೊಟ್ಟಾಯಂ, ಸೆ. 2 - ಕೇರಳದ ಆಡಳಿತಾರೂಢ ಎಲ್.ಡಿ.ಎಫ್. ಶಾಸಕ ಪಿ.ವಿ. ಅನ್ವರ್ ಅವರು ಹಿರಿಯ ಐಪಿಎಸ್ ಅಧಿಕಾರಿಗಳ ವಿರುದ್ಧ ಮಾಡಿರುವ ಆರೋಪಗಳ ಬಗ್ಗೆ ಉನ್ನತ ಹಂತದ ತನಿಖೆ ನಡೆಸುವುದಾಗಿ ರಾಜ್ಯ ಸರ್ಕಾರ ತಿಳಿಸಿದೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ರಾಜಕೀಯ ಕಾರ್ಯದರ್ಶಿ ಪಿ. ಶಶಿ ಹಾಗೂ ಎಡಿಜಿಪಿ ಎಂ.ಆರ್. ಅಜಿತ್ ಕುಮಾರ್ ವಿರುದ್ಧ ಅನ್ವರ್ ಗಂಭೀರ ಆರೋಪಗಳನ್ನು ಮಾಡಿದ್ದರು. ಅಜಿತ್ ಕುಮಾರ್ ಅವರು ಮುಖ್ಯಮಂತ್ರಿ ಆಪ್ತರು ಎಂದೇ ಗುರುತಿಸಲಾಗುತ್ತಿದೆ. ಇದರಿಂದಾಗಿ ಸರ್ಕಾರ ತೀವ್ರ ಪೇಚಿಗೆ ಸಿಲುಕಿತ್ತು.

ಈ ಬಗ್ಗೆ ಮಾತನಾಡಿರುವ ಮುಖ್ಯಮಂತ್ರಿ ವಿಜಯನ್, ಶಾಸಕರು ಮಾಡಿರುವ ಆರೋಪಗಳ ಬಗ್ಗೆ ಉನ್ನತ ಹಂತದ ಅಧಿಕಾರಿಗಳಿಂದ ತನಿಖೆ ನಡೆಸಲಾಗುವುದು ಎಂದು ಹೇಳಿದ್ದಾರೆ. ಮುಖ್ಯಮಂತ್ರಿ ಈ ಘೋಷಣೆ ಮಾಡುವಾಗ ಅವರ ಜೊತೆ ವೇದಿಕೆ ಮೇಲೆ ಅಜಿತ್ ಕುಮಾರ್ ಸಹ ಉಪಸ್ಥಿತರಿದ್ದರು. ಕುಮಾರ್ ಅವರು ಸಚಿವರ ದೂರವಾಣಿ ಕದ್ದಾಲಿಕೆ ಮಾಡುತ್ತಿದ್ದಾರೆ ಹಾಗೂ ಬಂಗಾರದ ಕಳ್ಳ ಸಾಗಣೆ ದಂಧೆಯ ಜೊತೆ ಸಂಪರ್ಕ ಹೊಂದಿದ್ದಾರೆ. ಅವರು ಗಂಭೀರ ಅಪರಾಧಗಳಲ್ಲಿ ಭಾಗಿಯಾಗಿದ್ದಾರೆ ಎಂದು ಅನ್ವರ್ ಆರೋಪಿಸಿದ್ದರು.

## ವಿಕಲಚೇತನ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ

ದಾವಣಗೆರೆ, ಸೆ. 2 - ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಮೆಟ್ರಿಕ್ ಪೂರ್ವ ತರಗತಿಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿಕಲಚೇತನ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ವಿಕಲ ಚೇತನರ ಸಹಾಯವಾಣಿ ಮತ್ತು ಮಾಹಿತಿ ಸಲಹಾ ಕೇಂದ್ರ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳ ಕಚೇರಿ, ದೂ.ಸಂ 08192-263939 ಸಂಪರ್ಕಿಸಬಹುದು ಎಂದು ಸಬಲೀಕರಣಾಧಿಕಾರಿ ಡಾ. ಕೆ.ಕೆ. ಪ್ರಕಾಶ್ ತಿಳಿಸಿದ್ದಾರೆ.

## ಧೂಳೆಹೊಳೆಯಲ್ಲಿ ಇಂದು ಕಲೋತ್ಸವ

ಮಲೇಬೆನ್ನೂರು ಸಮೀಪದ ಧೂಳೆಹೊಳೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು ಬೆಳಗ್ಗೆ 10 ಗಂಟೆಗೆ ಹೊಳೆಸಿರಿಗೆರೆ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕ್ಷೇತ್ರ ಶಿಕ್ಷಣಾಧಿಕಾರಿ ದುರುಗಪ್ಪ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷೆ ಶ್ರೀಮತಿ ಕವಿತಾ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

## ಆದಾಯ ತೆರಿಗೆ ಕಾರ್ಯಾಗಾರ




ದಾವಣಗೆರೆ, ಸೆ.2- ಜಿಲ್ಲಾ ತೆರಿಗೆ ಸಲಹೆಗಾರರ ಸಂಘದ ವತಿಯಿಂದ ನಗರದ ಸಿಎ ಭವನದಲ್ಲಿ ನಿನ್ನೆ ಆದಾಯ ತೆರಿಗೆ ಕಾರ್ಯಾಗಾರ ನಡೆಯಿತು. ಬಿ.ಪಿ. ಸಚಿನ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು. ಹೆಚ್.ಟಿ. ಸುಧೀಂದ್ರ ರಾವ್ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಗೌರವ ಅಧ್ಯಕ್ಷ ಡಿ. ಆರ್. ಶಂಕರ್, ಕಾರ್ಯದರ್ಶಿ ಜಿ. ಮಹಾಂತೇಶ, ಉಪನ್ಯಾಸಕರಾದ ಸಚಿನ್ ಕುಮಾರ್ ಪಾಟೀಲ್, ಪಿ. ಹೇಮಾ ಸುಂದರ ರಾವ್, ತೆರಿಗೆ ಸಲಹೆಗಾರರ ವಲಯ ಉಪಾಧ್ಯಕ್ಷ ಜಂಬಗಿ ರಾಧೇಶ, ಸಂಘದ ಕಟ್ಟಡ ಕಮಿಟಿ ಅಧ್ಯಕ್ಷ ಶಿವಕುಮಾರಪ್ಪ, ಸಂಘದ ಉಪಾಧ್ಯಕ್ಷ ಹೆಚ್.ವಿ. ಸುರೇಶ್, ಸ್ಟಡಿ ಕಮಿಟಿ ಅಧ್ಯಕ್ಷ ಕೆ.ಸಿ. ನಾಗರಾಜ್, ಬಸವೇಶ್ವರ ಹಾಗೂ ಇತರರು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಜರೀಕಟ್ಟೆಯಲ್ಲಿ ಜೂಜಾಟದ ಮೇಲೆ ದಾಳಿ

ದಾವಣಗೆರೆ, ಸೆ.2- ಜರೇಕಟ್ಟೆಯ ಘನ ತ್ಯಾಜ್ಯ ವಿಲೇವಾರಿ ಘಟಕದ ಬಳಿ ಕಾನೂನು ಬಾಹಿರವಾಗಿ ಆಡುತ್ತಿದ್ದ ಇಸ್ಪೀಟ್ ಜೂಜಾಟಗಾರರ ಮೇಲೆ ಹದಡಿ ಠಾಣೆ ಪೊಲೀಸರು ದಾಳಿ ನಡೆಸಿ ನಾಲ್ವರನ್ನು ವಶಕ್ಕೆ ಪಡೆದಿದ್ದಾರೆ. ಆಪಾದಿತರಿಂದ 12 ಸಾವಿರ ರೂ. ನಗದು ವಶಪಡಿಸಿಕೊಳ್ಳಲಾಗಿದೆ.

# ಶಿಕ್ಷಣದಿಂದ ಅಷ್ಟೇ ಅಲ್ಲ, ಕ್ರೀಡೆಯಿಂದಲೂ ಉತ್ತಮ ಭವಿಷ್ಯ

## ಮಲೇಬೆನ್ನೂರು ಕ್ರೀಡಾಕೂಟದಲ್ಲಿ ಬಿಇಓ ದುರುಗಪ್ಪ ಅಭಿಮತ

ಮಲೇಬೆನ್ನೂರು, ಸೆ.2- ಶಿಕ್ಷಣದಿಂದ ಅಷ್ಟೇ ಅಲ್ಲ, ಕ್ರೀಡೆ ಕೂಡಾ ಮನುಷ್ಯನಿಗೆ ಉತ್ತಮ ಭವಿಷ್ಯ ರೂಪಿಸುತ್ತದೆ ಎಂದು ಹರಿಹರ ಬಿಇಓ ದುರುಗಪ್ಪ ಹೇಳಿದರು.



ಪಟ್ಟಣದ ನೀರಾವರಿ ಇಲಾಖೆಯ ಮೈದಾನದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢ ಶಾಲೆ ವಿಭಾಗ ಮತ್ತು ಬೀರಲಿಂಗೇಶ್ವರ ಹಿರಿಯ ಪ್ರಾಥಮಿಕ ಶಾಲೆ ವತಿಯಿಂದ ಇಂದು ಹಮ್ಮಿಕೊಂಡಿದ್ದ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಪಾಲ್ಗೊಂಡು ದೈಹಿಕ ಶಿಕ್ಷಕರಿಗೆ ಹರಿಹರ ತಾ. ಅನುದಾನಿತ ಶಾಲಾ ಶಿಕ್ಷಕರ ಒಕ್ಕೂಟದ ವತಿಯಿಂದ ನೀಡಲಾದ ಟೀ ಶರ್ಟ್‌ಗಳನ್ನು ವಿತರಿಸಿ ಅವರು ಮಾತನಾಡಿದರು.

ಕೇಂದ್ರ, ರಾಜ್ಯ ಸರ್ಕಾರಗಳು ಕ್ರೀಡಾಪಟುಗಳಿಗೆ ಉದ್ಯೋಗದಲ್ಲಿ ಆದ್ಯತೆ ನೀಡುತ್ತಿವೆ. ಆದ್ದರಿಂದ ದೈಹಿಕ ಶಿಕ್ಷಕರು ಹೆಚ್ಚು ಹೆಚ್ಚು ಮಕ್ಕಳನ್ನು ಕ್ರೀಡೆಯಲ್ಲಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸಬೇಕೆಂದು ಅವರು ತಿಳಿಸಿದರು.

ಕ್ರೀಡೆಗೆ ಅಂತರರಾಷ್ಟ್ರೀಯ ಮಾನ್ಯತೆ ಇರುವುದರಿಂದ ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಕ್ರೀಡೆಗೂ ಒತ್ತು ನೀಡಬೇಕು. ಕ್ರೀಡೆ ವಿದ್ಯಾರ್ಥಿ ಜೀವನದಲ್ಲಿ ಬಹಳ ಮಹತ್ತರವಾದ ಘಟ್ಟವೆಂದ ದುರುಗಪ್ಪ ಅವರು, ಮಕ್ಕಳು ದೈಹಿಕವಾಗಿ ಸದೃಢವಾಗಿದ್ದರೆ, ಎಲ್ಲಾ ಕ್ರಿಯೆಗಳಲ್ಲಿ ಸಫಲರಾಗಲು ಸಾಧ್ಯ ಎಂದರು.

ಕ್ರೀಡಾಕೂಟಗಳಲ್ಲಿ ದೈಹಿಕ ಶಿಕ್ಷಕರು ನ್ಯಾಯಯುತವಾದ ತೀರ್ಪು ನೀಡಬೇಕು. ಮಕ್ಕಳಿಗೆ ಅನ್ಯಾಯ ಮಾಡಬೇಡಿ ಎಂದು ಬಿಇಓ ದುರುಗಪ್ಪ ಕಿವಿಮಾತು ಹೇಳಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್, ಹರಿಹರ ತಾ. ಅನುದಾನಿತ ಶಾಲೆಗಳ ಶಿಕ್ಷಕರ ಒಕ್ಕೂಟದ ಅಧ್ಯಕ್ಷ ಕೆ.ಭೀಮಪ್ಪ, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪಪ್ರಾಚಾರ್ಯ ಜಗದೀಶ್ ಉಜ್ಜಯ್ಯನವರ್, ಬೀರಲಿಂಗೇಶ್ವರ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಡಿ.ಕೆ.ಕರಿಬಸಪ್ಪ, ಎಸ್‌ಬಿಕೆಎಂ ಶಾಲೆಯ ಮುಖ್ಯ ಶಿಕ್ಷಕ ದಂಡಿ ತಿಪ್ಪೇಸ್ವಾಮಿ, ಲಯನ್ಸ್ ಶಾಲೆ ಮುಖ್ಯ ಶಿಕ್ಷಕ ಕೆ.ಚಂದ್ರಶೇಖರ್, ಸರ್ಕಾರಿ ಉರ್ದು ಶಾಲೆ ಶಿಕ್ಷಕ ರೇವಣಸಿದ್ದಪ್ಪ ಅಂಗಡಿ, ಉರ್ದು ಶಾಲೆಯ ಮುಖ್ಯ ಶಿಕ್ಷಕ ಮಹಮದ್ ಖಲೀಲ್, ಆಶ್ರಯ ಶಾಲೆ ಮುಖ್ಯ ಶಿಕ್ಷಕ ಶಶಿಕುಮಾರ್, ಪಿಡಬ್ಲ್ಯೂಡಿ ಶಾಲೆ ಮುಖ್ಯ ಶಿಕ್ಷಕ ಕುಮಾರ್, ತಾ. ಸರ್ಕಾರಿ ನೌಕರರ ಸಂಘದ ನಿರ್ದೇಶಕ ಬಿ.ಹೆಚ್.ಶಿವಕುಮಾರ್, ಶಿಕ್ಷಕರ ಸಂಘದ ವೀರಣ್ಣ, ಬಡ್ತಿ ಮುಖ್ಯ ಶಿಕ್ಷಕ ವೆಂಟೇಶ್, ದೈಹಿಕ ಶಿಕ್ಷಕರಾದ ಬಿ.ಹಾಲಪ್ಪ, ಎ.ಸಿ.ಹನುಮಗೌಡ, ಶ್ರೀನಿವಾಸ್ ರೆಡ್ಡಿ, ಶಿವಕುಮಾರ್ ಹಿರೇಮಠ, ಧನಿಕ್, ಎಂ.ಹೆಚ್.ಅರುಣ್‌ಕುಮಾರ್, ಪತ್ರಕರ್ತರಾದ ಕೆ.ಎನ್.ಹಳ್ಳಿ ನಾಗೇಂದ್ರಪ್ಪ, ಜಿಗಳಿ ಪ್ರಕಾಶ್, ಸದಾನಂದ್ ಹೆಚ್.ಎಂ ಮತ್ತು ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಬಿ.ಬಸವರಾಜ್, ಯುವ ಮುಖಂಡ ಕುಂಬಳೂರು ವಾಸು ಸೇರಿದಂತೆ ಇನ್ನೂ ಅನೇಕರು ಈ ವೇಳೆ ಭಾಗವಹಿಸಿದ್ದರು.

# ಮಹಿಳಾ ಸಾಹಿತ್ಯಕ್ಕೆ ಹೆಳವನಕಟ್ಟೆ ಗಿರಿಯಮ್ಮ ಕೊಡುಗೆ ಅದ್ವಿತೀಯ

## ಕೃತಿ ಬಿಡುಗಡೆಯಲ್ಲಿ ಹಂಪಿ ಕನ್ನಡ ವಿವಿ ವಿಶ್ರಾಂತ ಕುಲಪತಿ ಡಾ. ಎ.ಮುರಿಗೆಪ್ಪ ಅಭಿಮತ

### ರಾಣೇಬೆನ್ನೂರು

ರಾಣೇಬೆನ್ನೂರು,ಸೆ.2- ಇದುವರೆಗೂ ಪ್ರಕಟವಾಗಿ ರುವ ಕನ್ನಡ ಸಾಹಿತ್ಯದಲ್ಲಿ ಹೆಳವನಕಟ್ಟೆ ಗಿರಿಯಮ್ಮನ ಕಾವ್ಯಗಳಲ್ಲಿ ಹೊಸ ವಿಚಾರ ಕಾಣುತ್ತದೆ. ಅವಳ ಅಪ್ಪಟ ಬದುಕು ಸಾಹಿತ್ಯದ ಕೃತಿಗಳ ಸ್ಥೂಲವಾದ ಪರಿಚಯಾತ್ಮಕದಂತಿದೆ. ಮಹಿಳಾ ಸಾಹಿತ್ಯಕ್ಕೆ ಗಿರಿಯಮ್ಮ ಕೊಟ್ಟ ಕೊಡುಗೆ ಅದ್ವಿತೀಯವಾದುದು ಎಂದು ಹಂಪಿ ಕನ್ನಡ ವಿವಿ ವಿಶ್ರಾಂತ ಕುಲಪತಿ ಡಾ. ಎ.ಮುರಿಗೆಪ್ಪ ಹೇಳಿದರು.



ನಿನ್ನೆ ಸಂಜೆ ಇಲ್ಲಿನ ಸಾಹಿತ್ಯ ಭವನದಲ್ಲಿ ಕೆ.ಎಚ್.ಮುಕ್ಕಣ್ಣನವರ 'ಹೆಳವನಕಟ್ಟಿ ಗಿರಿಯಮ್ಮ ಸ್ತ್ರೀ ವಾದಿ ಚಿಂತನೆಗಳು' ಮತ್ತು 'ಕಡಗಣ್ಣಲಿ ನೋಡಿದಿರೆನ್ನಯ್ಯ ಹೆಳವನಕಟ್ಟಿ ಗಿರಿಯಮ್ಮ' ಗ್ರಂಥಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿ, ಈ ಕೃತಿಗಳು ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕ ಗ್ರಂಥಗಳಾಗಿವೆ ಎಂದರು.

ಲೌಕಿಕ ಬದುಕಿನಲ್ಲಿ ಪಾರಮಾರ್ಥತೆ ಸಾಧಿಸಿದ ಸಂತಕವಿ ಗಿರಿಯಮ್ಮನ ಸಾಹಿತ್ಯ ಸದಾಕಾಲ ಸ್ಮರಣೀಯ. ಗಿರಿಯಮ್ಮನ ಅನೇಕ ಗೀತೆಗಳಲ್ಲಿ ಅವಳ ಬದುಕಿನ ಅಂಶಗಳಿವೆ. ಗಿರಿಯಮ್ಮನ ಭಕ್ತಿಗೂ ಅವಳ ಹಾಡಿಗೂ ನಿಕಟ ಸಂಬಂಧವಿದೆ. ಭಕ್ತಿ ಎಂದರೆ ಪರಮಾತ್ಮನ ವಿಷಯದಲ್ಲಿ ಪ್ರೀತಿ ಎಂದರ್ಥ ಎನ್ನುವುದನ್ನು ಗಿರಿಯಮ್ಮ ಸ್ಥಿರಗೊಳಿಸಿದಳು ಎಂದು ಕೃತಿ ಪರಿಚಯಿಸಿದ ಶಿವಮೊಗ್ಗ ಕುವೆಂಪು ವಿಶ್ವವಿದ್ಯಾಲಯದ ನಿರ್ದೇಶಕ ಶಿವಾನಂದ ಕೆಳಗಿನಮನಿ ಹೇಳಿದರು.

ಸಂಶೋಧನೆ ಎನ್ನುವುದು ನಿರಂತರ ಪ್ರಕ್ರಿಯೆ. ಆಕರ ದೊರೆತಂತೆ ಮರುಶೋಧನೆ ಗಟ್ಟಿಗೊಳ್ಳುತ್ತದೆ. ಹೆಳವನಕಟ್ಟಿ ಗಿರಿಯಮ್ಮ ಕುರಿತು ಹೆಚ್ಚು ಹೆಚ್ಚು ಪಿಎಚ್‌ಡಿ ಮಹಾಪ್ರಬಂಧಗಳು ಬರಬೇಕು.

ಕೃತಿ ರಚನೆ ಪ್ರಯಾಸದ ಕೆಲಸ. ಓದುಗರು ಹೆಚ್ಚಾದರೆ ರಚಿಸಿದವರ ಕಾರ್ಯ ಸಾರ್ಥಕವಾಗುತ್ತದೆ ಎಂದು ಕೃತಿ ಪರಿಚಯಿಸಿದ ಬ್ಯಾಡಗಿ ಸರ್ಕಾರಿ ಕಾಲೇಜ್ ಪ್ರಾಧ್ಯಾಪಕರಾದ ಪುಷ್ಪಾವತಿ ಶಲವಡಿ ಹೇಳಿದರು.

ಜಿಪಂ ಮಾಜಿ ಅಧ್ಯಕ್ಷ ಏಕನಾಥ ಭಾನುವಳ್ಳಿ, ವರ್ತಕರ ಸಂಘದ ಅಧ್ಯಕ್ಷ ಗದಿಗೆಪ್ಪ ಹೊಟ್ಟಿಗೌಡ್ರ, ಕಸಾಪ ಅಧ್ಯಕ್ಷ ಪ್ರಭಾಕರ ಶಿಗ್ಲಿ, ನಿಕಟಪೂರ್ವ ಅಧ್ಯಕ್ಷ ಜಿ.ಬಿ. ಮಾಸಣಗಿ, ವೀರೇಶ ಜಂಬಗಿ, ಎ.ಬಿ.ರತ್ನಮ್ಮ, ಪ್ರೊ. ಲಿಂಗರಾಜ ಕಮ್ಮಾರ, ಬಿ.ಪಿ. ಶಿಡೇನೂರ, ಸೀತಾರಾಮ ಕಣೇಕಲ್ಲ, ಶ್ರೀನಿವಾಸ ಏಕಬೋಟೆ ಹಾಗೂ ಕೃತಿಕಾರ ಕೆ.ಹೆಚ್. ಮುಕ್ಕಣ್ಣ ಮತ್ತಿತರರಿದ್ದರು.


**ಶ್ರೀ ಓಂಕಾರ ಹುಚ್ಚನಾಗಲಿಂಗಸ್ವಾಮಿ ಗ್ರಾಮೀಣ ವಿದ್ಯಾ ಸಂಸ್ಥೆ (ರಿ) ಮುಸ್ಟೂರು–577528**
**ಜಗಳೂರು ತಾ: ದಾವಣಗೆರೆ ಜಿ:**

**ನೇಮಕಾತಿ ಪ್ರಕಟಣೆ**

ಸರ್ಕಾರಿ ಆದೇಶ ಪ.ಸಂ:ಸಿ.ಆ.ಸು–01/ಸಹಿಮ–2022 ದಿನಾಂಕ:28.12.2022ರ ಆದೇಶದ ಪ್ರಕಾರ ಮಾನ್ಯ ನಿರ್ದೇಶಕರು(ಪ್ರೌಢ ಶಿಕ್ಷಣ)ಆಯುಕ್ತರ ಕಛೇರಿ ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು ರವರ ಆದೇಶ ಪ.ಸಂ: ಸಿ28(4)(8)ಶಾಶಿಅಖಾಹುಭನು:ಇ–1281156/1/2023–24 ದಿನಾಂಕ: 20–08–2024 ರ ಆದೇಶದ ಪ್ರಕಾರ ನಮ್ಮ ವಿದ್ಯಾ ಸಂಸ್ಥೆಯಲ್ಲಿನ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಿಕೊಳ್ಳಲು ಅನುಮತಿಸಿರುವಂತೆ ಈ ಕೆಳಗೆ ಕಾಣಿಸಿದ ಬೋಧಕ ಸಹ ಶಿಕ್ಷಕರ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ | ಹುದ್ದೆಯ ವಿವರ | ಅನುಮತಿಸಿದ ವಿಷಯ | ವಿದ್ಯಾರ್ಹತೆ | ಮೀಸಲಾತಿ ಸೂಚ್ಯಂಕ | ಮೀಸಲಾತಿ ಗುಂಪು | ಮಾಧ್ಯಮ | ಹುದ್ದೆಯ ಸಂಖ್ಯೆ |
|---|---|---|---|---|---|---|---|
| 01 | ಸಹ ಶಿಕ್ಷಕರು | ವಿಜ್ಞಾನ (ಸಿಬಿಝೆಡ್) | ಬಿಎಸ್‌ಸಿ. ಬಿ.ಇಡಿ | 01 | ಪ.ಜಾತಿ | ಕನ್ನಡ | 01 |
| 02 | ಸಹ ಶಿಕ್ಷಕರು | ಕಲಾ (ಸಮಾಜ, ವಿಜ್ಞಾನ) | ಬಿಎ. ಬಿ.ಇಡಿ | 02 | ಸಾಮಾನ್ಯ ಅಭ್ಯರ್ಥಿ | ಕನ್ನಡ | 01 |

ಈ ಜಾಹೀರಾತು ಪ್ರಕಟಣೆಗೊಂಡು 21–ದಿನಗಳ ಒಳಗಾಗಿ ಅರ್ಹ ಅಭ್ಯರ್ಥಿಗಳು ಸಂಪೂರ್ಣ ಮಾಹಿತಿಯೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ಜಾತಿ ಮತ್ತು ನಿಗದಿತ ವಿದ್ಯಾರ್ಹತೆಯ ಪ್ರಮಾಣ ಪತ್ರಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ, ಪ್ರಕ್ರಿಯೆ ಶುಲ್ಕ ಎಸ್.ಸಿ/ಎಸ್.ಟಿ ಮತ್ತು ಪ್ರವರ್ಗ–1 ಅಭ್ಯರ್ಥಿಗಳಿಗೆ ರೂ:500.00ಗಳ ಮತ್ತು ಸಾಮಾನ್ಯ ಅಭ್ಯರ್ಥಿಗಳಿಗೆ ರೂ:1000.00ಗಳ ಹುಂಡಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಅಧ್ಯಕ್ಷರು ಶ್ರೀ ಓಂಕಾರ ಹುಚ್ಚನಾಗಲಿಂಗಸ್ವಾಮಿ ಗ್ರಾಮೀಣ ವಿದ್ಯಾ ಸಂಸ್ಥೆ(ರಿ) ಮುಸ್ಟೂರು ಜಗಳೂರು ತಾ: ದಾವಣಗೆರೆ ಜಿ: ಇವರ ಹೆಸರಿನಲ್ಲಿ ಪಡೆದು ಅರ್ಜಿಯನ್ನು ಸಂಸ್ಥೆಯ ಅಧ್ಯಕ್ಷರ ವಿಳಾಸಕ್ಕೆ ಸ್ವೀಕೃತಿ ಅಂಚೆಯ ಮೂಲಕ ಸಲ್ಲಿಸಬೇಕು. ಅರ್ಜಿಯ ಒಂದು ಪ್ರತಿಯನ್ನು ಉಪನಿರ್ದೇಶಕರು (ಆಡಳಿತ)ಶಾಲಾ ಶಿಕ್ಷಣ ಇಲಾಖೆ ದಾವಣಗೆರೆ ಇವರಿಗೆ ಸಲ್ಲಿಸಬೇಕು. ಅವಧಿ ಮುಗಿದ ನಂತರ ಬಂದ ಮತ್ತು ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ನಿಯಮಾನುಸಾರ ಅರ್ಹ ಅಭ್ಯರ್ಥಿಗಳಿಗೆ ಅಂಚೆಯ ಮೂಲಕ ಸಂದರ್ಶನದ ದಿನಾಂಕವನ್ನು ತಿಳಿಸಲಾಗುವುದು.

**ಅರ್ಜಿ ಸಲ್ಲಿಸುವ ವಿಳಾಸ:** ಶ್ರೀ ಷ||ಬ್ರ||ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು
ಅಧ್ಯಕ್ಷರು ಶ್ರೀ ಓಂಕಾರ ಹುಚ್ಚನಾಗಲಿಂಗಸ್ವಾಮಿ ಗ್ರಾಮೀಣ ವಿದ್ಯಾ ಸಂಸ್ಥೆ(ರಿ), ಮುಸ್ಟೂರು ಜಗಳೂರು ತಾ: ದಾವಣಗೆರೆ ಜಿ:–577528.



# ಪ್ರಾಯೋಗಿಕವಿಲ್ಲದೇ ಅಂಕಗಳಿಗೆ ಅತಿ ಒತ್ತು ವಿದ್ಯಾರ್ಥಿಗಳ ಕಲಿಕೆಗೆ ಹಿನ್ನಡೆ

**ಸಮಗ್ರ ಕಲಿಕೆಗಾಗಿ ಶಿಕ್ಷಣ ವಲಯ ಸಾಗಬೇಕಾದ ದಾರಿ ಇನ್ನೂ ಬಹಳ ಇದೆ. ಶೈಕ್ಷಣಿಕ ವಲಯದವರು ಈ ದಿಸೆಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳದೇ ಇದ್ದರೆ, ಹತ್ತಾರು ವರ್ಷಗಳ ಹಿಂದಿನ ಕಾಲಕ್ಕೆ ಮಕ್ಕಳನ್ನು ದೂಡಿದಂತಾಗುತ್ತದೆ**

ನಮ್ಮ ದೇಶದಲ್ಲಿ ವಿದ್ಯಾರ್ಥಿಗಳ ಅಂಕಗಳ ಮೂಲಕ ಪ್ರತಿಭೆಯನ್ನು ಅಳೆಯುತ್ತೇವೆ. ಶೇ. 90%ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸುವ ವಿದ್ಯಾರ್ಥಿಯನ್ನು 'ಅದ್ಭುತ' ಎಂದು ಪರಿಗಣಿಸುವುದು ಹಾಗೂ ಕಡಿಮೆ ಅಂಕ ಗಳಿಸುವವರನ್ನು ಭವಿಷ್ಯವಿಲ್ಲದ ದುರ್ಬಲ ಎಂದು ಪರಿಗಣಿಸುವುದು ಸಾಮಾನ್ಯವಾಗಿದೆ.

ಬ್ರಿಟಿಷರ ಕಾಲದ ಪಠ್ಯಕ್ರಮವನ್ನು ಬದಲಿಸದೇ ಇನ್ನೂ ಉಳಿಸಿಕೊಂಡಿರುವುದೇ ಸಮಸ್ಯೆಗೆ ಕಾರಣ. ಶಿಕ್ಷಣದ ಮೂಲಕ ಸರ್ವತೋಮುಖ ಬೆಳವಣಿಗೆ ಕಾಣುವುದಕ್ಕಿಂತ, ಅಂಕ ಗಳಿಸುವುದಕ್ಕೇ ಒತ್ತು ನೀಡಲಾಗುತ್ತಿದೆ. ಪುಸ್ತಕದ ಜ್ಞಾನವನ್ನು ತಲೆಮಾರುಗಳು ಮತ್ತು ತಲೆಮಾರು ಗಳ ವಿದ್ಯಾರ್ಥಿಗಳಿಗೆ ರವಾನಿಸಲಾಗುತ್ತದೆ. ಈಗಿರುವ 90% ಶಿಕ್ಷಣವು ಸೈದ್ಧಾಂತಿಕವಾಗಿದೆ. ವಿದ್ಯಾರ್ಥಿಗಳ ಕಡೆಯಿಂದ ಪ್ರಾಯೋಗಿಕ ಕಲಿಕೆ ಮತ್ತು ಸಂಶೋಧನೆಗೆ ಅವಕಾಶವೇ ಕಡಿಮೆ.

ಸೃಜನಾತ್ಮಕ ಕಲಿಕೆ ಮತ್ತು ಚಿಂತನೆಗೆ ಯಾವುದೇ ಸ್ಥಳವಿಲ್ಲ ಮತ್ತು ವಿದ್ಯಾರ್ಥಿಗಳು ಯಾವಾಗಲೂ ನಿರ್ದಿಷ್ಟ ಪಠ್ಯಕ್ರಮಕ್ಕೆ ಬದ್ಧರಾಗಿರುತ್ತಾರೆ. ಶಾಲಾ ಕೋಣೆಯಿಂದ ಹೊರಗೆ ಹೋಗಲು ಮತ್ತು ಅವರ ಅನಿಸಿಕೆಗಳ ಬಗ್ಗೆ ಪ್ರೋತ್ಸಾಹಿಸುವುದಿಲ್ಲ.

ನಮ್ಮ ಬೋಧನಾ ವಿಧಾನವು ಹೆಚ್ಚು ಏಕತಾನತೆಯಿಂದ ಕೂಡಿದೆ ಮತ್ತು ಅದರಲ್ಲಿ ಚಲನಶೀಲತೆ ಮತ್ತು ಚುರುಕುತನದ ಕೊರತೆಯಿದೆ. ವಿದ್ಯಾರ್ಥಿಗಳು ಬಹುಪಾಲು ಸಮಯ ಶಾಲಾ ಕೋಣೆಗಳಲ್ಲಿ ಪಾಠ ಕೇಳುವುದಕ್ಕೆ ಸೀಮಿತ. ಈ ರೀತಿಯ ಕಲಿಕೆ ಎಷ್ಟರ ಮಟ್ಟಿಗೆ ಉಪಯುಕ್ತ ಎಂಬುದೂ ಪ್ರಶ್ನಾರ್ಹ.

ಭಾರತೀಯ ಶಿಕ್ಷಣ ಕ್ಷೇತ್ರದಲ್ಲಿ ವಾರ್ಷಿಕ ಪರೀಕ್ಷೆಯ ಫಲಿತಾಂಶಗಳು ಮತ್ತು ಬೋರ್ಡ್ ಪರೀಕ್ಷೆಗಳು ಅತ್ಯಂತ ಮಹತ್ವವನ್ನು ಹೊಂದಿವೆ. ಹೆಚ್ಚು ಅಂಕ ಗಳಿಸದ ವಿದ್ಯಾರ್ಥಿಗಳು ಮಾನಸಿಕವಾಗಿ ಕುಗ್ಗುತ್ತಾರೆ ಹಾಗೂ ಆತ್ಮವಿಶ್ವಾಸ ಕಳೆದುಕೊಳ್ಳುತ್ತಾರೆ.

ಕ್ರೀಡೆ, ಕಲೆ ಮತ್ತು ಕರಕುಶಲ, ಪಠ್ಯೇತರ ಚಟುವಟಿಕೆಗಳ ಮೂಲಕ ಮಾಡುವ ಸಾಧನೆಯನ್ನು ಸಮಾಜ, ಪೋಷಕರು ಮತ್ತು ಸಂಸ್ಥೆಗಳು ಹೆಚ್ಚು ಪರಿಗಣಿಸುವುದಿಲ್ಲ. ಶಿಕ್ಷಕರು ತಮ್ಮ ಸ್ವಂತ ಪಠ್ಯಕ್ರಮವನ್ನು ಪೂರ್ಣಗೊಳಿಸಲು ಆಟ ಹಾಗೂ ಪಠ್ಯೇತರ ಚಟುವಟಿಕೆಗಳಿಗೆ ಕತ್ತರಿ ಹಾಕುವುದು ಸಾಮಾನ್ಯ. ಇದರಿಂದಾಗಿ ಕಲಿಕೆಯ ಮೂಲ ಉದ್ದೇಶವೇ ಮರೆಯಾಗುತ್ತಿದೆ.

ಕಲಿಕೆಯು ಸೃಜನಾತ್ಮಕ ಪ್ರಕ್ರಿಯೆಯಾಗಿದೆ. ಒಬ್ಬ ವ್ಯಕ್ತಿಯು ಸೃಜನಾತ್ಮಕ ಮತ್ತು ಪ್ರಾಯೋಗಿಕ ತೀರ್ಮಾನಗಳ ಮಿಶ್ರಣದೊಂದಿಗೆ ಮಾಹಿತಿಯನ್ನು ಯೋಚಿಸಲು, ಪ್ರತಿಕ್ರಿಯಿಸಲು, ಕಾರ್ಯನಿರ್ವಹಿಸಲು ಅವಕಾಶ ನೀಡಬೇಕಿದೆ.

ಗಣಿತ ಹಾಗೂ ವಿಜ್ಞಾನದ ವಿಷಯಗಳೇ ಶ್ರೇಷ್ಠ ಎಂಬುದು ಮತ್ತೊಂದು ತಪ್ಪು ಕಲ್ಪನೆ. ವಾಸ್ತವವಾಗಿ, ಸಾಮಾನ್ಯ ಗಣಿತ ಮತ್ತು ವಿಜ್ಞಾನದ ಜೊತೆಗೆ ಸೃಜನಶೀಲ ವಿಷಯಗಳನ್ನು ಕಲಿಸಬೇಕಿದೆ. ಇದು ವಿದ್ಯಾರ್ಥಿಗಳು ನಂತರದಲ್ಲಿ ಪ್ರಪಂಚ ಅರ್ಥ ಮಾಡಿಕೊಳ್ಳಲು ನೆರವಾಗುತ್ತದೆ.

ನಾವು ಇಂದಿಗೂ ಕಪ್ಪು ಹಲಗೆ ಮತ್ತು ಸೀಮೆಸುಣ್ಣವನ್ನು ಬೋಧನೆಯ ಪ್ರಮುಖ ವಿಧಾನವಾಗಿ ಬಳಸುತ್ತೇವೆ. ಇ-ಲರ್ನಿಂಗ್ ಮೋಡ್‌ಗೆ ಬದಲಾಗುವ ಅಲೆ ಇದ್ದರೂ, ಅದು ಬಹಳ ಅಳವಡಿಕೆ ಕಡಿಮೆ ಇದೆ.

ಸಮಗ್ರ ಕಲಿಕೆಗಾಗಿ ಶಿಕ್ಷಣ ವಲಯ ಸಾಗಬೇಕಾದ ದಾರಿ ಇನ್ನೂ ಬಹಳ ಇದೆ. ಶೈಕ್ಷಣಿಕ ವಲಯದವರು ಈ ದಿಸೆಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳದೇ ಇದ್ದರೆ, ಹತ್ತಾರು ವರ್ಷಗಳ ಹಿಂದಿನ ಕಾಲಕ್ಕೆ ಮಕ್ಕಳನ್ನು ದೂಡಿದಂತಾಗುತ್ತದೆ.

**- ಡಾ. ಗಣೇಶ್ ಪೂಜಾರಯ್ಯ**
ಮಾನಸಿಕ ಸಮಾಲೋಚಕರು, ಜೆ.ಐ.ಟಿ.
ಸಹಾಯ ಪ್ರಾಧ್ಯಾಪಕರು, ದಾವಣಗೆರೆ.

# ನಗರಸಭೆ ಅಧ್ಯಕ್ಷರಾಗಿ ಕವಿತಾ ಮಾರುತಿ



**(1ನೇ ಪುಟದಿಂದ)** ಉಪಾಧ್ಯಕ್ಷರಿಗೆ ಅಭಿನಂದನೆಗಳು ತಿಳಿಸಿದರು.

ಜೆಡಿಎಸ್ ಮುಖಂಡರು, ಕಾರ್ಯಕರ್ತರು ಪಟಾಕಿ ಸಿಡಿಸಿ ಸಿಹಿ ಹಂಚುವ ಮೂಲಕ ವಿಜಯೋತ್ಸವ ಆಚರಿಸಿದರು. ಅಧ್ಯಕ್ಷ-ಉಪಾಧ್ಯಕ್ಷರು ಜೆಡಿಎಸ್ ಕಚೇರಿಗೆ ತೆರಳಿ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಅವರಿಗೆ ಶಾಲು, ಹಾರ ಹಾಕಿ ಧನ್ಯವಾದ ಹೇಳಿದರು.

ಈ ವೇಳೆ ನೂತನ ಅಧ್ಯಕ್ಷೆ ಕವಿತಾ ಮಾರುತಿ ಮಾತನಾಡಿ, ನನಗೆ ಅವಿರೋಧವಾಗಿ ಆಯ್ಕೆಯಾಗುವುದಕ್ಕೆ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಶಾಸಕ ಬಿ.ಪಿ. ಹರೀಶ್, ಕಾಂಗ್ರೆಸ್ ಪಕ್ಷದ ಶ್ರೀನಿವಾಸ್ ನಂದಿಗಾವಿ ಸೇರಿದಂತೆ ನಗರಸಭೆಯ ಸರ್ವ ಸದಸ್ಯರು ಸಹಕಾರ ನೀಡಿದ್ದಾರೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹರಿಹರವನ್ನು ಮಾದರಿ ನಗರವನ್ನಾಗಿ ಮಾಡುವುದಕ್ಕೆ ಶ್ರಮಿಸುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ, ನಗರಸಭೆ ಸದಸ್ಯರಾದ ಎ. ವಾಮನಮೂರ್ತಿ, ಶಂಕರ್ ಖಟಾವ್ಕರ್, ಕೆ.ಜಿ. ಸಿದ್ದೇಶ್, ರತ್ನ ಡಿ. ಉಜ್ಜೇಶ್, ಪಕ್ಕೀರಮ್ಮ, ನಿಂಬಕ್ಕ ಚಂದಪೂರ್, ಉಷಾ ಮಂಜುನಾಥ್, ಅಶ್ವಿನಿ ಕೆ.ಜಿ. ಕೃಷ್ಣ, ಪಿ.ಎನ್ ವಿರೂಪಾಕ್ಷಪ್ಪ, ಆರ್.ಸಿ. ಜಾವೇದ್, ಎಸ್.ಎಂ ವಸಂತ್, ಸುಮಿತ್ರಾ, ನಾಗರತ್ನ, ಶಮೀನ್ ಭಾನು ದಾದಾಪೀರ್, ಶಹಜಾದ್ ಸನಾವುಲಾ, ರಜನಿಕಾಂತ್, ದಿನೇಶ್ ಬಾಬು, ಹನುಮಂತಪ್ಪ, ಬಾಬುಲಾಲ್, ಅಬ್ದುಲ್ ಅಲಿಂ, ಮುಜಾಮಿಲ್ ಬಿಲ್ಲು, ದಾದಾ ಖಲಂದರ್, ಇಬ್ರಾಹಿಂ, ನಾಮನಿರ್ದೇಶನ ಸದಸ್ಯರಾದ ಕೆ.ಬಿ. ರಾಜಶೇಖರ್, ಸಂತೋಷ ದೊಡ್ಡಮನಿ, ಮುಖಂಡರಾದ ಜೆಡಿಎಸ್‌ನ ಪಕ್ಷದ ಜಿ.ನಂಜಪ್ಪ, ಅಡಕಿ ಕುಮಾರ್, ಫೈನಾನ್ಸ್ ಮಂಜುನಾಥ್, ನಗರಸಭೆ ಸಿಬ್ಬಂದಿ ವರ್ಗದವರಾದ ಶಿವಕುಮಾರ್, ರವಿಪ್ರಕಾಶ್, ಸಂತೋಷ, ತಿಪ್ಪೇಸ್ವಾಮಿ, ಸಿಪಿಐ ದೇವಾನಂದ್, ಪಿಎಸ್‌ಐ ವಿಜಯಕುಮಾರ್ ಹಾಗೂ ಇತರರು ಹಾಜರಿದ್ದರು.

# 'ಉತ್ತರೆ ಮಳೆ' ಕವಿತೆ ಬಿಎಸ್ಸಿ ತರಗತಿ ಪಠ್ಯಕ್ಕೆ ಆಯ್ಕೆ

**(1ನೇ ಪುಟದಿಂದ)** ಡಾ. ಜೋಗಿನಕಟ್ಟೆ ಮಂಜುನಾಥ್ ಮತ್ತು ಸಂಪಾದಕ ಡಾ. ಹೆಚ್.ಎಂ. ಲೋಹಿತ್ ಅವರುಗಳು ಈ ಆಯ್ಕೆ ಮಾಡಿದ್ದಾರೆ. ಮಲ್ಲೇಶ್ ಅವರು ಈವರೆಗೆ ಎರಡು ಕವನ ಸಂಕಲನ, ಎರಡು ರಾಜಕೀಯ ವಿಡಂಬನೆ, ಹಲವು ಸಂಪಾದಿತ ಕೃತಿಗಳನ್ನು ಪ್ರಕಟಿಸಿದ್ದಾರೆ.

# ಭಾರತ ವಿಕಾಸ ಪರಿಷದ್‌ನಿಂದ ರಸಪ್ರಶ್ನೆ, ಗಾಯನ ಸ್ಪರ್ಧೆ : ಬಹುಮಾನ ವಿತರಣೆ







ದಾವಣಗೆರೆ, ಸೆ.2- ಭಾರತ ವಿಕಾಸ ಪರಿಷದ್ ಸ್ವಾಮಿ ವಿವೇಕಾನಂದ ಶಾಖೆ ವತಿಯಿಂದ ನಗರದ ಸಿದ್ದಗಂಗಾ ವಿದ್ಯಾಸಂಸ್ಥೆಯಲ್ಲಿ ಭಾನುವಾರ ಶಾಖಾ ಮಟ್ಟದ ರಾಷ್ಟ್ರೀಯ ಸಮೂಹ ಗಾಯನ ಸ್ಪರ್ಧೆ ಮತ್ತು ಜಿಲ್ಲಾ ಮಟ್ಟದ ಭಾರತ್ ಕೋ ಜಾನೋ ರಸ-ಪ್ರಶ್ನೆ ಸ್ಪರ್ಧೆ ನಡೆಯಿತು.

ಸಮೂಹ ಗಾಯನ ಸ್ಪರ್ಧೆಯಲ್ಲಿ 13 ಶಾಲೆಯ ಮಕ್ಕಳು ಹಾಗೂ ಭಾರತ್ ಕೋ ಜಾನೋ ಸ್ಪರ್ಧೆಯಲ್ಲಿ 63 ಶಾಲೆಗಳ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡು ಪ್ರಶಸ್ತಿಗಳನ್ನು ಕೊರಳಿಗೇರಿಸಿಕೊಂಡರು.

**ಸಮೂಹ ಗಾಯನ ಸ್ಪರ್ಧೆ :** 'ರಾಷ್ಟ್ರೋತ್ಥಾನ ಸಿಬಿಎಸ್‌ಸಿ ಶಾಲೆಯ ವಿದ್ಯಾರ್ಥಿಗಳಾದ ಎನ್. ಪ್ರಾರ್ಥನಾ ಮತ್ತು ಅದಿತಿ ಪ್ರಮೋದ್ ಅವರ ತಂಡಕ್ಕೆ 'ಪ್ರಥಮ ಬಹುಮಾನ' ಹಾಗೂ 4 ಸಾವಿರ ನಗದು ಲಭಿಸಿದೆ. ಶಿರಮಗೊಂಡನಹಳ್ಳಿಯ 'ಅನ್‌ಮೋಲ್ ಪಬ್ಲಿಕ್' ಸ್ಕೂಲಿನ ವಿದ್ಯಾರ್ಥಿಗಳಾದ ಎಸ್. ರಿತನ್ಯ ವಿಭಾ ಮತ್ತು ತೃಪ್ತಿ ಎಂ. ಗಮದ್ ಅವರ ತಂಡವು ದ್ವಿತೀಯ ಬಹುಮಾನದ ಜತೆಗೆ 3 ಸಾವಿರ ನಗದು ಗಳಿಸಿದ್ದಾರೆ.

**ಭಾರತ್ ಕೋ ಜಾನೋ ಸ್ಪರ್ಧೆ :** (ಜ್ಯೂನಿಯರ್ ವಿಭಾಗ) ಬಾಪೂಜಿ ಹೆಚ್‌ಪಿಎಸ್ ಆಂಗ್ಲ ಮಾಧ್ಯಮ (ಸಿಬಿಎಸ್‌ಸಿ) ಶಾಲೆಯ ವಿದ್ಯಾರ್ಥಿಗಳಾದ ಪ್ರಚೇತಾ ಎಸ್. ರಾಜ್ ಮತ್ತು ಚಿನ್ಮಯ್ ಆರ್. ಕಲಾಲ್ ಇವರ ತಂಡಕ್ಕೆ 3 ಸಾವಿರ ನಗದು ಬಹುಮಾನದೊಂದಿಗೆ ಪ್ರಥಮ ಸ್ಥಾನ ಪಡೆದು. ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಬಿಇಎ ಹಿರಿಯ ಪ್ರಾಥಮಿಕ ಸಿಬಿಎಸ್‌ಸಿ ಶಾಲೆಯ ವಿದ್ಯಾರ್ಥಿಗಳಾದ ಎ.ಜೆ. ಶಶಾಂಕ್ ಮತ್ತು ಮೋಕ್ಷ ಅವರ ತಂಡಕ್ಕೆ 2 ಸಾವಿರ ನಗದು ಬಹುಮಾನದೊಂದಿಗೆ ದ್ವಿತೀಯ ಬಹುಮಾನ ಪಡೆದಿದ್ದಾರೆ.

(ಸೀನಿಯರ್ ವಿಭಾಗದಲ್ಲಿ) ಸಿದ್ದಗಂಗಾ ಪಿಯು ಕಾಲೇಜಿನ ಆರ್. ಅಜಯ್ ಕುಮಾರ್ ಹಾಗೂ ಭೂಮಿಕಾ ಇಟಗಿ ಅವರ ತಂಡ ಪ್ರಥಮ ಸ್ಥಾನ ಪಡೆಯುವ ಜತೆಗೆ 3 ಸಾವಿರ ನಗದು ಬಹುಮಾನ ಪಡೆದು. ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದೆ. ಅಮೃತ ಪಿಯು ಕಾಲೇಜಿನ ಸಾತ್ವಿಕ್ ಪಾಂಡು ಮತ್ತು ಅನನ್ಯ ನಿಗಮ್ ಅವರ ತಂಡ ದ್ವಿತೀಯ ಸ್ಥಾನದೊಂದಿಗೆ 2 ಸಾವಿರ ನಗದು ಲಭಿಸಿದೆ.

ಈ ವೇಳೆ ಎನ್.ಪಿ. ಮೌನೇಶಪ್ಪ, ಸಿದ್ದಗಂಗಾ ವಿದ್ಯಾ ಸಂಸ್ಥೆಯ ಮುಖ್ಯಸ್ಥೆ ಜಸ್ಟಿನ್ ಡಿಸೌಜಾ, ಮಾಗನೂರು ಬಸಪ್ಪ ಶಾಲೆಯ ಪ್ರಾಚಾರ್ಯ ಡಾ. ಪ್ರಸಾದ್, ಎಲ್.ವಿ. ನಾಗಾನಂದ್, ಕೆ.ಕೆ. ನಾಗರಾಜ್, ವೇದಾ ಅವಿನಾಶ್, ಸಿ.ಪಿ. ಗೀತಾ ಇದ್ದರು.

# ಕೆಪಿಎಸ್‌ಸಿ ಮರು ಪರೀಕ್ಷೆಗೆ ಸಿಎಂ ಆದೇಶ

**(1ನೇ ಪುಟದಿಂದ)** ಸಮರ್ಪಕವಾಗಿ ನಡೆಸುವಲ್ಲಿ ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಹೇಳಿದ್ದಾರೆ.

ಗೆಜೆಟೆಡ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಗಳ ಸಮಗ್ರತೆ ಮತ್ತು ನಂಬಿಕಾರ್ಹತೆಯನ್ನು ಎತ್ತಿಹಿಡಿದು ಪರೀಕ್ಷಾರ್ಥಿಗಳ ಹಿತರಕ್ಷಿಸಲು ಸರ್ಕಾರ ಬದ್ಧವಾಗಿದೆ ಎಂದು ಅವರು ಟ್ವೀಟ್‌ನಲ್ಲಿ ಸ್ಪಷ್ಟಪಡಿಸಿದ್ದಾರೆ.

ಕಳೆದ ಆಗಸ್ಟ್ 27ರಂದು 2023-24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ವೃಂದದ ಒಟ್ಟು 384 ಹುದ್ದೆಗಳಿಗೆ ಆಯೋಗ ಪೂರ್ವಭಾವಿ ಪರೀಕ್ಷೆ ನಡೆಸಿತ್ತು.

ಸುಮಾರು 2 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದು, ಕನ್ನಡದ ಪ್ರಶ್ನೆಗಳು ತಪ್ಪಾಗಿದ್ದವು, 60ಕ್ಕೂ ಹೆಚ್ಚು ತಪ್ಪುಗಳನ್ನು ಪತ್ತೆ ಮಾಡಲಾಗಿತ್ತು. ಇದರಿಂದ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆ ತೊಂದರೆಯಾಗಿತ್ತು. ಕೆಪಿಎಸ್‌ಸಿ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಪೂರ್ವ ಭಾವಿ ಮರುಪರೀಕ್ಷೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆದೇಶ ಹೊರಬಿದ್ದ ಬೆನ್ನಲ್ಲೇ ಟ್ವೀಟ್ ಮಾಡಿರುವ ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್, ಸರ್ಕಾರ ತನ್ನ ಲೋಪಗಳನ್ನು ಒಪ್ಪಿಕೊಂಡು ಮರುಪರೀಕ್ಷೆ ನಡೆಸಲು ಕೈಗೊಂಡಿರುವ ನಿರ್ಧಾರ ಅತ್ಯಂತ ಸ್ವಾಗತಾರ್ಹ, ಇದು ಲಕ್ಷಾಂತರ ಉದ್ಯೋಗಾಕಾಂಕ್ಷಿಗಳು ಹಾಗೂ ಪ್ರತಿಪಕ್ಷಗಳ ಹೋರಾಟಕ್ಕೆ ಸಿಕ್ಕ ಜಯವಾಗಿದೆ ಎಂದಿದ್ದಾರೆ.

ಮರುಪರೀಕ್ಷೆ ಸಮರ್ಪಕವಾಗಿ ನಡೆಸಬೇಕು, ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ತೊಂದರೆಯಾಗದಂತೆ ಪರೀಕ್ಷಾ ದಿನಾಂಕಗಳ ನಿಗದಿ, ಅಭ್ಯರ್ಥಿಗಳಿಗೆ ಪರೀಕ್ಷಾ ಕೇಂದ್ರಗಳ ಹಂಚಿಕೆ, ಪ್ರಶ್ನೆ ಪತ್ರಿಕೆಗಳ ರಚನೆ, ಕನ್ನಡ ಅನುವಾದ ಸೇರಿದಂತೆ ಎಲ್ಲ ಅಂಶಗಳನ್ನು ಪರಿಗಣಿಸಿ ಅತ್ಯಂತ ಜಾಗರೂಕತೆ ಹಾಗೂ ಸುವ್ಯವಸ್ಥಿತ ಪರೀಕ್ಷೆ ನಡೆಸಬೇಕು ಎಂದವರು ಆಗ್ರಹಿಸಿದ್ದಾರೆ.

ಪೂರ್ವಭಾವಿ ಪರೀಕ್ಷೆ ಎಡವಟ್ಟುಗಳಿಗೆ ಕಾರಣರಾದ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಕಪ್ಪುಪಟ್ಟಿಗೆ ಸೇರಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

# ಈಗ ಖರ್ಗೆ ಕುಟುಂಬಕ್ಕೆ ಸಂಕಷ್ಟ

**(1ನೇ ಪುಟದಿಂದ)** ಮಕ್ಕಳಿದ್ದಾರೆ. ಈ ಸಂಸ್ಥೆಗೆ ಖರ್ಗೆ ಅವರ ಅಳಿಯ ಹಾಗೂ ಹಾಲಿ ಸಂಸದ ರಾಧಾಕೃಷ್ಣ ಅವರು ಕಾರ್ಯದರ್ಶಿಯಾಗಿದ್ದಾರೆ ಎಂದು ಸಿರೋಯ ತಿಳಿಸಿದ್ದಾರೆ.

ಮಾರ್ಚ್ 2014ರಲ್ಲಿ ಆಗಿನ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ 16 ಎಕರೆ ಜಾಗವನ್ನು ಸಂಸ್ಥೆಗೆ 30 ವರ್ಷಗಳ ಗುತ್ತಿಗೆಗೆ ನೀಡಿತ್ತು. ಒಂದೆರಡು ವರ್ಷಗಳ ನಂತರ ಈ 16 ಎಕರೆ ಗುತ್ತಿಗೆ ನೀಡಿದ ಜಾಗಕ್ಕೆ ಇನ್ನೂ ಮೂರು ಎಕರೆ ಸೇರಿಸಲಾಗಿತ್ತು. 2017ರ ಮಾರ್ಚ್‌ನಲ್ಲಿ ಎಲ್ಲಾ 19 ಎಕರೆ ಜಾಗವನ್ನು ಉಚಿತವಾಗಿ ಸಂಸ್ಥೆಗೆ ನೀಡಲಾಯಿತು ಎಂದವರು ಆರೋಪಿಸಿದ್ದಾರೆ.

ಆಗಲೂ ಸಹ ಖರ್ಗೆ ಪುತ್ರ ಪ್ರಿಯಾಂಕ್ ಖರ್ಗೆ ಅವರು ಸಂಪುಟ ಸಚಿವರಾಗಿದ್ದರು. ಇತ್ತೀಚೆಗೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯ ಮೂಲಕವೂ ಇದೆ ಟ್ರಸ್ಟ್‌ಗೆ ಜಾಗ ನೀಡಲಾಗಿದೆ. ಈ ಎರಡು ವಿಷಯಗಳ ಬಗ್ಗೆ ಸ್ವತಂತ್ರ ಸಂಸ್ಥೆಯಿಂದ ತನಿಖೆಯಾಗಬೇಕು ಎಂದು ಸಿರೋಯ ಒತ್ತಾಯಿಸಿದ್ದಾರೆ.

ಖರ್ಗೆ ಕುಟುಂಬಕ್ಕೆ ಕರ್ನಾಟಕದಲ್ಲಿ ಅಧಿಕಾರ ದುರ್ಬಳಕೆ ಮಾಡಿಕೊಂಡು ಜಮೀನು ನೀಡಲಾಗಿದೆ. ಈ ವಿಷಯ ಬಯಲಿಗೆಳೆದಿದ್ದಕ್ಕೆ ನನಗೆ ವೈಯಕ್ತಿಕವಾಗಿ ದೂಷಣೆ ಮಾಡಲಾಗುತ್ತಿದೆ. ಖರ್ಗೆ ಕುಟುಂಬದವರು ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಭಗವಾನ್ ಗೌತಮ ಸಿದ್ದಾರ್ಥ ಅವರ ಸಿದ್ಧಾಂತಗಳಲ್ಲಿ ನಂಬಿಕೆ ಇರಿಸಿದ್ದೇ ಆದರೆ, ಅವರೇ ಮುಂದೆ ಬಂದು ತನಿಖೆಗೆ ಒತ್ತಾಯಿಸಲಿ ಎಂದು ಸಿರೋಯ ಹೇಳಿದ್ದಾರೆ.

## ವಿವರಣೆ ಕೇಳಿದ ಗೆಹ್ಲೋಟ್

**(1ನೇ ಪುಟದಿಂದ)** ಬಿಜೆಪಿ ಅರ್ಜಿ ದಾಖಲಿಸಿತು.

ಈ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ರಾಜ್ಯಪಾಲರು ಪತ್ರ ಬರೆದಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಪ್ರಿಯಾಂಕ ಖರ್ಗೆ, ಕಾಂಗ್ರೆಸ್ ನಾಯಕರ ವಿರುದ್ಧ ದೂರುಗಳು ಬಂದಾಗ ರಾಜ್ಯಪಾಲರು ಮಿಂಚಿನ ವೇಗದಲ್ಲಿ ಕ್ರಮ ತೆಗೆದುಕೊಳ್ಳುತ್ತಾರೆ. ಆದರೆ ಬಿಜೆಪಿ ಮತ್ತು ಜೆಡಿಎಸ್ ನಾಯಕರ ವಿರುದ್ಧ ದೂರುಗಳು ಬಂದಾಗ ಆಮೆ ವೇಗದಲ್ಲಿ ಸಾಗುತ್ತಾರೆ ಎಂದು ಟೀಕಿಸಿದರು.

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯ ಮೂಲಕ 5 ಎಕರೆ ಜಮೀನನ್ನು ಖರ್ಗೆ ಕುಟುಂಬದ ಸದಸ್ಯರ ಸಿದ್ಧಾರ್ಥ ವಿಹಾರ ಟ್ರಸ್ಟ್‌ಗೆ ನೀಡಲಾಗಿತ್ತು. ಇದನ್ನು ಪ್ರಶ್ನಿಸಿ ವಿಧಾನ ಪರಿಷತ್‌ನಲ್ಲಿ ವಿಪಕ್ಷ ನಾಯಕರಾಗಿರುವ ಚಲವಾದಿ ನಾರಾಯಣಸ್ವಾಮಿ ಅವರು ಆಗಸ್ಟ್ 27ರಂದು ರಾಜ್ಯಪಾಲರಿಗೆ ದೂರು ನೀಡಿದ್ದರು.

# ನಗರದಲ್ಲಿ ನಾಳೆ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಸದಸ್ಯರ ಸಭೆ

ದಾವಣಗೆರೆ, ಸೆ.2- ಜಿಲ್ಲಾ ಶರಣ ಸಾಹಿತ್ಯ ಪರಿಷತ್ ವತಿಯಿಂದ ಎಂಸಿಸಿ 'ಎ' ಬ್ಲಾಕ್‌ನ 5ನೇ ಮುಖ್ಯ ರಸ್ತೆಯ ಬಸವ ಮಂಟಪದಲ್ಲಿ ನಾಡಿದ್ದು ದಿನಾಂಕ 4ರ ಬುಧವಾರ ಬೆಳಗ್ಗೆ 11ಕ್ಕೆ ಪರಿಷತ್ತಿನ 30ನೇ ವಾರ್ಷಿಕ ಮಹಾಸಭೆಯ ಬಗ್ಗೆ ಚರ್ಚಿಸಲು, 'ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆಯ ಜಿಲ್ಲಾ ಹಾಗೂ ತಾಲ್ಲೂಕು ಕಾರ್ಯಕಾರಿ ಸಮಿತಿ ಸದಸ್ಯರ ಸಭೆ ನಡೆಯಲಿದೆ.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಸಿ. ಸೋಮಶೇಖರ್ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದೆ.


**ಸೈಟುಗಳು ಮಾರಾಟಕ್ಕಿವೆ**
ಅಥಣಿ ಕಾಲೇಜು ಹತ್ತಿರ, 30x40 North, 40 ಅಡಿ ರೋಡ್‌ಗಿದೆ. ಕೆ.ಬಿ. ಬಡಾವಣೆಯಲ್ಲಿ 40x44 South ಸೈಟು, ಎಂಸಿಸಿ ಬಿ ಬ್ಲಾಕ್‌ನಲ್ಲಿ 20x60 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಬೇಕಾಗಿದ್ದಾರೆ**
ಕಛೇರಿಯಲ್ಲಿ ಅಟೆಂಡರ್ ಕೆಲಸಕ್ಕೆ ಸ್ಥಳೀಯ ಯುವಕರು ಬೇಕಾಗಿದ್ದಾರೆ
ಅಂದನೂರು ಚಿಟ್ಸ್,
ರಾಮ್ & ಕೋ ಸರ್ಕಲ್,
ದಾವಣಗೆರೆ.

**ಸೈಟುಗಳು ಮಾರಾಟಕ್ಕಿವೆ**
ಶಂಕರ ಲೀಲಾ ಚೌಟ್ರಿ ಹತ್ತಿರ, ಎಂ.ಸಿ.ಸಿ. ಬ್ಲಾಕ್‌ನಲ್ಲಿ 40x110 North, 40x60 North, West ಕಾರ್ನರ್
ಐನಳ್ಳಿ ಚನ್ನಬಸಪ್ಪ
99166 12110

**ಸೈಟುಗಳು ಮಾರಾಟಕ್ಕಿವೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ, 30x40 ಪೂರ್ವ, 30x40 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**ಮಳಿಗೆಗಳು ಬಾಡಿಗೆಗೆ ಇವೆ**
ಪಿ.ಬಿ. ರಸ್ತೆ, ಗಾಂಧಿ ಸರ್ಕಲ್ ಹತ್ತಿರ, ಶ್ರೀ ಕಲ್ಲೇಶ್ವರ ಬಿಲ್ಡಿಂಗ್, 1ನೇ ಮಹಡಿ, 2ನೇ ಮಹಡಿ, ಸೆಲ್ಲರ್ ಮಹಡಿ, 1100 Sq.ft., ಲಿಫ್ಟ್ ಸೌಲಭ್ಯ, ATMಗೆ ಜಾಗ
99646 99096

**ಸೈಟುಗಳು ಮಾರಾಟಕ್ಕಿವೆ**
ನೂತನ ಕಾಲೇಜು ಹಿಂಭಾಗ ತರಳಬಾಳು ಕೃಷಿ ಕೇಂದ್ರ ಹಿಂಭಾಗದಲ್ಲಿ 40x60 North, 30x54 North, 30x50 West, 30x70 North, 30x50 East-South ಕಾರ್ನರ್
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು 18-35 ವರ್ಷದೊಳಗಿನ ಹುಡುಗರು, ಹುಡುಗಿಯರು ಬೇಕಾಗಿದ್ದಾರೆ.
ಸಂಪರ್ಕಿಸಿ : ಆಮಂತ್ರಣ
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
ಮೊ. 97400-01117

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ನಾರ್ತ್ ಇಂಡಿಯನ್ ಚೆಫ್, ಸೌತ್ ಇಂಡಿಯನ್ ಚೆಫ್, ಕ್ಲೀನರ್, ಸಪ್ಲೈಯರ್, ಹೆಲ್ಪರ್ ಬೇಕಾಗಿದ್ದಾರೆ.
ಕೂಡಲೇ ಕೆಳಗಿನ ನಂಬರಿಗೆ ಸಂಪರ್ಕಿಸಿ.
96328 03555

**ಪುರುಷ ಅಭ್ಯರ್ಥಿಗಳು ಕೆಲಸಕ್ಕೆ ಬೇಕಾಗಿದ್ದಾರೆ**
ಕಛೇರಿಯಲ್ಲಿ ಕೆಲಸ ನಿರ್ವಹಿಸಲು ಕಂಪ್ಯೂಟರ್‌ನಲ್ಲಿ ಎಂ.ಎಸ್. ಆಫೀಸ್ ಅನುಭವವುಳ್ಳವರು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಸಂಪರ್ಕಿಸಿರಿ: ಶ್ರೀ ರೇಣುಕಾದೇವಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ (ರಿ)
ಹೆಚ್.ಡಿ.ಎಫ್.ಸಿ. ಬ್ಯಾಂಕ್ ಪಕ್ಕ, 2ನೇ ಮಹಡಿ, ಹೆಚ್.ಎಂ. ರಸ್ತೆ, ದಾವಣಗೆರೆ 577001
94483 38657

**FULLY AUTOMATIC**
ಗ್ಯಾಸ್ ಗೀಸರ್ ಎಕ್ಸ್‌ಚೇಂಜ್
1000/- Rs. Off
ಸೇಲ್ಸ್, ಸರ್ವೀಸ್‌ಗಾಗಿ
ಮರುತ್ ಎಂಟರ್ ಪ್ರೈಸಸ್
ವೈ.ಎಂ.ಸಿ. ಕಾಂಪ್ಲೆಕ್ಸ್, ಸ್ಟೇಡಿಯಂ ಎದುರು, ಬಾಪೂಜಿ ಬ್ಯಾಂಕ್ ಹತ್ತಿರ, ದಾವಣಗೆರೆ.
98868 96574, 98458 67574

**WANTED**
PUC or Degree Pass or Fail
Computer Knowledge is must
EXCELLENT ELECTRONICS
# 2137/1, 4th Main, 3rd Cross, MCC `A' Block, Davangere - 577 002.
Contact No.
98865 15100

**HOUSE FOR RENT**
#5628/D-23 2BHK Ground Floor, 4th Main, 6th Cross (Left) East Facing Near Indoor Nehuru Stadium, S.S Badavane B Block, House Name SHIVARATNA
94489 29509

**ಬೇಕಾಗಿದ್ದಾರೆ**
ಕಂಪ್ಯೂಟರ್ ಜ್ಞಾನವುಳ್ಳ, ಕ್ಯಾಡ್ ಮತ್ತು ಲೇಔಟ್ ಪ್ಲಾನ್ ಮಾಡುವಂತಹ ಅನುಭವವಿರುವ ಮಹಿಳೆ ಬೇಕಾಗಿದ್ದಾರೆ.
ಸಂಪರ್ಕಿಸಿ : 99640-05604
76766-96963

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**WANTED**
Banking Sector Tele Caller
(Female Only)
Qualification : Any Degree
90715 55081
Interview Time : 11AM

**ಕೆಲಸ ಖಾಲಿ ಇದೆ**
ಹೋಲ್ ಸೇಲ್ ಫಾರ್ಮಾದಲ್ಲಿ ಮ್ಯಾನೇಜ್ಮೆಂಟ್ ಕೆಲಸ ಖಾಲಿ ಇದೆ. ಕರೆ ಮಾಡಿ.
74066 59695, 79751 77934

**ಮಳಿಗೆ ಬಾಡಿಗೆಗೆ ಲೀಸ್‌ಗಿದೆ**
ದಾವಣಗೆರೆ, ಪಿ.ಬಿ.ರಸ್ತೆ, ಪೈರಿಂಜನ್ ಆಫೀಸ್ ಪಕ್ಕ, ಕೆಎಸ್‌ಆರ್‌ಟಿಸಿ ಬಸ್‌ಸ್ಟ್ಯಾಂಡ್ ಹತ್ತಿರ, ಎಪಿಎಂಸಿ ಕ್ವಾಟ್ರಸ್ ಮುಂಭಾಗ, ರಸ್ತೆಗೆ ಹೊಂದಿಕೊಂಡಿರುವ ಅಗಲ 24 ಉದ್ದ 28 ವ್ಯವಹಾರಿಕ ಸ್ಥಳ ಆಗಿರುತ್ತದೆ.
NBA ಲೋಕೇಶ್
98446 81747

**ಸೋಲಾರ್ & ವಾಟರ್ ಫಿಲ್ಟರ್ ಸರ್ವೀಸ್**
ಸೋಲಾರ್ ವಾಟರ್ ಹೀಟರ್ ಹಾಗೂ ವಾಟರ್ ಫಿಲ್ಟರ್ ಸರ್ವೀಸ್ & ರಿಪೇರಿ ಮಾಡಲು ಸಂಪರ್ಕಿಸಿ.
84315 30052, 87228 39869

**ROBOTIC CLASSES**
Age group :
8 years & above
Bruit Academy
M : 97390 66956

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

ರಕ್ತ ದಾನ ಶ್ರೇಷ್ಠ ದಾನ

**ಮಾನ್ಯ ಗೌರವಾನ್ವಿತ 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ದಾವಣಗೆರೆ.**
ಅಸಲು ದಾವೆ ಸಂಖ್ಯೆ : 77/2023
ವಾದಿ : ಶ್ರೀ ಡಿ.ಎಂ. ಸಿದ್ಧಾರ್ಥ್ ಬಿನ್ ಟಿ. ದಿಳ್ಯಪ್ಪ, ವಯಸ್ಸು ಸುಮಾರು 46 ವರ್ಷ, ವಾಸ : ಕಾಫಿ ಡೇ ಸರ್ಕಲ್, ಬಸ್ ಸ್ಟ್ಯಾಂಡ್, ವಿದ್ಯಾನಗರ, ದಾವಣಗೆರೆ. - ವಿರುದ್ಧ /-
ಪ್ರತಿವಾದಿಯರು : ಶ್ರೀ ಶರತ್ ಟಿ. ಬಿನ್ ತಿಪ್ಪೇಸ್ವಾಮಿ ಹೆಚ್.ಆರ್. ವಯಸ್ಸು ಸುಮಾರು 36 ವರ್ಷ, ವ್ಯವಹಾರ ವಾಸ : ಮಾತೃಶ್ರೀ ನಿಲಯ, ರಾಮಲೀಲಾ ಬಿಲ್ಡಿಂಗ್ ಎದುರು, 1ನೇ ಮೇನ್, 2ನೇ ಕ್ರಾಸ್, ಸರಸ್ವತಿ ನಗರ, ಸಿ ಬ್ಲಾಕ್, ವಾರ್ಡ್ ನಂ. 33 ದಾವಣಗೆರೆ.ಹೆಚ್ಚುವರಿ ವಿಳಾಸ : ಶ್ರೀ ಶರತ್ ಟಿ. ಬಿನ್ ತಿಪ್ಪೇಸ್ವಾಮಿ ಹೆಚ್.ಆರ್. ವಯಸ್ಸು ಸುಮಾರು 36 ವರ್ಷ, ವ್ಯವಹಾರ ವಾಸ : ಗೋದಿಹಳ್ಳಿ ಗ್ರಾಮ, ರಾಮಗಿರಿ ಹೋಬಳಿ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.
ಸಿಪಿಸಿ ಆದೇಶ 5 ನಿಯಮ 20 ರಡಿಯಲ್ಲಿ ಪ್ರತಿವಾದಿಗೆ ನೀಡಲಾದ ಪ್ರಕಟಣಾ ನೋಟೀಸ್
ಈ ಮೇಲ್ಕಂಡ ದಾವೆಯ ವಾದಿಯು ಪ್ರತಿವಾದಿಯ ವಿರುದ್ಧ ಸಾಲ ವಸೂಲಾತಿಗಾಗಿ ಹಾಗೂ ಇತರೆ ಪರಿಹಾರ ಕೋರಿ ಈ ಮೇಲ್ಕಂಡ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯಲ್ಲಿ ಪ್ರತಿವಾದಿಗೆ ನ್ಯಾಯಾಲಯದಿಂದ ನೀಡಲಾದ ಸಮನ್ಸ್ ಜಾರಿಯಾಗದೇ ಇದ್ದುದರಿಂದ ವಾದಿಯು ಪ್ರತಿವಾದಿಗೆ ಪತ್ರಿಕಾ ಪ್ರಕಟಣೆಯ ಮೂಲಕ ಈ ಸಮನ್ಸ್‌ಅನ್ನು ಹೊರಡಿಸಿದ್ದು. ಪ್ರತಿವಾದಿಯು ಖುದ್ದಾಗಿ ಅಥವಾ ವಕೀಲರ ಮೂಲಕ ದಿನಾಂಕ : 16.10.2024 ಬೆಳಿಗ್ಗೆ 11.00 ಗಂಟೆಗೆ ತಾವಾಗಲೀ ಅಥವಾ ತಮ್ಮ ಪರ ವಕೀಲರಾಗಲೀ ಘನ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದೆಂದು ಪ್ರತಿವಾದಿಗೆ ಈ ಪ್ರಕಟಣೆ ಮೂಲಕ ಮಾನ್ಯ ನ್ಯಾಯಾಲಯವು ಸಮನ್ಸ್‌ನ್ನು ಹೊರಡಿಸಿದ್ದು. ಒಂದು ವೇಳೆ ಪ್ರತಿವಾದಿಯು ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಲು ವಿಫಲವಾದಲ್ಲಿ ಅವರ ವಿರುದ್ಧ ಮಾನ್ಯ ನ್ಯಾಯಾಲಯವು ಏಕಪಕ್ಷೀಯವಾಗಿ ಆದೇಶವನ್ನು ಹೊರಡಿಸುತ್ತದೆ.
ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ. ದಿನಾಂಕ : 29.08.2024 ರಂದು ಕೊಡಲಾಗಿದೆ.
ಸಹಿ/- ಅರ್ಜಿದಾರರ ಪರ ವಕೀಲರು
ನಟರಾಜ್ ಎಸ್. ತೆಂಬದ್, ದಾವಣಗೆರೆ.
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು, 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ದಾವಣಗೆರೆ.

**ಕೆಲಸಕ್ಕೆ ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ/ಹುಡುಗಿಯರು ಬೇಕಾಗಿದ್ದಾರೆ ಹಾಗೂ ಸಗಟು ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್‌ಬಾಯ್ಸ್ ಬೇಕಾಗಿದ್ದಾರೆ.
ವೃಷಭ್ ಮೆಡಿಕಲ್ಸ್,
ಜಾಲಿನಗರ, ಶಿವಾಲಿ ರಸ್ತೆ, ದಾವಣಗೆರೆ-6.
99805 32781

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು
ದಿನಾಂಕ 4.9.2024ರ ಬುಧವಾರ
ದಿನಾಂಕ 5.9.2024ರ ಗುರುವಾರ
ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**2 BHK HOUSE FOR RENT**
# 2581/5, 4th Main North, Church Road, MCC `A' Block, Davanagere.
94489 24513, 95356 59259

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆ, ಹರಿಹರ, ಚನ್ನಗಿರಿ, ಹೊಳಲ್ಕೆರೆ, ಹೊನ್ನಾಳಿ, ಹೊಸದುರ್ಗ, ಚಿತ್ರದುರ್ಗ, ಚಳಕೇರಿ, ಹಿರಿಯೂರು ಎಲೆಕ್ಟ್ರಾನಿಕ್ಸ್ ಸರ್ವೀಸ್ ಸೆಂಟರ್‌ನಲ್ಲಿ ಕೆಲಸ ಮಾಡಲು ಐ.ಟಿ.ಐ. ಮತ್ತು ಡಿಪ್ಲೋಮಾ ಆದ ಸ್ವಂತ ದ್ವಿಚಕ್ರ ವಾಹನ ಹೊಂದಿರುವವರು ತಕ್ಷಣವೇ ಬೇಕಾಗಿದ್ದಾರೆ.
ಮೊ.: 9738735156, 9886515100

**WANTED GIRLS FOR JOB**
Office Work and Tele Calling
Good English Communication
any Degree holder.
90197 17606

**KAIDB**
Furniture Factory for Rent, Davanagere. 4000 Sqft.
98459 77475

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

ನೇತ್ರ ದಾನ ಶ್ರೇಷ್ಠ ದಾನ

**WANTED**
Office boys for delivery & Cleaning - 2
Tally Experienced Ladies Staff - 2
With Stock Maintaine
Kashetter Industrial
Lawyers Street, Davangere.

**ಕೆಲಸಕ್ಕೆ ಬೇಕಾಗಿದ್ದಾರೆ**
ಅಗ್ರಿಕಲ್ಚರ್ ಇಕ್ಯುಪ್‌ಮೆಂಟ್ ಮಾರ್ಕೆಟಿಂಗ್ ಮತ್ತು ಸರ್ವೀಸ್‌ಗೆ ಹುಡುಗರು ಬೇಕಾಗಿದ್ದಾರೆ.
ವಿಳಾಸ : ಚಿವೆನ್ಸ್ ಸ್ಕ್ವೈಯರ್,
ಲೋಕಿಕೆರೆ ರೋಡ್, ಚೌಡಮ್ಮ ದೇವಸ್ಥಾನದ ಎದುರು, ಇಂಡಸ್ಟ್ರೀಯಲ್ ಏರಿಯಾ, ದಾವಣಗೆರೆ.
ಮೊ : 93410 12025

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**WANTED**
Service Engineer, ITI Electronics, Freshers can aslo apply. Contact : Esskay Technology
98807 65334

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ (Nurse) ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ : ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
98450 35710, 77607 39990

# ಪ್ರಾಸಿಕ್ಯೂಷನ್ ಪ್ರಶ್ನಿಸಿದ ಅರ್ಜಿ ವಿಚಾರಣೆ ಸೆ.9ಕ್ಕೆ ಮುಂದೂಡಿಕೆ

ಬೆಂಗಳೂರು, ಸೆ. 2 - ರಾಜ್ಯಪಾಲರು ನೀಡಿರುವ ಪ್ರಾಸಿಕ್ಯೂಷನ್ ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ರಾಜ್ಯ ಹೈಕೋರ್ಟ್ ಸೆಪ್ಟೆಂಬರ್ 9ಕ್ಕೆ ಮುಂದೂಡಿದೆ.

ವಿಚಾರಣೆ ಕೈಗೆತ್ತಿಕೊಂಡ ನ್ಯಾಯ ಮೂರ್ತಿ ಎಂ.ನಾಗಪ್ರಸನ್ನ ಅವರು, ಪ್ರಕರಣ ವನ್ನು ಗಣೇಶ ಚತುರ್ಥಿಗೂ ಮುನ್ನವೇ ಮುಗಿಸೋಣ ಎಂದು ವಾದಿ ಮತ್ತು ಪ್ರತಿ ವಾದಿ ವಕೀಲರುಗಳಿಗೆ ಸಲಹೆ ಮಾಡಿದರು.

ಆದರೆ, ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಅವರು, ತಾವು ಈ ವಿಷಯದಲ್ಲಿ ವಾದ ಮಾಡಬೇಕಿದೆ. ನನಗೆ ಒಂದು ವಾರಗಳ ಸಮಯಾವಕಾಶ ಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರ ಪರ ವಕೀಲ ಅಭಿಷೇಕ್ ಮನು ಸಿಂಘ್ವಿ, ನನಗೆ ಸೆಪ್ಟೆಂಬರ್ 21ರವರೆಗೂ ಸಮಯವಿಲ್ಲ, 9ರಂದು ಅಡ್ವೋಕೇಟ್ ಜನರಲ್ ವಾದ ಮಂಡಿಸಿದ ನಂತರ ನನ್ನ ವಾದ ಮಂಡನೆ ಮಾಡಬೇಕಿದೆ ಎಂದರು.

ಆಗ ನ್ಯಾಯಮೂರ್ತಿಗಳು, ಅಕ್ಟೋಬರ್ 2ರಿಂದ ನ್ಯಾಯಾಲಯಗಳಿಗೆ ರಜೆ ಇರಲಿದೆ. ಅದಕ್ಕೂ ಮುನ್ನವೇ ಪ್ರಕರಣ ಮುಗಿಸುವ ಅಗತ್ಯವಿದೆ. ಅಡ್ವೋಕೇಟ್ ಜನರಲ್ ಸಲಹೆಯಂತೆ ಸೆಪ್ಟೆಂಬರ್ 9ಕ್ಕೆ ವಿಚಾರಣೆ ಕೈಗೆತ್ತಿಕೊಳ್ಳೋಣ. ಆದರೆ, ಸೆಪ್ಟೆಂಬರ್ 12ಕ್ಕೆ ವಾದ-ಪ್ರತಿವಾದ ಪೂರ್ಣಗೊಳ್ಳಬೇಕು. ಇದನ್ನು ಮತ್ತಷ್ಟು ಮುಂದುವರೆಸಲು ಸಾಧ್ಯವಿಲ್ಲ ಎಂದು ತಿಳಿಸಿ, ಈ ತಿಂಗಳ 9ಕ್ಕೆ ವಿಚಾರಣೆಯನ್ನು ಮುಂದೂಡಿದರು.

ಇದಕ್ಕೂ ಮುನ್ನ ಸ್ನೇಹಮಯಿ ಕೃಷ್ಣ ಪರ ಹಿರಿಯ ವಕೀಲ ಕೆ.ಜಿ.ರಾಘವನ್ ಸುದೀರ್ಘ ವಾದ ಮಂಡಿಸಿ, ಕರ್ನಾಟಕ ಸರ್ಕಾರ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿರುವ ಬಿಡಿ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ನ್ಯಾಯಾಂಗ ತನಿಖೆ ನಡೆಸುತ್ತಿದೆ. ಆದರೆ, ರಾಜ್ಯಪಾಲರು, ಮುಖ್ಯಮಂತ್ರಿ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ನೀಡಿರುವುದು, ಅವರ ಕುಟುಂಬದವರು ಬೆಲೆ ಬಾಳುವ 14 ನಿವೇಶನಗಳನ್ನು ಪಡೆದು ಬೊಕ್ಕಸಕ್ಕೆ ನಷ್ಟ ಉಂಟು ಮಾಡಿದ್ದಾರೆ ಎಂಬ ಹಿನ್ನೆಲೆಯಲ್ಲಿ ಎಂದರು.

ಮುಂದುವರಿದು ವಾದ ಮಂಡಿಸಿದ ಅವರು, ಇಲ್ಲಿ, ಮುಖ್ಯಮಂತ್ರಿ ಅವರು ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡು, ಪ್ರಭಾವ ಬಳಸಿ ತಮ್ಮ ಕುಟುಂಬಕ್ಕೆ ನಿವೇಶನಗಳನ್ನು ನೀಡಿದ್ದಾರೆ ಎಂಬುದಕ್ಕಷ್ಟೇ ಸೀಮಿತ ಎಂದರು.

ಸಿದ್ದರಾಮಯ್ಯ ಕರ್ನಾಟಕ ಸರ್ಕಾರದಲ್ಲಿ ಕಳೆದ ಎರಡು ದಶಕಗಳಿಂದ ಒಂದಲ್ಲಾ ಒಂದು ಅಧಿಕಾರದಲ್ಲಿ ಭಾಗಿಯಾಗಿದ್ದಾರೆ. ಅವರು ಎರಡು ಬಾರಿ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ನಿವೇಶನಗಳ ಹಂಚಿಕೆ ಆಗದಿರಬಹುದು. ಆದರೆ, ಅವರು ಬೇರೆ ಬೇರೆ ಅಧಿಕಾರ ಹುದ್ದೆಯಲ್ಲಿ ಇದ್ದಾಗ ಈ ಪ್ರಕ್ರಿಯೆ ನಡೆದಿದೆ ಎಂದು ವಕೀಲರು ಕೆಲವು ದಾಖಲೆಗಳನ್ನು ನ್ಯಾಯಪೀಠದ ಗಮನಕ್ಕೆ ತಂದರು.

2015ರಲ್ಲಿ 50:50ರ ಅನುಪಾತದಲ್ಲಿ ನಿವೇಶನ ಹಂಚಿಕೆ ಸೂತ್ರ ರೂಪಿಸಲಾಯಿತು, ಇದಕ್ಕೂ ಮೊದಲು ಅಂದರೆ 2014ರಲ್ಲಿ ಮುಖ್ಯಮಂತ್ರಿ ಅವರ ಪತ್ನಿ 1998ರಲ್ಲಿ ನಡೆದ ಭೂಸ್ವಾಧೀನಕ್ಕೆ ಪರ್ಯಾಯ ನಿವೇಶನ ನೀಡುವಂತೆ ಮನವಿ ಮಾಡಿದರು.

2017ರಲ್ಲಿ 50:50ರ ಅನುಪಾತದಲ್ಲಿ ನಿವೇಶನ ಹಂಚಿಕೆಯ ತೀರ್ಮಾನ ಕೈಗೊಳ್ಳಲಾಯಿತು, ಅಂದು ತೆಗೆದುಕೊಂಡ ತೀರ್ಮಾನಕ್ಕೂ ಮುಖ್ಯಮಂತ್ರಿ ಅವರಿಗೂ ಸಂಬಂಧವಿದೆ ಎಂದು ಹೇಳಿದರು.

ಒಂದೂ ನಿವೇಶನದ ಅರ್ಹತೆ ಇಲ್ಲದವರಿಗೆ 14 ನಿವೇಶನ ನೀಡಿದ್ದಾರೆ. ಇಂತಹ ಕೃತ್ಯಕ್ಕೆ ತನಿಖೆ ಅವಶ್ಯಕತೆ ಇಲ್ಲ ಎಂದು ಹೇಳಲು ಸಾಧ್ಯವೇ ಎಂದು ವಾದ ಮುಂದಿಟ್ಟರು.

ಅಷ್ಟೇ ಅಲ್ಲ, ನಿಯಮ 17ಎ ಪ್ರಕಾರ ಹಗರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸದೆಯೂ ರಾಜ್ಯಪಾಲರು ದಾಖಲೆಗಳನ್ನು ಆಧರಿಸಿ ಪ್ರಾಸಿಕ್ಯೂಷನ್‌ಗೆ ನೀಡಬಹುದು ಎಂದು ತಿಳಿಸಿದರು.

ಇಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ, ನೀಮ್ಮ ತೀರ್ಪೂ ಸೇರಿದಂತೆ ಅನೇಕ ತೀರ್ಪುಗಳಿವೆ ಎಂದಾಗ, ಮಧ್ಯಪ್ರವೇಶಿಸಿದ ನ್ಯಾಯಮೂರ್ತಿಗಳು, ಯಾವುದೇ ಮನವಿ ಸಲ್ಲಿಸದೆಯೂ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಬಹುದು. ಈಗಾಗಲೇ ಹಿಂದಿನ ತೀರ್ಪಿನಲ್ಲಿ ನಿಲುವು ತೆಗೆದುಕೊಳ್ಳಲಾಗಿದೆ, ಪೊಲೀಸ್ ಅಧಿಕಾರಿಯೇ ಮನವಿ ಸಲ್ಲಿಸುವ ಅಗತ್ಯವಿಲ್ಲ ಎಂದರು.

ನಂತರ ವಕೀಲರು ವಾದ ಮುಂದುವರಿಸಿ, ಮುಖ್ಯಮಂತ್ರಿ ಅವರು ತಮ್ಮ ಕುಟುಂಬಕ್ಕೆ ನಿವೇಶನ ಪಡೆಯುವಲ್ಲಿ ಒಮ್ಮೆ ಮಾತ್ರ ತಪ್ಪು ಮಾಡಿಲ್ಲ. ಪದೇ ಪದೇ ಇಂತಹ ಕೃತ್ಯ ಪುನರಾವರ್ತನೆಯಾದರೆ, ಇದು ದುರುದ್ದೇಶದಿಂದ ಕೂಡಿದೆ ಎಂದರ್ಥ ಎಂದು ಹೇಳಿದರು.

1998ರಲ್ಲಿ 3.16 ಎಕರೆಗೆ 3.24 ರೂ. ಪರಿಹಾರ ನಿಗದಿ ಪಡಿಸಲಾಗಿತ್ತು, ಆದರೆ ಮುಖ್ಯಮಂತ್ರಿ ಅವರ ಪತ್ನಿಗೆ ಆ ಪರಿಹಾರ ನೀಡದೆ 14 ನಿವೇಶನ ನೀಡಲಾಗಿದೆ. ಅದರ ಮೌಲ್ಯ ಎಷ್ಟಿದೆ, ಸುಣ್ಣಕ್ಕೆ ಬೆಣ್ಣೆ ಬೆಲೆ ನೀಡುತ್ತಿದ್ದೀರಾ? ಎಂದರು.




## ಕುರುಬರ ಸಂಘಕ್ಕೆ ಸರ್ಕಾರಿ ಜಮೀನು ಮಂಜೂರು ಖಂಡಿಸಿ ಪ್ರತಿಭಟನೆ

ದಾವಣಗೆರೆ, ಸೆ. 2- ಜಾತಿ ಸಂಘಟನೆ ಮತ್ತು ಖಾಸಗಿ ಕಂಪನಿಗಳಿಗೆ ಭೂಮಿ ಮಂಜೂರು ಮಾಡಿರುವ ಸಚಿವ ಸಂಪುಟದ ನಿರ್ಧಾರವನ್ನು ಕೈ ಬಿಡುವಂತೆ ಆಗ್ರಹಿಸಿ ಅಖಿಲ ಭಾರತ ಯುವಜನ ಫೆಡರೇಷನ್ ಕಾರ್ಯಕರ್ತರು ಉಪವಿಭಾಗಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿ, ಮನವಿ ಸಲ್ಲಿಸಿದರು.

ಇದೇ ವೇಳೆ ಸಂಘಟನೆ ರಾಜ್ಯ ಉಪಾಧ್ಯಕ್ಷ ಆವರಗೆರೆ ವಾಸು ಮಾತನಾಡಿ, ಕಲಬುರಗಿ ಸರ್ಕಾರಿ ಮಹಾವಿದ್ಯಾಲಯಕ್ಕೆ ಸೇರಿದ 3.07 ಎಕರೆ ಜಮೀನನ್ನು ಕರ್ನಾಟಕ ಪ್ರದೇಶ ಕುರುಬರ ಸಂಘಕ್ಕೆ ಮಂಜೂರು ಮಾಡಿರುವುದನ್ನು ಎಐವೈಎಫ್ ತೀವ್ರವಾಗಿ ಖಂಡಿಸುತ್ತದೆ ಎಂದರು.

ಶೈಕ್ಷಣಿಕ ಚಟುವಟಿಕೆಗಳ ಅನುಕೂಲಕ್ಕೆ ಬಳಕೆಯಾಗಬೇಕಿದ್ದ ಭೂಮಿಯನ್ನು ಜಾತಿ ಸಂಘಟನೆಗೆ ಮಂಜೂರು ಮಾಡಿದ ಸರ್ಕಾರದ ಕ್ರಮ ಶಿಕ್ಷಣ ವಿರೋಧಿಯಾಗಿದೆ. ಶೈಕ್ಷಣಿಕ ಕಾರ್ಯ ಚಟುವಟಿಕೆಗಳನ್ನು ನಡೆಸುವ ಸ್ಥಳದಲ್ಲಿ ಜಾತಿ ಸಂಘಟನೆಗೆ ಅವಕಾಶ ಮಾಡಿಕೊಟ್ಟಿರುವುದು ಅತ್ಯಂತ ಖಂಡನೀಯ ಎಂದರು.

ರಾಜ್ಯ ಸರ್ಕಾರ ಸರ್ಕಾರಿ ಜಾಗವನ್ನು ಜಾತಿ ಸಂಘಕ್ಕೆ ಮಂಜೂರು ಮಾಡಿರುವ ನಿರ್ಣಯವನ್ನು ಕೂಡಲೇ ಹಿಂಪಡೆಯಬೇಕೆಂದು ಆಗ್ರಹಿಸಿದರು.

ಬಳ್ಳಾರಿ ಜಿಲ್ಲೆಯ ತೋರಣಗಲ್ಲು ಕುರೇಕುಪ್ಪ ಪ್ರದೇಶದಲ್ಲಿ ನಿರ್ಮಿಸಲಾದ ಜಿಂದಾಲ್ ಸ್ಟೀಲ್ಸ್ ಕಂಪನಿಗೆ ಸುಮಾರ ನಲವತ್ತು ಸಾವಿರ ಕೋಟಿ ರೂ. ಮೌಲ್ಯದ ಎಕರೆ ಜಮೀನನ್ನು ರಾಜ್ಯ ಬೊಕ್ಕಸಕ್ಕೆ ನಷ್ಟಮಾಡಿಕೊಂಡು ಶುದ್ಧ ಕ್ರಯ ಮಾಡಿಕೊಡಲು ಮುಂದಾಗಿರುವುದು ಖಂಡನೀಯ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಆವರಗೆರೆ ವಾಸು, ಅಪ್ಪುರಾಜ್, ಕೆರೆನಹಳ್ಳಿ ರಾಜು, ನಿಟುವಳ್ಳಿ ಪರಶುರಾಮ್, ರಘು, ಮಲ್ಲಿಕಾರ್ಜುನ್, ಮಂಜುನಾಥ್ ಮತ್ತಿತರರಿದ್ದರು.


## ನಗರದಲ್ಲಿಂದು ಖ್ಯಾತ ಕೊಳಲು ವಾದಕ ಎ.ಚಂದನ್ ಕುಮಾರ್ ಸಂಗೀತ ಗೋಷ್ಠಿ



ಅಂತರಾಷ್ಟ್ರೀಯ ಖ್ಯಾತಿಯ ಸಾಂಸ್ಕೃತಿಕ ಸಂಸ್ಥೆ ಸ್ಪಿಕ್ ಮ್ಯಾಕೆ ದಾವಣಗೆರೆ ಆವೃತ್ತಿಯ, ವಿಭಾಗದ ವತಿಯಿಂದ ಕೇಂದ್ರ ಸಂಗೀತ ಮತ್ತು ನಾಟಕ ಅಕಾಡೆಮಿಯ ಬಿಸ್ಮಿಲ್ಲಾಖಾನ್ ಯುವ ಪ್ರಶಸ್ತಿ ಪುರಸ್ಕೃತ ಮೈಸೂರಿನ ಪ್ರಖ್ಯಾತ ಕೊಳಲು ವಾದಕ ಎ. ಚಂದನ್ ಕುಮಾರ್ ಅವರಿಂದ ಇಂದು ಮೂರು ಕಡೆಗಳಲ್ಲಿ ಸಂಗೀತ ಗೋಷ್ಠಿ ಏರ್ಪಡಿಸಲಾಗಿದೆ.

ಮೃದಂಗ ಹಾಗೂ ಘಟ ವಾದಕ ರಾಮಾನುಜನ್ ಜಿ.ಎಸ್. ಮತ್ತು ಪ್ರಸಿದ್ಧ ವಾದಕ ಮೋರ್ಸಿಂಗ್ ಟಿ.ಎ. ರಾಮನುಜನ್ ಅವರು ಸಾಥ್ ನೀಡಲಿದ್ದಾರೆಂದು ಸಾಂಸ್ಕೃತಿಕ ಸಂಸ್ಥೆ, ಸ್ಪಿಕ್ ಮೇಕೆಯ ದಾವಣಗೆರೆ ಆವೃತ್ತಿ ವಿಭಾಗದ ಅಧ್ಯಕ್ಷ ಮಂಜುನಾಥ್ ರಂಗರಾಜ್ ತಿಳಿಸಿದ್ದಾರೆ.

ಕಾರ್ಯಕ್ರಮಕ್ಕೆ ಉಚಿತ ಪ್ರವೇಶವಿದೆ. ಇಂದು ಬೆಳಿಗ್ಗೆ 10 ಗಂಟೆಗೆ ಬಿಹೆಚ್‌ಪಿಎಸ್ ಶಾಲೆ ಎಂಸಿಸಿ 'ಬಿ' ಬ್ಲಾಕ್, ಮಧ್ಯಾಹ್ನ 12 ಗಂಟೆಗೆ ಡಾ. ಎಸ್‌ಎಸ್‌ಎನ್‌ಪಿ ಶಾಲೆ ಮತ್ತು 3 ಗಂಟೆಗೆ ಪಿಎಸ್‌ಎಸ್‌ಆರ್ ಶಾಲೆ (ತೋಳಹುಣಸೆ) ಇಲ್ಲಿ ಸಂಗೀತ ಗೋಷ್ಠಿಗಳು ಆಯೋಜನೆಗೊಂಡಿವೆ.



## ನಗರದಲ್ಲಿ ಇಂದು ವೀರಭದ್ರೇಶ್ವರ ಜಯಂತ್ಯೋತ್ಸವ

ಭಾದ್ರಪದ ಮಾಸದ ಮೊದಲನೇ ಮಂಗಳವಾರವಾದ ಇಂದು ಶಾಮನೂರು ರಸ್ತೆಯಲ್ಲಿರುವ ಶ್ರೀ ಮಹಾಗಣಪತಿ ಮತ್ತು ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ರೇಣುಕಾಶಿವಚಾರ್ಯ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಇಂದು ಬೆಳಿಗ್ಗೆ 6.30 ಕ್ಕೆ ರುದ್ರಾಭಿಷೇಕ, ಅಷ್ಟೋತ್ತರ ಹಾಗೂ ಮಹಾಮಂಗಳಾರತಿ ನೆರವೇರಿಸಲಾಗುವುದು.

ನಂತರ ಸ್ವಾಮಿಗೆ ಮಹಾಮಂಗಳಾರತಿ ನೆರವೇರಿದ ನಂತರ ವೀರಭದ್ರೇಶ್ವರ ಸ್ವಾಮಿಯನ್ನು ಬನ್ನಿಮರದವರೆಗೆ ಮೆರವಣಿಗೆ ಮಾಡಲಾಗುವುದು. ಪ್ರಸಾದ ವ್ಯವಸ್ಥೆ ಇರುತ್ತದೆ ಎಂದು ದೇವಸ್ಥಾನದ ಟ್ರಸ್ಟ್ ತಿಳಿಸಿದೆ. ಶ್ರೀಮತಿ ಗೀತಾ ಕೊಟ್ರೇಶ್ ಝೇಂಕಾರ್ ಮತ್ತು ಸಂಗಡಿಗರು ಸೇವಾಕರ್ತರಾಗಿದ್ದಾರೆ.

### ಓದುಗರ ಪತ್ರ

## ಪಾಲಿಕೆ ಎದುರೇ ಸಮಸ್ಯೆ ಜೀವಂತ !



**ಮಾನ್ಯರೇ,**

ದಾವಣಗೆರೆ ನಗರದ ಮಹಾನಗರ ಪಾಲಿಕೆ ಎದುರು ಇರುವ ಕೆಳ ಸೇತುವೆಯ ದಾರಿಗೆ ಸಂಕಷ್ಟಗಳಿಂದ ಮುಕ್ತಿ ದೊರಕುವ ಹಾಗೇ ಕಾಣುತ್ತಿಲ್ಲ. ಪ್ರತಿ ವರ್ಷವೂ ಮಳೆಗಾಲ ಬಂತೆಂದರೆ ಏನಾದರೂ ಸಮಸ್ಯೆಗಳು ಉಲ್ಬಣಿಸುತ್ತವೆ. ಅದು ಪಾದಚಾರಿಗಳ ಓಡಾಟಕ್ಕೆ ಸಮಸ್ಯೆ ಇರಬಹುದು, ಮಳೆ ನೀರು ನಿಂತುಕೊಂಡು ವಾಹನ ಸವಾರರಿಗೆ ಆಗುವ ಪರದಾಟ ಇರಬಹುದು, ರೈಲ್ವೇ ಬ್ರಿಡ್ಜ್ ಕೆಳಗೆ ತೊಟ್ಟಿಕ್ಕುವ ನೀರಿನ ಹನಿಗಳು ಇರಬಹುದು ಹೀಗೆ ಪರಿಪೂರ್ಣವಾಗಿ ಸಮಸ್ಯೆಗಳಿಂದ ಸಾರ್ವಜನಿಕರಿಗೆ ಉಪದ್ರವವನ್ನು ಈ ದಾರಿಯು ಮಾಡುತ್ತಲೇ ಇರುತ್ತದೆ.

ಈ ವರ್ಷದ ಸಮಸ್ಯೆ ಏನೆಂದರೆ, ಸಿಮೆಂಟ್ ರಸ್ತೆಯಿಂದ ಕೂಡಿರುವ ಈ ದಾರಿಯಲ್ಲಿ ಸಿಮೆಂಟ್, ಜಲ್ಲಿ ಕಲ್ಲುಗಳು ಕಳೆದು ಹೋಗಿ ಅದರ ಮತ್ತೊಂದು ಅಂಶ ಕಬ್ಬಿಣದ ಸರಳುಗಳು ಕಾಣಸಿಗುತ್ತಿವೆ! ಪಾಲಿಕೆಯ ಮುಂಭಾಗದ ರಸ್ತೆಯಲ್ಲೇ ಕಾಣಸಿಗುವ ಈ ಸಮಸ್ಯೆಯು ಪಾಲಿಕೆಯ ಅಧಿಕಾರಿಗಳಿಗೆ ಕಾಣದೇ ಇರುವುದು ಬೇಸರದ ಸಂಗತಿ ಆಗಿರುತ್ತದೆ.

ಕಬ್ಬಿಣದ ಸರಳುಗಳು ಆಕಾಶದೆಡೆ ಮುಖ ಮಾಡುವ ಮುಂಚೆಯೇ ದುರಸ್ತಿ ಕ್ರಮವಹಿಸಿ, ಸಮಸ್ಯೆಯ ಜೊತೆ ಮತ್ತೊಂದು ಸಮಸ್ಯೆಯು ಆಗದ ರೀತಿಯಲ್ಲಿ ಶೀಘ್ರವಾಗಿ ಈ ರಸ್ತೆಯಲ್ಲಿ ಇರುವ ಗುಂಡಿಗಳನ್ನು ಕೂಡ ಸರಿಯಾಗಿ ಮುಚ್ಚಿಸಿ ಮತ್ತು ರಾತ್ರಿ ಹೊತ್ತಿನಲ್ಲಿ ಪಾದಚಾರಿಗಳು ನಡೆಯಲು ವಿದ್ಯುತ್ ದೀಪದ ಬೆಳಕನ್ನು ಹೆಚ್ಚಿಸಿ ಎಂದು ನಗರದ ಸಾರ್ವಜನಿಕರ ಪರ ವಿನಂತಿ.

**- ವೈ. ವಾದಿರಾಜ ಭಟ್**, ವಕೀಲರು, ದಾವಣಗೆರೆ.

## ನಗರದಲ್ಲಿ ಇಂದು ಶ್ರೀ ಉತ್ಸವಾಂಬದೇವಿಯ ಮಹಾಮಂಡಲಾಭಿಷೇಕ



ವಸಂತ ರಸ್ತೆಯ ಹಾಲೇಶ್ವರ ಪ್ರಿಂಟಿಂಗ್ ಪ್ರೆಸ್ ಹಿಂಭಾಗದಲ್ಲಿರುವ ಶ್ರೀ ಉತ್ಸವಾಂಬ ದೇವಿ, ಶ್ರೀ ಚೌಡೇಶ್ವರಿ ದೇವಿ, ಶ್ರೀ ಗಣೇಶ, ಶ್ರೀ ಆದಿಶಕ್ತಿ ದೇವಿ, ಶ್ರೀ ಮಹಾಲಕ್ಷ್ಮಿ ದೇವಿ ದೇವರುಗಳು 12ನೇ ವರ್ಷದ ಮಹಾ ಮಂಡಲಾಭಿಷೇಕವು ಕಳೆದ ಜುಲೈ 17ರಿಂದ ಪ್ರಾರಂಭವಾಗಿದ್ದು, ಇಂದು ಕೊನೆಯ ದಿನವಾಗಿದ್ದು, ಬೆಳಗಿನ ಜಾವದಿಂದ ಅಮ್ಮನವರಿಗೆ ಮಹಾಪೂಜೆ, ಮಧ್ಯಾಹ್ನ 12.30 ರಿಂದ ಪ್ರಸಾದ ವಿನಿಯೋಗ ಇರುತ್ತದೆ ಎಂದು ಶ್ರೀ ಉತ್ಸವಾಂಬ ದೇವಿ ಭಕ್ತ ಮಂಡಳಿ ತಿಳಿಸಿದೆ.

## ನಂದೀಶ್‌ಗೆ ಪಿ.ಹೆಚ್.ಡಿ. ಪದವಿ



ದಾವಣಗೆರೆ, ಸೆ. 2- ಬೆಂಗಳೂರಿನ ಜೈನ್ ವಿಶ್ವವಿದ್ಯಾನಿಲಯವು ನಗರದ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿನ ವಿದ್ಯುತ್ ಮತ್ತು ವಿದ್ಯುನ್ಮಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಬಿ.ಎಂ. ನಂದೀಶ್ ಅವರಿಗೆ ಪಿ.ಹೆಚ್.ಡಿ. ಪದವಿ ನೀಡಿ ಗೌರವಿಸಿದೆ. ನಂದೀಶ್ ಮಂಡಿಸಿದ 'ಡಿಸೈನ್ ಅಂಡ್ ಸಿಮ್ಯುಲೇಷನ್ ಆಫ್ ಇಂಟಲಿಜೆಂಟ್ ಐಓಟಿ ಬೇಸ್ಡ್ ಸಿಸ್ಟಂ ಫಾರ್ ಇಂಪ್ರೂವಿಂಗ್ ಮೈಕ್ರೋ ಗ್ರಿಡ್ ಎಫಿಷಿಯನ್ಸಿ' ಪ್ರಬಂಧಕ್ಕೆ ಪಿ.ಹೆಚ್.ಡಿ. ಪದವಿ ನೀಡಲಾಗಿದೆ.

## ಸೆ. 13ರಂದು ಕಾರ್ಯನಿರತ ಪತ್ರಕರ್ತರ ಸಂಘದ ಸಮಾನ್ಯ ಸಭೆ

ದಾವಣಗೆರೆ, ಸೆ. 2- ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ದಾವಣಗೆರೆ ಜಿಲ್ಲಾ ಘಟಕದ ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ಇದೇ ದಿನಾಂಕ 13.09.2024ರ ಶುಕ್ರವಾರ ಮಧ್ಯಾಹ್ನ 2.30ಕ್ಕೆ ದಾವಣಗೆರೆ ಕುವೆಂಪು ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಂಘದ ಜಿಲ್ಲಾಧ್ಯಕ್ಷರಾದ ಇ.ಎಂ. ಮಂಜುನಾಥ್ ಅವರ ಅಧ್ಯಕ್ಷತೆಯಲ್ಲಿ ಈ ಸಭೆ ಏರ್ಪಾಡಾಗಿದ್ದು, ಜಿಲ್ಲೆಯ ಸಂಘದ ಎಲ್ಲಾ ಸದಸ್ಯರು ಸಭೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್ ತಿಳಿಸಿದ್ದಾರೆ.

ಸಭೆಯ ನಂತರ ಮಧ್ಯಾಹ್ನ 3.30ಕ್ಕೆ ಪತ್ರಿಕಾ ದಿನಾಚರಣೆ ಮತ್ತು ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನೂ ಏರ್ಪಡಿಸಲಾಗಿದೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ವಿವರಿಸಿದ್ದಾರೆ.

## ನಿಷೇಧಿತ ದಿನಗಳಲ್ಲಿ ಮದ್ಯ ಮಾರಾಟ ನಡೆದರೆ ಕ್ರಮ : ಎಸ್ಪಿ ಉಮಾ



**ಗಣೇಶ ಚತುರ್ಥಿ ಹಾಗೂ ಈದ್ ಮಿಲಾದ್ ಹಬ್ಬಗಳ ಹಿನ್ನೆಲೆಯಲ್ಲಿ ಜಿಲ್ಲಾದ್ಯಂತ ಕ್ರಮ**

ದಾವಣಗೆರೆ, ಸೆ.2- ಗಣೇಶ ಚತುರ್ಥಿ ಹಾಗೂ ಈದ್ ಮಿಲಾದ್ ಹಬ್ಬದ ಪ್ರಯುಕ್ತ ಮದ್ಯ ಮಾರಾಟ ನಿಷೇಧಿಸಿದ ದಿನಗಳಲ್ಲಿ ನಡೆದರೆ ಕ್ರಮ ಕೈಗೊಳ್ಳುವುದಾಗಿ ಎಸ್ಪಿ ಉಮಾ ಪ್ರಶಾಂತ್ ಎಚ್ಚರಿಕೆ ನೀಡಿದರು.

ಗಣೇಶ ಚತುರ್ಥಿ ಹಾಗೂ ಈದ್ ಮಿಲಾದ್ ಹಬ್ಬದ ನಿಮಿತ್ತ ಜಿಲ್ಲಾ ಪೊಲೀಸ್ ಕಚೇರಿ ಸಭಾಂಗಣದಲ್ಲಿ ಈಚೆಗೆ ಜಿಲ್ಲಾ ಬಾರ್ ಆ್ಯಂಡ್ ರೆಸ್ಟೋರೆಂಟ್ ಅಸೋಸಿಯೇಷನ್ ಪದಾಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಸಿಎಲ್ ಸಂಖ್ಯೆ ಪ್ರಕಾರ ನಿಗದಿತ ಸಮಯದಲ್ಲಿ ಬಾರ್ ತೆರೆಯಬೇಕು ಮತ್ತು ಮುಚ್ಚಬೇಕು ಎಂದರು.

ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟಕ್ಕೆ ಸರಬರಾಜು ಮಾಡಬಾರದು. ಇದನ್ನು ಮೀರಿ ನಡೆದರೆ ಮಾರಾಟ ಮಾಡಿದ ವ್ಯಕ್ತಿ, ಬಾರ್ ಮಾಲೀಕರ ಮೇಲೆ ಪ್ರಕರಣ ದಾಖಲಿಸುವ ಜತೆಗೆ ಪರವಾನಿಗೆ ರದ್ದುಗೊಳಿಸಲಾಗುವುದು ಎಂದು ಹೇಳಿದರು.

ಅಪ್ರಾಪ್ತರಿಗೆ ಮದ್ಯ ಮಾರಾಟ ಮಾಡಬಾರದು. ಪರವಾನಿಗೆ ನಿಯಮ ಪಾಲಿಸುವ ಜತೆಗೆ ಬಾರ್‌ಗಳಲ್ಲಿ ಗಲಾಟೆಗಳಾಗದಂತೆ ಕ್ರಮವಹಿಸಬೇಕು ಮತ್ತು ಸ್ಥಳೀಯ ಠಾಣೆ ಅಥವಾ 112ಕ್ಕೆ ಕರೆ ಮಾಡುವಂತೆ ತಿಳಿಸಿದರು.

ನಗರದ ಬಾರ್, ವೈನ್, ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಅಧಿಕೃತವಾಗಿ ಮದ್ಯ ಮಾರುವ ಅಂಗಡಿಗಳಲ್ಲಿ ಕಡ್ಡಾಯವಾಗಿ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು ಎಂದರು.

ಮೆರವಣಿಗೆ ಸಂದರ್ಭದಲ್ಲಿ ಅಬಕಾರಿ ತಂಡ ನಿಯೋಜಿಸಿ ಅಕ್ರಮ ಮದ್ಯ ಮಾರಾಟ ಮತ್ತು ಸಾಗಾಟ ನಡೆಯದಂತೆ ಕ್ರಮವಹಿಸಲು ಅಬಕಾರಿ ಇಲಾಖೆಗೆ ಕೋರಿದೆ ಎಂದು ಹೇಳಿದರು.

ಅಬಕಾರಿ ಇಲಾಖೆಯಿಂದ ಪರವಾನಿಗೆ ನವೀಕರಿಸಿಕೊಂಡು, ನವೀಕರಣ ಪ್ರಮಾಣ ಪತ್ರವನ್ನು ಅಂಗಡಿ ಮುಂಭಾಗದಲ್ಲಿ ಅಳವಡಿಸಬೇಕು.

ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ವಿಜಯಕುಮಾರ ಎಂ. ಸಂತೋಷ, ಜಿ. ಮಂಜುನಾಥ, ಗ್ರಾಮಾಂತರ ಡಿವೈಎಸ್ಪಿ ಬಿ.ಎಸ್. ಬಸವರಾಜ್, ಪೊಲೀಸ್ ನಿರೀಕ್ಷಕ ಲಕ್ಷ್ಮಣ್ ನಾಯ್ಕ ಹಾಗೂ ಜಿಲ್ಲಾ ಬಾರ್ ಆ್ಯಂಡ್ ರೆಸ್ಟೋರೆಂಟ್ ಅಸೋಸಿಯೇಷನ್‌ನ ಪದಾಧಿಕಾರಿಗಳಿದ್ದರು.

# ನೂರರಷ್ಟು ಸಾಲ ವಸೂಲಾತಿ, ಹೆಚ್ಚಿನ ಡಿವಿಡೆಂಡ್ ಪಾವತಿ

## ಜಿ.ಎಂ ಸೌಹಾರ್ದ ಪತ್ತಿನ ಸಹಕಾರಿ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಜಿ.ಎಂ ಸಿದ್ದೇಶ್ವರ ಅಭಿಮತ



ದಾವಣಗೆರೆ, ಸೆ. 2- ಕೇವಲ ಠೇವಣಿ ಹೂಡಿಕೆ ಅಲ್ಲದೆ ಉತ್ತಮ ಸಾಲಗಾರರನ್ನು ಗುರುತಿಸಿ ಅವರಿಗೆ ಸಾಲ ಹಂಚಿಕೆಯಾಗುವ ಪ್ರಕ್ರಿಯೆಯಲ್ಲಿ ಭಾಗವಹಿಸುವುದು ಉತ್ತಮ ಎಂದು ಜಿ.ಎಂ. ಸೌಹಾರ್ದ ಸಹಕಾರಿಯ ಸಂಸ್ಥಾಪಕ ಸದಸ್ಯ ಹಾಗೂ ಮಾಜಿ ಸಂಸದ ಡಾ. ಜಿ.ಎಂ. ಸಿದ್ದೇಶ್ವರ ತಿಳಿಸಿದರು.

ನಗರದ ಜಿ.ಎಂ ಸೌಹಾರ್ದ ಪತ್ತಿನ ಸಹಕಾರಿ ಸಂಘದ 2023-24 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಸಹಕಾರಿಯ ಅನುತ್ಪಾದಕ ಸಾಲವನ್ನು ಕಡಿಮೆ ಮಾಡಲು(ಎನ್‌ಪಿಎ) ನೂರಕ್ಕೆ ನೂರರಷ್ಟು ಸಾಲ ಬಾಕಿ ವಸೂಲಾತಿ ನಿರ್ವಹಿಸಲು ಹಾಗೂ ಹೆಚ್ಚಿನ ಡಿವಿಡೆಂಡ್ ವಿತರಿಸಲು ಕ್ರಮ ಕೈಗೊಳ್ಳಬೇಕೆಂದು ಸಹಕಾರಿಯ ನಿರ್ದೇಶಕರಿಗೆ ಮತ್ತು ಸಿಬ್ಬಂದಿಯವರಿಗೆ ಕಿವಿಮಾತು ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿ.ಎಂ ಪ್ರಸನ್ನ ಕುಮಾರ್ ಮಾತನಾಡಿ, ಸಹಕಾರಿಯು ಆರಂಭದ ವರ್ಷದಲ್ಲಿ ಹೊಂದಿದ್ದ ಠೇವಣಿ ರೂ. 3.82 ಕೋಟಿ ಮೊತ್ತದಷ್ಟು ಲಾಭವನ್ನು ಪ್ರಸಕ್ತ ಸಾಲಿನಲ್ಲಿ ರೂ.3.83 ಕೋಟಿ ಗಳಿಸುವ ಉನ್ನತ ಮಟ್ಟಕ್ಕೆ ನಾವು ಬೆಳೆದಿದ್ದೇವೆ ಎಂದು ಹರ್ಷ ವ್ಯಕ್ತಪಡಿಸಿದರು. ಇದಲ್ಲದೇ, ಮುಂಬರುವ ಐದು ವರ್ಷಗಳಲ್ಲಿ 500 ಕೋಟಿ ರೂ. ಠೇವಣಿ ಸಂಗ್ರಹಿಸುವ ಗುರಿ ಹೊಂದಿದ್ದು, ಇದರಲ್ಲಿ ಸದಸ್ಯರ ಪಾತ್ರ ದೊಡ್ಡದಿದೆ ಎಂದರು.

ಸಹಕಾರಿಯ ಸಂಸ್ಥಾಪಕ ಸದಸ್ಯರಾದ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರು ಮಾತನಾಡಿ, ಜಿ. ಮಲ್ಲಿಕಾರ್ಜುನಪ್ಪನವರು ಸಹೃದಯಿಗಳು ಹಾಗೂ ಸಾತ್ವಿಕ ಸಂಪನ್ನರಾಗಿದ್ದ ಕಾರಣ ಅವರ ಇಚ್ಛೆಯಂತೆ ಆರಂಭಿಸಿದ ಸಹಕಾರಿಯು ಪ್ರಬುದ್ಧಮಾನಕ್ಕೆ ಬಂದೇ ಬರುತ್ತದೆ ಎಂಬ ಆಶಾಭಾವನೆ ವ್ಯಕ್ತಪಡಿಸಿದರು.

ಸಹಕಾರಿಯ ಉಪಾಧ್ಯಕ್ಷ ಎಂ.ಆರ್. ಪ್ರಭುದೇವ್, ಯುವ ನಿರ್ದೇಶಕ ಜಿ.ಎಸ್. ಅನಿತ್ ಕುಮಾರ್ ಅವರುಗಳು ಮಾತನಾಡಿದರು.

ಹಿರಿಯ ಮಹಿಳಾ ನಿರ್ದೇಶಕರಾದ ಶ್ರೀಮತಿ ಗಾಯತ್ರಿ ಸುಭಾಶ್ಚಂದ್ರ, ಶ್ರೀಮತಿ ಪ್ರಮೀಳಾ ನಟರಾಜ್, ಹಿರಿಯ ನಿರ್ದೇಶಕರಾದ ಜಿ.ಆರ್ ನೀಲಕಂಠಪ್ಪ, ಡಾ. ಸಿ.ಎಸ್. ಗಿರೀಶ್, ಡಾ. ಬಿ.ಎಸ್. ಸುನಿಲ್ ಕುಮಾರ್, ಕಾರ್ಯನಿರ್ವಾಹಕ ನಿರ್ದೇಶಕ ಎಸ್.ಎನ್. ಮಲ್ಲಪ್ಪ, ಪ್ರಧಾನ ವ್ಯವಸ್ಥಾಪಕ ಬಸವರಾಜ್ ಜಿ. ಮಾಕಾಳ, ಸಹಕಾರಿ ವಿಷಯ ಸಲಹೆಗಾರ ಎಸ್.ಸಿ ಮಹಾರುದ್ರಪ್ಪ, ಉಪ-ಪ್ರಧಾನ ವ್ಯವಸ್ಥಾಪಕ ಐ.ಬಿ. ಕಡದಕಟ್ಟಿ ಸಭೆಯ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ನಿರ್ದೇಶಕರಾದ ಎ.ಎಸ್. ಗುರುಮೂರ್ತಿ, ಸಿದ್ದನಗೌಡ ಸಿ. ಪಾಟೀಲ್, ನಟರಾಜ್ ಬಿ.ಪಿ.ಜೆ., ವೃತ್ತಿಪರ ನಿರ್ದೇಶಕ ಬಿ.ಎಲ್. ರಾಜೀವ್, ಸಹಕಾರಿಯ ಸನ್ನದು ಲೆಕ್ಕ ಪರಿಶೋಧಕ ಈ. ಚಂದ್ರಣ್ಣ, ಆಂತರಿಕ ಲೆಕ್ಕ ಪರಿಶೋಧಕ ಎಂ.ಹೆಚ್. ಹನುಮಂತರೆಡ್ಡಿ ಮತ್ತು ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಸಹಕಾರಿಯ ಮಹಿಳಾ ಸಿಬ್ಬಂದಿ ಪ್ರಾರ್ಥಿಸಿದರು. ಸಹಕಾರಿಯ ನಿರ್ದೇಶಕ ಎ.ಸಿ. ಬಸವರಾಜ್ ಸ್ವಾಗತಿಸಿದರು. ವೃತ್ತಿಪರ ನಿರ್ದೇಶಕ ಕೆ.ಎಂ. ಗುರುಮೂರ್ತಿ ವಂದಿಸಿದರು.

# ಕೃಷಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್‌ಗಾಗಿ ಆಗ್ರಹ

## ನಗರದಲ್ಲಿ ಹುಚ್ಚವ್ವನಹಳ್ಳಿ ಮಂಜುನಾಥ್ ಬಣದಿಂದ ರೈತರ ಪ್ರತಿಭಟನೆ



ದಾವಣಗೆರೆ, ಸೆ. 2 - ರೈತರ ಕೃಷಿ ಪಂಪ್ ಸೆಟ್‌ಗಳಿಗೆ ಸರ್ಕಾರ ಸಂಪೂರ್ಣ ಉಚಿತವಾಗಿ ವಿದ್ಯುತ್ ನೀಡಬೇಕು. ಅಕ್ರಮ ಸಕ್ರಮ ಯೋಜನೆ ಸರ್ಕಾರ ರದ್ದುಗೊಳಿಸಿದ್ದು, ಇದನ್ನು ಮರು ಜಾರಿಗೊಳಿಸಬೇಕೆಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಾಜ್ಯ ರೈತ ಸಂಘ ಹಾಗು ಹಸಿರು ಸೇನೆ ಹುಚ್ಚವ್ವನಹಳ್ಳಿ ಮಂಜುನಾಥ್ ಬಣದಿಂದ ನಗರದಲ್ಲಿ ಇಂದು ರೈತರು ಪ್ರತಿಭಟನೆ ನಡೆಸಿದರು.

ಬೆಸ್ಕಾಂ ಅಧೀಕ್ಷಕ ಇಂಜಿನಿಯರ್ ಕಚೇರಿಯ ಮುಂಭಾಗ ಪ್ರತಿಭಟನೆ ನಡೆಸಿದ ರೈತರು ವಿದ್ಯುಚ್ಛಕ್ತಿ ಖಾಸಗೀಕರಣಗೊಳಿಸಬಾರದು, ವಿದ್ಯುತ್ ಪರಿವರ್ತಕ ಸುಟ್ಟ 24 ಗಂಟೆಯೊಳಗೆ ರೈತರಿಗೆ ಹೊಸ ವಿದ್ಯುತ್ ಪರಿವರ್ತಕಗಳನ್ನು ಒದಗಿಸಬೇಕು ಹಾಗೂ ರೈತರ ಪಂಪ್ ಸೆಟ್‌ಗಳಿಗೆ ಆಧಾರ್ ನಂಬರ್ ಜೋಡಣೆ ಮಾಡುವುದನ್ನು ಕಡ್ಡಾಯಗೊಳಿಸಿರುವುದನ್ನು ಸ್ಥಗಿತಗೊಳಿಸಬೇಕು ಎಂಬಿ ತ್ಯಾದಿ ಬೇಡಿಕೆಗಳಿಗೆ ಆಗ್ರಹಿಸಿ ಅಧೀಕ್ಷಕ ಅಭಿಯಂತರರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಸಂಘಟನೆಯ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ಮಾತನಾಡಿ, ಹಿಂದಿನ ರಾಜ್ಯ ಸರ್ಕಾರದ ಅವಧಿಯಲ್ಲಿ ಪ್ರತಿ ರೈತನಿಗೆ 10 ಹೆಚ್ ಪಿ ವರೆಗೂ ಉಚಿತ ವಿದ್ಯುತ್ ನೀಡಲಾಗುವುದು, ಉಳಿದ ವಿದ್ಯುತ್ ಬಳಕೆಗೆ ಶುಲ್ಕ ಭರಿಸಬೇಕು ಎಂದು ಕಾಯ್ದೆ ಜಾರಿಗೆ ಮಾಡಲಾಗಿತ್ತು. ಅದರ ಭಾಗವಾಗಿ ಅಂದಿನ ಸರ್ಕಾರ ರೈತರ ಎಲ್ಲ ಕೃಷಿ ಪಂಪ್‌ಸೆಟ್‌ಗಳಿಗೆ ಆಧಾರ್ ಜೋಡಣೆ ಮಾಡುವ ಸಂಚು ರೂಪಿಸಿದ್ದು, ಇದರ ಮುಖ್ಯ ಉದ್ದೇಶ ಒಬ್ಬ ರೈತನಿಗೆ 10 ಹೆಚ್‌ಪಿವರೆಗೂ ಉಚಿತ ವಿದ್ಯುತ್ ನೀಡುವುದು ಹಾಗೂ ಉಳಿದ ವಿದ್ಯುತ್ ಬಳಕೆಗೆ ಶುಲ್ಕ ನಿಗದಿಪಡಿಸುವುದಾಗಿದೆ ಎಂದು ಹರಿಹಾಯ್ದರು.

ಹಿಂದಿನ ಹಲವಾರು ಸರ್ಕಾರಗಳು ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ವಿವಿಧ ರೀತಿಯಲ್ಲಿ ಮೀಟರ್ ಅಳವಡಿಸಲು ಪ್ರಯತ್ನಪಟ್ಟಿದ್ದರೂ ಸಹ ರೈತರು ವಿವಿಧ ಹೋರಾಟಗಳ ಮುಖಾಂತರ ಪ್ರತಿರೋಧ ವ್ಯಕ್ತಪಡಿಸಿದ ಪರಿಣಾಮ ಮೀಟರ್ ಅಳವಡಿಸುವ ಕಾರ್ಯದಿಂದ ಹಿಂದೆ ಸರಿಯಲಾಗಿತ್ತು. ಈಗ ಮತ್ತೆ ಮೀಟರ್ ಅಳವಡಿಸುವ ಮೂಲಕ ರೈತರಿಗೆ ಉಚಿತ ವಿದ್ಯುತ್‌ಗೆ ಶುಲ್ಕ ವಿಧಿಸಲು ಸಂಚು ನಡೆಸುತ್ತಿದೆ ಎಂದು ದೂರಿದರು.

ಕೇಂದ್ರ ಸರ್ಕಾರ ವಿದ್ಯುಚ್ಛಕ್ತಿಯನ್ನು ಖಾಸಗೀಕರಣಗೊಳಿಸುವ ಪ್ರಯತ್ನದಲ್ಲಿದೆ. ಇದರ ಭಾಗವಾಗಿ ಎಲ್ಲಾ ಪಂಪ್‌ಸೆಟ್ ದಾರರಿಗೆ ಮೀಟರ್ ಅಳವಡಿಸಿ ಶುಲ್ಕ ನಿಗದಿ ಮಾಡುವ ಪ್ರಯತ್ನದಲ್ಲಿದೆ. ಯಾವುದೇ ಕಾರಣಕ್ಕೂ ರೈತರು ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಲು ಅವಕಾಶ ಮಾಡಿಕೊಡುವುದಿಲ್ಲ ಎಂದರು.


**ಮಾನ್ಯ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ.**

**ಆರ್.ಎ. 62/2013**

ಮೇಲ್ಮನವಿದಾರರು : ಶ್ರೀ ಶರಣಪ್ಪ ಮೃತರಾಗಿದ್ದು ಅವರ ವಾರಸುದಾರರು ಶ್ರೀಮತಿ ಯಶೋದಮ್ಮ ಮತ್ತು ಇತರರು, ವಾಸ ರಂಗೇನಹಳ್ಳಿ, ತರೀಕೆರೆ ತಾಲ್ಲೂಕು. - ವಿರುದ್ಧ -

ಎದುರುದಾರರು : ಶ್ರೀ ಸುರೇಂದ್ರ ಬಿನ್ ಲೇಟ್ ಅಜ್ಜಪ್ಪ ಮತ್ತು ಇತರರು

ಪ್ರತಿವಾದಿ 11 (ಬಿ) : ಶ್ರೀಮತಿ ಸರಸ್ವತಿ ಕೋಂ ಚಂದ್ರಶೇಖರಪ್ಪ ಪಿ. ಪಿಸಾಳೆ, ವಯಸ್ಸು ಅಂದಾಜು 41 ವರ್ಷ, ವಾಸ : # 2523/36, 11ನೇ ಮೇನ್, ಭಂಟರ ಭವನ, ಕಲ್ಯಾಣ ಮಂಟಪ, ಬ್ಯಾಕ್‌ಸೈಡ್, ಬಾಲಾಜಿ ನಗರ, ದಾವಣಗೆರೆ.

**ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20 ಸಹವಾಚಕ ಕಲಂ 151ರ ಅಡಿಯಲ್ಲಿ 11 (ಬಿ)ನೇ ಪ್ರತಿವಾದಿಗೆ ಪತ್ರಿಕೆಯ ಮೂಲಕ ನೀಡುವ ಸಮನ್ಸ್/ತಿಳುವಳಿಕೆ ಈ ಕೆಳಗಿನಂತಿದೆ.**

ಮೇಲ್ಕಂಡ ಮೇಲ್ಮನವಿದಾರರು ಈ ಕೆಳಗೆ ವಿವರಿಸಿರುವ ಅನುಸೂಚಿ ಆಸ್ತಿಯ ಸಂಬಂಧ ಮಾನ್ಯ ಕೆಳ ನ್ಯಾಯಾಲಯವು ಓ.ಎಸ್. ನಂ. 242/2004ರ ತೀರ್ಪನ್ನು ಪ್ರಶ್ನಿಸಿ, ಈ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ತಾವುಗಳು ನ್ಯಾಯಾಲಯದಿಂದ ಸಮನ್ಸ್/ನೋಟೀಸು ನೀಡಿದರೂ ಹಾಗೂ ಪ್ರಕರಣ ಚಾಲ್ತಿಯಲ್ಲಿರುವುದು ತಿಳಿದಿದ್ದರೂ ಹಾಜರಾಗಿರುವುದಿಲ್ಲ. ನ್ಯಾಯಾಲಯವು ನಿಮಗೆ ಪತ್ರಿಕೆಯ ಪ್ರಕಟಣೆಯ ಮೂಲಕ ಪ್ರಕರಣದ ಸಂಗತಿಯನ್ನು ತಿಳಿಸಲು ಆದೇಶಿಸಿದ ಮೇರೆಗೆ ಈ ಪ್ರಕಟಣೆಯನ್ನು ನೀಡಲಾಗಿದ್ದು, ನ್ಯಾಯಾಲಯದಲ್ಲಿ ಮುಂದಿನ ವಿಚಾರಣಾ ದಿನಾಂಕ : 30.09.2024 ಆ ದಿನ ಖುದ್ದಾಗಿ ತಾವಾಗಲೀ ಅಥವಾ ನಿಮ್ಮ ಮೂಲಕ ನಿಯುಕ್ತಿಗೊಂಡ ವಕೀಲರ ಮೂಲಕ ಬೆಳಿಗ್ಗೆ 11 ಗಂಟೆಗೆ ಹಾಜರಾಗತಕ್ಕದ್ದು, ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಪ್ರಕರಣವನ್ನು ಇತ್ಯರ್ಥ ಗೊಳಿಸಲಾಗುವುದು.

ನ್ಯಾಯಾಲಯದ ಮೊಹರು ಹಾಗೂ ಸೀಲಿನೊಂದಿಗೆ ದಿನಾಂಕ : 31.08.2024 ರಂದು ನೀಡಲಾಗಿದೆ.

**ಅನುಸೂಚಿ ಆಸ್ತಿ :** ದಾವಣಗೆರೆ ನಗರದ ಆನೆಕೊಂಡ ಪೇಟೆ ಅಸೆಸ್‌ಮೆಂಟ್ ನಂ. 932 ಡಿಪ್ಪಿ, ಅಸ್ಸೆಸ್‌ಮೆಂಟ್ ನಂ. 932 (ಎ) ಅಸ್ಸೆಸ್‌ಮೆಂಟ್ ನಂ. 932(ಬಿ) ವಿಸ್ತೀರ್ಣ 13x30 ಅಡಿ ಮೂರು ಅಂತಸ್ತಿನ ಬಿಲ್ಡಿಂಗ್ ಮತ್ತು ಇದಕ್ಕೆ ಚೆಕ್ಕುಬಂದಿ. ಪೂರ್ವ : ನೀಲಕಂಠಯ್ಯನ ಆಸ್ತಿ ಸಂ. 930 ಮತ್ತು ಬೆಲಗೂರು ರಾಮ ಪದ್ಮನಾಭ ಇವರ ಆಸ್ತಿ ಸಂ. 931, ಪಶ್ಚಿಮ : ಗೌರಮ್ಮನ ಆಸ್ತಿ ಸಂ. 933 ಮತ್ತು ಚಂದ್ರಶೇಖರ್‌ರವರ ಆಸ್ತಿ ಸಂ. 934, ಉತ್ತರ : ರಸ್ತೆ, ದಕ್ಷಿಣ : ರಸ್ತೆ.

**ಸಹಿ/- ಮೇಲ್ಮನವಿದಾರರ ಪರ ವಕೀಲರು**
**ದಿನಾಂಕ : 31.08.2024**

**ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- ಮುಖ್ಯ ಆಡಳಿತಾಧಿಕಾರಿ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ.**

## ನರ್ಸಿಂಗ್ ಸಂಸ್ಥೆ ಶುಲ್ಕ ನಿಯಂತ್ರಣಕ್ಕೆ ಸಮಿತಿ

ಬೆಂಗಳೂರು, ಸೆ. 2 - ರಾಜ್ಯಾದ್ಯಂತ ಇರುವ ನರ್ಸಿಂಗ್ ಸಂಸ್ಥೆಗಳ ಶುಲ್ಕ ನಿಯಂತ್ರಣಕ್ಕಾಗಿ ಸಮಿತಿಯೊಂದನ್ನು ರಚಿಸಲು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ್ ಆದೇಶಿಸಿದ್ದಾರೆ. ಕೆಲ ನರ್ಸಿಂಗ್ ಕಾಲೇಜುಗಳು ಅತಿಯಾದ ಶುಲ್ಕ ವಸೂಲಿ ಮಾಡುತ್ತಿರುವ ಬಗ್ಗೆ ದೂರುಗಳು ಕೇಳಿ ಬಂದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ನರ್ಸಿಂಗ್ ಸಂಸ್ಥೆಗಳ ಜೊತೆ ಸಭೆಯೊಂದನ್ನು ನಡೆಸಿದ ಸಚಿವ ಪಾಟೀಲ್, ಶುಲ್ಕಕ್ಕೆ ಸಂಬಂಧಿಸಿದಂತೆ ಹಲವಾರು ದೂರುಗಳು ಬರುತ್ತಿವೆ. ವಿದ್ಯಾರ್ಥಿಗಳ ಮೇಲೆ ಆರ್ಥಿಕ ಹೊರೆಯಾಗುತ್ತಿದೆ ಎಂದು ಹೇಳಿದರು.

ಈ ಹಿನ್ನೆಲೆಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯ ಜಂಟಿ ಕಾರ್ಯದರ್ಶಿ ನೇತೃತ್ವದಲ್ಲಿ ಶುಲ್ಕ ನಿಯಂತ್ರಣ ಸಮಿತಿಯೊಂದನ್ನು ರಚಿಸಲಾಗುವುದು. ಸಮಿತಿಯು ಶುಲ್ಕ ವಿನ್ಯಾಸವನ್ನು ಪರಿಶೀಲಿಸಲಿದೆ ಎಂದು ಸಚಿವರು ಹೇಳಿದರು.

ಪ್ರಸಕ್ತ ಸರ್ಕಾರಿ ಕೋಟಾದಲ್ಲಿ ದಾಖಲಾಗುವ ವಿದ್ಯಾರ್ಥಿಗಳಿಗೆ 10,000 ರೂ. ವಿಧಿಸಲಾಗುತ್ತಿದೆ. ಆಡಳಿತ ಮಂಡಳಿ ಕೋಟಾ ಸೀಟುಗಳಿಗೆ 1 ಲಕ್ಷ ರೂ. ಹಾಗೂ ಹೊರ ರಾಜ್ಯಗಳ ವಿದ್ಯಾರ್ಥಿಗಳಿಗೆ 1.40 ಲಕ್ಷ ರೂ. ಶುಲ್ಕ ನಿಗದಿ ಪಡಿಸಲಾಗಿದೆ ಎಂದು ಸಚಿವರು ಹೇಳಿದರು.

ಶುಲ್ಕವನ್ನು ಶೇ.20ರಷ್ಟು ಹೆಚ್ಚಿಸಬೇಕು ಎಂಬ ಕಾಲೇಜು ಆಡಳಿತ ಮಂಡಳಿಗಳ ಮನವಿಯನ್ನು ಸಚಿವರು ತಳ್ಳಿ ಹಾಕಿದರು.

## ಆರ್.ಜಿ. ಕರ್ ಆಸ್ಪತ್ರೆಯ ಮಾಜಿ ಪ್ರಾಂಶುಪಾಲ ಬಂಧನ

ಕೊಲ್ಕೊತಾ, ಸೆ. 2 – ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಯ ಮಾಜಿ ಪ್ರಾಂಶುಪಾಲ ಡಾ. ಸಂದೀಪ್ ಘೋಷ್ ಅವರನ್ನು ಸಿಬಿಐ ಬಂಧಿಸಿದೆ. ಹಣಕಾಸು ಅಕ್ರಮಗಳ ಆರೋಪದ ಮೇಲೆ ಅವರನ್ನು ಬಂಧಿಸಲಾಗಿದೆ.

ಆರ್.ಜಿ. ಕರ್ ಆಸ್ಪತ್ರೆಯ ವೈದ್ಯೆ ಮೇಲೆ ನಡೆದ ಅತ್ಯಾಚಾರ ಹಾಗೂ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಘೋಷ್ ಅವರನ್ನು ಸಿ.ಬಿ.ಐ. ವಿಚಾರಣೆಗೆ ಒಳಪಡಿಸಿತ್ತು. ಈ ಹತ್ಯೆ ಪ್ರಕರಣ ದೇಶಾದ್ಯಂತ ತೀವ್ರ ಆಕ್ರೋಶಕ್ಕೆ ಕಾರಣವಾಗಿತ್ತು.

## ಶೀಘ್ರ ಸಿರಿಗೆರೆ ಶ್ರೀಗಳಿಂದ ಕೆರೆಗಳ ವೀಕ್ಷಣೆ

ಜಗಳೂರು, ಸೆ.2- 57ಕೆರೆ ತುಂಬಿಸುವ ಯೋಜನೆಯಡಿ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಂಡಿದ್ದು. ಈಗಾಗಲೇ 31ಕೆರೆಗಳಿಗೆ ತುಂಗೆ ಭದ್ರೆ ಹರಿದಿದ್ದಾಳೆ. ಇನ್ನು ಒಂದು ವಾರದಲ್ಲಿ ತಾಲ್ಲೂಕಿನ 40 ಕೆರೆಗಳಿಗೆ ನೀರು ಹರಿದು ಬಂದ ನಂತರ ಸಿರಿಗೆರೆ ಶ್ರೀಗಳು ಕೆರೆಗಳ ವೀಕ್ಷಣೆ ಹಾಗೂ ಬಾಗಿನ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಶೀರ್ವಚನ ನೀಡಲಿದ್ದಾರೆ ಎಂದು ಶಾಸಕ ಬಿ. ದೇವೇಂದ್ರಪ್ಪ ತಿಳಿಸಿದರು.

ಪಟ್ಟಣದ ತರಳಬಾಳು ಸಮುದಾಯ ಭವನದಲ್ಲಿ ಸಿರಿಗೆರೆ ಶ್ರೀಗಳು ಕೆರೆವೀಕ್ಷಣೆ ಕಾರ್ಯಕ್ರಮಕ್ಕೆ ಆಗಮಿಸುವ ಹಿನ್ನೆಲೆಯಲ್ಲಿ ಕರೆದಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಿರಿಗೆರೆ ಶ್ರೀಗಳು ಕೆರೆ ವೀಕ್ಷಣೆಗೆ ಆಗಮಿಸಲು ಸಮ್ಮತಿ ನೀಡಿದ್ದಾರೆ. ಮಾಜಿ ಶಾಸಕರು ಹಾಗೂ ಮುಖಂಡರನ್ನೊಳಗೊಂಡ 10 ಜನ ಸಿದ್ದತಾ ಸಮಿತಿ ರಚಿಸಿ ಕೆರೆ ವೀಕ್ಷಣೆ ಕಾರ್ಯಕ್ರಮದ ರೂಪರೇಶೆ ತಯಾರಿಸೋಣ. ಮುಕ್ತಾಯ ಸಮಾರಂಭವನ್ನು ಬಯಲು ರಂಗಮಂದಿರದಲ್ಲಿ ಅದ್ದೂರಿಯಾಗಿ ಆಯೋಜಿಸೋಣ. ಭಕ್ತಸಮೂಹ ಪಕ್ಷಾತೀತವಾಗಿ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಹಗಲು ವೇಳೆ ಕೆರೆಗಳಿಗೆ ನೀರು ಹರಿಸಿ ರಾತ್ರಿ ವೇಳೆ ರೈತರು ವಾಲ್ ತಿರುಗಿಸುವ ಕುಂಟು ನೆಪಯೊಡ್ಡಿ ನೀರು ಹರಿಸುವುದನ್ನು ತಡೆಹಿಡಿಯಬೇಡಿ. ಇದುವರೆಗೂ ಎಇಇ ಶ್ರೀಧರ್, ಕೆಳದರ್ಜೆ ಗುತ್ತಿಗೆದಾರರಾದ ಭೀಮಣ್ಣ, ಆನಂದಪ್ಪ, ಅವರ ಶ್ರಮ ಅಪಾರವಿದೆ. ರೈತರ ವಿಶ್ವಾಸ ಗಳಿಸಬೇಕು. ಮುಖ್ಯಗುತ್ತಿಗೆದಾರ ಶಂಕರ್ ಅವರ ಕಾರ್ಯವೈಖರಿ ಬೇಸರ ತಂದಿದೆ ಎಂದು ಸೂಚಿಸಿದರು.

ಸಿಹಿ ಹಂಚಿ ಪಟಾಕಿ ಸಿಡಿಸಿ ಸಂಭ್ರಮಿಸಲಾಗಿದ್ದ ಭದ್ರಾಮೇಲ್ದಂಡೆ ಯೋಜನೆ ಕೇಂದ್ರ ಜಲನಿಗಮದಡಿ ರಾಷ್ಟ್ರೀಯ ಯೋಜನೆಗೆ ಸೇರ್ಪಡೆಗೊಂಡಿಲ್ಲ. ಕೇವಲ ರಾಜ್ಯ ಸರ್ಕಾರದ ಅನುದಾನದಡಿಯಲ್ಲಿ 200 ಕೋಟಿ ವೆಚ್ಚದ ಕಾಮಗಾರಿ ಪ್ರಗತಿಯಲ್ಲಿದ್ದು, 130 ಕೋಟಿ ಹಣ ಬಿಡುಗಡೆಗೊಂಡಿದೆ. ಯೋಜನೆ ಸಾಕಾರಕ್ಕೆ ಸರ್ಕಾರದ ಮಟ್ಟದಲ್ಲಿ ಚರ್ಚಿಸಲಾಗಿದೆ ಎಂದು ಶಾಸಕರು ಭರವಸೆ ನೀಡಿದರು.



ಜಗಳೂರಿನ ಪೂರ್ವಭಾವಿ ಸಭೆಯಲ್ಲಿ ಶಾಸಕ ಬಿ.ದೇವೇಂದ್ರಪ್ಪ

ತಾಲೂಕಿನ ಮಾಗಡಿ ಬಳಿ 20ಎಕರೆ ವ್ಯಾಪ್ತಿಯಲ್ಲಿ ಕೇಂದ್ರಿಯ ಏಕಲವ್ಯ ವಸತಿ ಶಾಲೆ ನಿರ್ಮಾಣಕ್ಕೆ 2 5ಕೋಟಿ ಅನುದಾನ ಬಿಡುಗಡೆಗೊಂಡಿದ್ದು. 10 ಎಕರೆ ಮಂಜೂರಾಗಿದೆ ಎಂದರು.

ಮಾಜಿ ಶಾಸಕ ಎಚ್.ಪಿ.ರಾಜೇಶ್ ಮಾತನಾಡಿ, ತರಳಬಾಳು ಹುಣ್ಣಿಮೆ ಕಾರ್ಯಕ್ರಮದಲ್ಲಿ ಭರಮಸಾಗರ ಹಾಗೂ ಜಗಳೂರು ಕೆರೆ ತುಂಬಿಸುವ ಯೋಜನೆಯ ಅವಳಿ ಕೂಸುಗಳು ಜನಿಸಿದ್ದು. ಮೂರು ಜನ ಮುಖ್ಯಮಂತ್ರಿ, ಮೂರು ಜನ ಶಾಸಕರ ಕಾಳಜಿಯಿಂದ ಯೋಜನೆ ಸಾಕಾರಗೊಂಡು ತಾಲ್ಲೂಕಿನ ಕೆರೆಗಳಿಗೆ ನೀರು ಹರಿದಿವೆ. ರಂಗಯ್ಯನ ದುರ್ಗ ಅರಣ್ಯ ಪ್ರದೇಶದ ಮಾಗಡಿ, ಅಗಸನಹಳ್ಳಿ, ಗುರುಸಿದ್ದಾಪುರ ಕೆರೆಗಳಿಗೆ ಇಲಾಖೆಯ ಕಾನೂನು ತೊಡಕಿನಿಂದ ಮತ್ತು ತೊರೆಸಾಲು ಭಾಗದ ಕೆರೆಗಳಿಗೆ ರಾಷ್ಟ್ರೀಯ ಹೆದ್ದಾರಿ ಹಾದುಹೋಗಿರುವುದರಿಂದ ಪೈಪ್ ಲೈನ್ ಕಾಮಗಾರಿ ವಿಳಂಬವಾಗಿದ್ದು. ತ್ವರಿತಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಶಾಸಕರು ಗಮನಹರಿಸಿದ್ದಾರೆ' ಎಂದು ತಿಳಿಸಿದರು.

ನೀರಾವರಿ ಇಲಾಖೆ ಎಇಇ ಶ್ರೀಧರ್ ಮಾತನಾಡಿ,'2022 ನೇ ಇಸ್ವಿಯಲ್ಲಿ ತುಪ್ಪದಹಳ್ಳಿ ಕೆರೆಗೆ,2023 ರಲ್ಲಿ 11 ಕೆರೆಗಳಿಗೆ, 2024 ರಲ್ಲಿ ಒಟ್ಟಾರೆಯಾಗಿ 31ಕೆರೆಗಳಿಗೆ ನೀರುಹರಿಸಲಾಗಿದೆ. ವಾರದೊಳಗೆ 7ಕೆರೆಗಳಿಗೆ ನೀರು ಹರಿಸಲಾಗುವುದು. ಒಟ್ಟು 8ಮೋಟಾರ್ ಗಳಲ್ಲಿ 4 ಮೋಟಾರ್ ಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದು.ಪೈಪ್ ಲೈನ್ ಕಾಮಗಾರಿ ಪೂರ್ಣಗೊಂಡನಂತರ ಹಂತ ಹಂತವಾಗಿ ಹೆಚ್ಚುವರಿ ಮೋಟರ್ ಗೆ ಚಾಲನೆ ನೀಡಲಾಗುವುದು. ರೈತರು ಪೈಪ್ ಲೈನ್ ಕಾಮಗಾರಿಗೆ ಸಹಕರಿಸಬೇಕು. ಭದ್ರಾಅಚ್ಚುಕಟ್ಟು ಒಳಹರಿವು ಹೆಚ್ಚಾಗಿದ್ದು ಇನ್ನೂ 2ರಿಂದ 3ತಿಂಗಳು ನೀರಿನ ಕೊರತೆ ಉಂಟಾಗುವುದಿಲ್ಲ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಕೆ.ಬಿ. ಕಲ್ಲೇರುದ್ರೇಶ್, ಕೆ.ಪಿ.ಪಾಲಯ್ಯ, ಷಂಷೀರ್ ಅಹಮ್ಮದ್, ವಕೀಲ ಕೆ.ಎಂ.ಬಸವರಾಜಪ್ಪ, ಶಿವಣ್ಣಗೌಡ, ಎಂ.ಎಸ್. ಪಾಟೀಲ್, ಓಂಕಾರಪ್ಪ, ಸಿರಿಗೆರೆ ನಾಗರಾಜ್, ಶಶಿ ಪಾಟೀಲ್, ಲೋಕೇಶ್, ಪರಮೇಶ್ವರಪ್ಪ, ಸುರೇಶ್ ಗೌಡ್ರು, ಚಂದ್ರನಾಯ್ಕ ಮತ್ತು ಇತರರು ಉಪಸ್ಥಿತರಿದ್ದರು.

## ಅಕ್ರಮ ಕಟ್ಟಡಗಳ ನೆಲಸಮ ಕುರಿತು ಮಾರ್ಗಸೂಚಿ : ಸುಪ್ರೀಂ

ನವದೆಹಲಿ, ಸೆ. 2 - ಅಕ್ರಮ ಕಟ್ಟಡಗಳನ್ನು ನೆಲಸಮಗೊಳಿಸುವ ಕುರಿತು ಮಾರ್ಗಸೂಚಿ ಒಂದನ್ನು ರೂಪಿಸುವುದಾಗಿ ಸುಪ್ರೀಂ ಕೋರ್ಟ್ ತಿಳಿಸಿದೆ. ಕೆಲ ರಾಜ್ಯ ಸರ್ಕಾರಗಳು ಗಂಭೀರ ಪ್ರಕರಣಗಳಲ್ಲಿ ಸಿಲುಕಿರುವ ಆರೋಪಿಗಳ ಮನೆಗಳನ್ನು ಬುಲ್ಡೋಜರ್ ಮೂಲಕ ನೆಲಸಮಗೊಳಿಸುತ್ತಿವೆ ಎಂಬ ಆರೋಪಗಳ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಕ್ರಮ ಪ್ರಾಮುಖ್ಯತೆ ಪಡೆದುಕೊಂಡಿದೆ.

ಯಾರೋ ಒಬ್ಬರು ಆರೋಪಿಯಾಗಿದ್ದಾರೆ ಎಂಬ ಮಾತ್ರಕ್ಕೆ ಅವರ ಮನೆ ನಾಶಗೊಳಿಸಲು ಹೇಗೆ ಸಾಧ್ಯ? ಆ ವ್ಯಕ್ತಿ ದೋಷಿಯಾಗಿದ್ದರೂ ಸಹ ಕಾನೂನು ಪ್ರಕಾರವೇ ಕ್ರಮ ತೆಗೆದುಕೊಳ್ಳಬೇಕು ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಕೆ.ವಿ. ವಿಶ್ವನಾಥನ್ ಅವರನ್ನು ಒಳಗೊಂಡ ಪೀಠ ತಿಳಿಸಿದೆ. ಆದರೆ ಯಾವುದೇ ಅನಧಿಕೃತ ಕಟ್ಟಡ ಇಲ್ಲವೇ ಸಾರ್ವಜನಿಕ ರಸ್ತೆಯ ಒತ್ತುವರಿಯನ್ನು ರಕ್ಷಿಸುವುದಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಉತ್ತರ ಪ್ರದೇಶ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಯಾವುದೇ ಪ್ರಕರಣದಲ್ಲಿ ಆರೋಪಿಯಾಗಿದ್ದಾನೆ ಎಂಬ ಮಾತ್ರಕ್ಕೆ ಅವರ ಸ್ಥಿರಾಸ್ತಿಗಳನ್ನು ಎಂದೂ ನಾಶಗೊಳಿಸಿಲ್ಲ. ಈ ಬಗ್ಗೆ ಈಗಾಗಲೇ ಪ್ರಮಾಣ ಪತ್ರವನ್ನು ಸಲ್ಲಿಸಲಾಗಿದೆ ಎಂದು ಹೇಳಿದರು.

ನಗರಪಾಲಿಕೆ, ಇಲ್ಲವೇ ಸ್ಥಳೀಯ ನಗರಾಭಿವೃದ್ಧಿ ಪ್ರಾಧಿಕಾರದ ನಿಯಮಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಮಾತ್ರ ಸ್ಥಿರಾಸ್ತಿ ನಾಶಗೊಳಿಸುವ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಮೆಹ್ತ ಹೇಳಿದರು. ಆಗ ಪ್ರತಿಕ್ರಿಯಿಸಿದ ಸುಪ್ರೀಂ ಕೋರ್ಟ್ ಪೀಠ, ನೀವು ಈ ನಿಲುವು ತಳೆಯುವುದಾದರೆ ನಾವು ಎಲ್ಲಾ ರಾಜ್ಯಗಳಿಗೆ ಮಾರ್ಗಸೂಚಿಯನ್ನು ಪ್ರಕಟಿಸುತ್ತೇವೆ ಎಂದು ತಿಳಿಸಿತು.

ನಾವು ಯಾವುದೇ ಅನಧಿಕೃತ ನಿರ್ಮಾಣ ಇಲ್ಲವೇ ಸಾರ್ವಜನಿಕ ರಸ್ತೆಗಳ ಒತ್ತುವರಿಯನ್ನು ರಕ್ಷಿಸುವುದಿಲ್ಲ. ಸಾರ್ವಜನಿಕ ರಸ್ತೆಯಲ್ಲಿರುವ ದೇವಾಲಯಗಳನ್ನೂ ರಕ್ಷಿಸುವುದಿಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿತು.

ಸರ್ಕಾರಗಳು ಆರೋಪಿಗಳ ಮನೆಗಳನ್ನು ಬುಲ್ಡೋಜರ್ ಮೂಲಕ ಧ್ವಂಸಗೊಳಿಸುತ್ತಿವೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಆಕ್ಷೇಪಿಸಿ ಅರ್ಜಿ ದಾಖಲಿಸಲಾಗಿತ್ತು. ನ್ಯಾಯಾಲಯ ಮುಂದಿನ ವಿಚಾರಣೆಯನ್ನು ಸೆಪ್ಟೆಂಬರ್ 17ಕ್ಕೆ ನಿಗದಿಪಡಿಸಿದೆ.

## ದೆಹಲಿ ಆಮ್ ಆದ್ಮಿ ಪಾರ್ಟಿ ಶಾಸಕನ ಬಂಧನ

ನವದೆಹಲಿ, ಸೆ. 2 - ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿಯ ಆಮ್ ಆದ್ಮಿ ಪಾರ್ಟಿ ಶಾಸಕ ಅಮಾನತ್‌ವುಲ್ಲಾ ಖಾನ್ ಅವರನ್ನು ಜಾರಿ ನಿರ್ದೇಶನಾಲಯ ಬಂಧಿಸಿದೆ. ದೆಹಲಿ ವಕ್ಫ್ ಬೋರ್ಡ್ ಅವ್ಯವಹಾರ ಹಾಗೂ ಅಕ್ರಮ ಆಸ್ತಿಗಳ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಕ್ರಮ ತೆಗೆದುಕೊಳ್ಳಲಾಗಿದೆ. ಅಮಾನತ್‌ವುಲ್ಲಾ ಖಾನ್ ಅವರನ್ನು ಸಮರ್ಥಿಸಿಕೊಂಡಿರುವ ಆಮ್ ಆದ್ಮಿ ಪಾರ್ಟಿ, ಬಿಜೆಪಿ ವಿರುದ್ಧವಾಗಿರುವ ಕಾರಣದಿಂದ ಅವರನ್ನು ಬಂಧಿಸಲಾಗಿದೆ ಎಂದು ಆರೋಪಿಸಿದೆ.

## ಜಾತಿಗಣತಿ ಅರ್ಜಿ ವಿಚಾರಣೆಗೆ ಸುಪ್ರೀಂ ಕೋರ್ಟ್ ನಕಾರ

ನವದೆಹಲಿ, ಸೆ. 2 - ಹಿಂದುಳಿದ ವರ್ಗಗಳು ಹಾಗೂ ಇತರೆ ದಮನಿತ ಸಮುದಾಯಗಳ ಕಲ್ಯಾಣಕ್ಕಾಗಿ ಜಾತಿ ಗಣತಿ ನಡೆಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂಬ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ. ನ್ಯಾಯಮೂರ್ತಿಗಳಾದ ರಿಶಿಕೇಶ್ ರಾಯ್ ಹಾಗೂ ಎಸ್.ವಿ.ಎನ್. ಭಟ್ಟಿ ಅವರನ್ನು ಒಳಗೊಂಡ ಸುಪ್ರೀಂ ಕೋರ್ಟ್ ಪೀಠದ ಎದುರು ಪ್ರಸಾದ್ ನಾಯ್ಡು ಎಂಬುವವರು ಜಾತಿ ಗಣತಿ ಕುರಿತು ಅರ್ಜಿ ಸಲ್ಲಿಸಲು ಬಯಸಿದ್ದರು.

ಆದರೆ ಈ ವಿಷಯ ಆಡಳಿತಕ್ಕೆ ಸಂಬಂಧಿಸಿದ್ದು ಎಂದು ಹೇಳಿದ ಸುಪ್ರೀಂ ಕೋರ್ಟ್ ಪೀಠ, ಮನವಿಯನ್ನು ವಾಪಸ್ ಪಡೆಯುವಂತೆ ತಿಳಿಸಿತು.

## ಇಂದು ಪೊಲೀಸ್ ಕರ್ತವ್ಯ ಕೂಟ

ಜಿಲ್ಲಾ ಪೊಲೀಸ್ ಕಚೇರಿಯ ಸಭಾಂಗಣದಲ್ಲಿ ಇಂದು ಬೆಳಗ್ಗೆ 9ಕ್ಕೆ ವಲಯ ಪೊಲೀಸ್ ಕರ್ತವ್ಯ ಕೂಟ ನಡೆಯಲಿದೆ. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ಕಾರ್ಯಕ್ರಮ ಉದ್ಘಾಟಿಸಲಿದ್ದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಅಧ್ಯಕ್ಷತೆ ವಹಿಸಲಿದ್ದಾರೆ. ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ವಿಜಯ್ ಎಂ. ಸಂತೋಷ್, ಜಿ. ಮಂಜುನಾಥ, ಆರ್‌ಎಫ್‌ಎಸ್‌ಎಲ್ ಡಾ. ಛಾಯಾಕುಮಾರಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

## ರಾಣೇಬೆನ್ನೂರಿನಲ್ಲಿ ನಾಳೆ ವಿದ್ಯುತ್ ವ್ಯತ್ಯಯ

ರಾಣೇಬೆನ್ನೂರು, ಸೆ.2- ನಗರ ಮತ್ತು ಗುಡುಗೂರ-ಮೈದೂರ ಸ್ಟೇಷನ್‌ನಿಂದ ಹೊರಡುವ ಮಾರ್ಗದ ಎಲ್ಲಾ ಗ್ರಾಮೀಣ ಭಾಗದಲ್ಲಿ ನಾಳೆ 4ರ ಬುಧವಾರ ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

## ಹರಿಹರ ಅಭಿವೃದ್ಧಿಗೆ ಅನುದಾನ ಕೋರಿ ಸಿಎಂ ಬಳಿ ನಿಯೋಗ



ಹರಿಹರ, ಸೆ. 2- ನಗರದ ಸರ್ವಾಂಗೀಣ ಅಭಿವೃದ್ಧಿಗೆ ಅನುದಾನ ಕೋರಿ ನಗರಸಭೆ ಸದಸ್ಯರೆಲ್ಲಾ ಮುಖ್ಯ ಮಂತ್ರಿಗಳ ಬಳಿಗೆ ನಿಯೋಗ ಹೋಗೋಣ ಎಂದು ಶಾಸಕ ಬಿ.ಪಿ. ಹರೀಶ್ ಸಲಹೆ ನೀಡಿದರು.

ನಗರಸಭೆ ಸಭಾಂಗಣದಲ್ಲಿ ನೂತನ ನಗರಸಭೆ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಅಭಿನಂದಿಸಿ ಅವರು ಮಾತನಾಡಿದರು.

ನಗರಸಭೆ ನೂತನ ಅಧ್ಯಕ್ಷ - ಉಪಾಧ್ಯಕ್ಷರ ಅಭಿನಂದನಾ ಸಮಾರಂಭದಲ್ಲಿ ಶಾಸಕ ಬಿ.ಪಿ. ಹರೀಶ್

ನಗರಸಭೆ ವ್ಯವಸ್ಥೆ ಹದಗೆಟ್ಟು ಹೋಗಿದೆ. ಸಾರ್ವಜನಿಕರು ನಗರಸಭೆ ಆಡಳಿತ ವ್ಯವಸ್ಥೆ ನೋಡಿ ಬಹಳಷ್ಟು ಬೇಸರವಾಗಿದ್ದಾರೆ. ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆಯದೇ ಇರುವುದರಿಂದ, ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ಅಧೋಗತಿಯತ್ತ ಸಾಗಿದೆ.

ಹರಿಹರದಿಂದ ಹಲವಾರು ಕೆರೆಗಳಿಗೆ ನೀರು ಸರಬರಾಜಾಗುತ್ತದೆ. ಆದರೆ, ಇಲ್ಲಿನ ಜನತೆಗೆ ಬೇಸಿಗೆ ಕಾಲದಲ್ಲಿ ಕುಡಿಯಲು ನೀರು ಇಲ್ಲದೇ ಪರದಾಡುವಂತಾಗಿದೆ. ಮೊದಲು ಇಲ್ಲಿನ ಜನರಿಗೆ ನೀರು ಕೊಟ್ಟು ನಂತರ ಮುಂದೆ ಜಗಳೂರು ಸೇರಿದಂತೆ ಇತರೆ ಕೆರೆಗಳಿಗೆ ಸರಬರಾಜು ಆಗುವ ನಿಟ್ಟಿನಲ್ಲಿ ಎಲ್ಲರೂ ಒಗ್ಗೂಡಿಕೊಂಡು ಹೋರಾಟ ಮಾಡಬೇಕಿದೆ. ಕೆರೆಗಳಿಗೆ ನೀರು ಸರಬರಾಜು ಆಗುವ ಜಾಕ್‌ವೆಲ್ ಹತ್ತಿರ ಪ್ರತ್ಯೇಕವಾದ ಪೈಪ್‌ಲೈನ್ ವ್ಯವಸ್ಥೆ ಮಾಡಿಕೊಂಡು ಆ ಮೂಲಕ ನಗರದ ಜನತೆಗೆ ನೀರು ಸರಬರಾಜು ಮಾಡಬೇಕಿದೆ ಎಂದು ಹೇಳಿದರು.

ನಗರದಲ್ಲಿ ಹರಿಹರ - ದಾವಣಗೆರೆ ವಾಟರ್ ಹೌಸ್ ಬಳಿ ಇರುವ ಸ್ಥಳದಲ್ಲಿ ನೀರು ಶೇಖರಣಾ ಘಟಕದ ಸ್ಥಾಪನೆ ವಿಚಾರಕ್ಕೆ ಸಂಬಂಧಿಸಿದಂತೆ ತಹಶೀಲ್ದಾರ್ ನೀಲ ನಕ್ಷೆಯನ್ನು ತಯಾರಿಸಿದ್ದು, ಅದು ಸಮಂಜಸವಾದ ಸ್ಥಳವಲ್ಲ ಎಂದು ತಜ್ಞರು ನನಗೆ ವರದಿ ನೀಡಿದ್ದಾರೆ. ನಗರಸಭೆಯ ಸರ್ವ ಸದಸ್ಯರನ್ನು ಒಗ್ಗೂಡಿಸಿಕೊಂಡು ಸಿ.ಎಂ ಬಳಿ ನಿಯೋಗ ಹೋಗಿ ಕುಡಿಯುವ ನೀರಿನ ಶೇಖರಣಾ ಘಟಕ ಸ್ಥಾಪನೆ ಸೇರಿದಂತೆ ನಗರದ ಸರ್ವಾಂಗೀಣ ಅಭಿವೃದ್ಧಿಗೆ ಎಲ್ಲಾ ಬಗೆಯ ಸಹಕಾರವನ್ನು ಕೇಳೋಣ ಎಂದರು.

ನಗರಸಭೆ ಸದಸ್ಯ ಶಂಕರ್ ಖಟಾವ್ಕರ್ ಮಾತನಾಡಿ, ಶಾಸಕರು ಹೇಳಿರುವ ವಿಚಾರಗಳನ್ನು ಈಗಾಗಲೇ ಮುಖ್ಯಮಂತ್ರಿಗಳವರ ಗಮನಕ್ಕೆ ತರಲಾಗಿದೆ. ಆದರೆ ಕೆಲವು ತಾಂತ್ರಿಕ ಸಮಸ್ಯೆಗಳಿಂದಾಗಿ ಅವುಗಳನ್ನು ಕಾರ್ಯರೂಪಕ್ಕೆ ತರಲು ವಿಳಂಬವಾಗಿದೆ. ದೂಡಾ ಅಧ್ಯಕ್ಷ ದಿನೇಶ್ ಶೆಟ್ಟಿ ಅವರು ನಿನ್ನೆ ನಗರಕ್ಕೆ ಆಗಮಿಸಿದಾಗ ಒಂದು ಕೊಠಡಿ ವ್ಯವಸ್ಥೆ ಮಾಡಲು ಮತ್ತು ವಿಶಾಲವಾದ ಜಮೀನನ್ನು ಖರೀದಿಸಿ ಬಡವರಿಗೆ ನಿವೇಶನ ಹಂಚಿಕೆಯ ವಿಚಾರಗಳನ್ನು ಹೇಳಿದ್ದಾರೆ. ಜಮೀನನ್ನು ಖರೀದಿಸಲು ಮುಂದಾಗುವುದರ ಜೊತೆಗೆ ನಗರಸಭೆ ಆಡಳಿತ ವ್ಯವಸ್ಥೆಯಲ್ಲಿ ಆಗುತ್ತಿರುವ ಲೋಪದೋಷಗಳನ್ನು ಸರಿಪಡಿಸುವ ಕೆಲಸವನ್ನು ಪೌರಾಯುಕ್ತರು ಮಾಡುವಂತೆ ಹೇಳಿದರು.

ಈ ವೇಳೆ ನಗರಸಭೆ ಹಿರಿಯ ಸದಸ್ಯ ಎ. ವಾಮನಮೂರ್ತಿ ಮಾತನಾಡಿದರು. ಈ ಸಂದರ್ಭದಲ್ಲಿ ನಗರಸಭೆ ನೂತನ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್, ಉಪಾಧ್ಯಕ್ಷ ಜಂಬಣ್ಣ ಗುತ್ತೂರು, ಪೌರಾಯುಕ್ತ ಸುಬ್ರಹ್ಮಣ್ಯ ಶೆಟ್ಟಿ ಮತ್ತು ಇತರರು ಹಾಜರಿದ್ದರು.

## ನಗರದಲ್ಲಿ ಇಂದು ಶ್ರೀ ಲಿಂಗೇಶ್ವರ ಸ್ವಾಮಿಯ ರಥೋತ್ಸವ

ಅಶೋಕ ರಸ್ತೆ ರೈಲ್ವೆ ಕ್ರಾಸ್ ಬಳಿ ಇರುವ ಶ್ರೀ ಲಿಂಗೇಶ್ವರ ದೇವಸ್ಥಾನದಲ್ಲಿ ಇಂದು ಶ್ರೀ ಲಿಂಗೇಶ್ವರ ಸ್ವಾಮಿಯ ರಥೋತ್ಸವ ನಡೆಯಲಿದೆ. ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಲಿಂಗೇಶ್ವರ ಸ್ವಾಮಿಗೆ ಮಹಾ ರುದ್ರಾಭಿಷೇಕ, ಪ್ರಸಾದ ವಿನಿಯೋಗ ನಂತರ ಬೆಳಿಗ್ಗೆ 9.30 ಗಂಟೆಯಿಂದ ಶ್ರೀ ಲಿಂಗೇಶ್ವರ ಸ್ವಾಮಿ ರಥೋತ್ಸವವನ್ನು ಏರ್ಪಡಿಸಲಾಗಿದೆ.



ಉತ್ಸವವು ದೇವಸ್ಥಾನದಿಂದ ಆರಂಭಗೊಂಡು, ಮಹಾತ್ಮ ಗಾಂಧಿ ವೃತ್ತ, ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತ, ಕುವೆಂಪು ರಸ್ತೆ ಮುಖಾಂತರ ಪಿ.ಬಿ. ರಸ್ತೆಯಿಂದ ಶ್ರೀ ಲಿಂಗೇಶ್ವರ ದೇವಸ್ಥಾನಕ್ಕೆ ಬರುತ್ತದೆ.

ಭಕ್ತಾದಿಗಳು ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಿ, ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಶ್ರೀ ಲಿಂಗೇಶ್ವರ ದೇವಸ್ಥಾನದ ಸಂಘ ಮನವಿ ಮಾಡಿದೆ.

## ಬಿಐಇಟಿ ಕಾಲೇಜಿಗೆ ರೂ. 1.86 ಕೋಟಿ ಅನುದಾನ

ದಾವಣಗೆರೆ, ಸೆ. 2 - ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ನ್ಯೂ ಏಜ್ ಇನ್ನೋವೇಷನ್ ನೆಟ್ವರ್ಕ್ ಕೇಂದ್ರ ಸ್ಥಾಪಿಸಲು ನಗರದ ಬಿಐಇಟಿ ಕಾಲೇಜಿಗೆ 1.86 ಕೋಟಿ ರೂ., ಮಂಜೂರು ಮಾಡಿದೆ. ಇಲಾಖೆಯು ಸ್ಟಾರ್ಟಪ್ 22-27ರ ಅಡಿ 2.0 ಕೇಂದ್ರ ಸ್ಥಾಪಿಸಲು ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯವನ್ನು ಆಯ್ಕೆ ಮಾಡಿ, 1.86 ಕೋಟಿ ಅನುದಾನ ನೀಡಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ. ಎಚ್.ಬಿ. ಅರವಿಂದ್ ತಿಳಿಸಿದ್ದಾರೆ.

## ಜಾತಿಗಳ ಮಾಹಿತಿ ಸಂಗ್ರಹದಲ್ಲಿ ಸಮಸ್ಯೆ ಇಲ್ಲ : ಆರ್.ಎಸ್.ಎಸ್.

ಪಾಲಕ್ಕಾಡ್, ಸೆ. 2 - ನಿರ್ದಿಷ್ಟ ಸಮುದಾಯ ಇಲ್ಲವೇ ಜಾತಿಗಳ ಮಾಹಿತಿ ಸಂಗ್ರಹಿಸುವುದಕ್ಕೆ ಯಾವುದೇ ಆಕ್ಷೇಪ ಇಲ್ಲ. ಆದರೆ, ಈ ಮಾಹಿತಿಯನ್ನು ಜನರ ಕಲ್ಯಾಣಕ್ಕೆ ಬಳಸಬೇಕೇ ಹೊರತು ರಾಜಕೀಯ ಲಾಭಕ್ಕಾಗಿ ಚುನಾವಣಾ ಅಸ್ತ್ರದಂತೆ ಬಳಸಬಾರದು ಎಂದು ಆರ್‌ಎಸ್‌ಎಸ್ ಹೇಳಿದೆ. ಆರ್‌ಎಸ್‌ಎಸ್‌ನ ಮೂರು ದಿನಗಳ ಸಮನ್ವಯ ಬೈಠಕ್ ನಂತರ ಮಾಧ್ಯಮಗಳೊಂದಿಗೆ ಮಾತನಾಡಿರುವ ಸಂಘದ ಅಖಿಲ ಭಾರತೀಯ ಪ್ರಚಾರ ಪ್ರಮುಖ ಸುನಿಲ್ ಅಂಬೇಕರ್ ಈ ನಿಲುವು ವ್ಯಕ್ತಪಡಿಸಿದ್ದಾರೆ.

ಜಾತಿ ಹಾಗೂ ಜಾತಿಗೆ ಸಂಬಂಧಿಸಿದ ವಿಷಯಗಳು ಅತ್ಯಂತ ಸೂಕ್ಷ್ಮವಾಗಿವೆ. ದೇಶದ ಐಕ್ಯತೆ ಹಾಗೂ ಸಮಗ್ರತೆಗೆ ಇದು ಮುಖ್ಯ ವಿಷಯವಾಗಿದೆ ಎಂದು ಅಂಬೇಕರ್ ಹೇಳಿದ್ದಾರೆ.


ಯಾವುದಾದರೂ ಸಮುದಾಯ ಹಾಗೂ ಜಾತಿ ಹಿಂದುಳಿದಿದ್ದರೆ ವಿಶೇಷ ಗಮನಹರಿಸಬೇಕಾಗುತ್ತದೆ. ಸರ್ಕಾರಗಳು ಈ ಹಿಂದೆಯೂ ಜಾತಿಗಳ ಕುರಿತು ಮಾಹಿತಿ ಸಂಗ್ರಹಿಸಿದ್ದವು. ಹೀಗಾಗಿ ಸರ್ಕಾರಕ್ಕೆ ಮಾಹಿತಿ ಬೇಕಾದಲ್ಲಿ ಸಂಗ್ರಹಿಸುತ್ತದೆ. ಇದರಲ್ಲಿ ಯಾವುದೇ ಸಮಸ್ಯೆ ಇಲ್ಲ ಎಂದವರು ಹೇಳಿದ್ದಾರೆ.

ಸಮುದಾಯ ಹಾಗೂ ಜಾತಿಗಳ ಕಲ್ಯಾಣಕ್ಕಾಗಿ ಮಾಹಿತಿ ಸಂಗ್ರಹಿಸಬೇಕಿದೆ. ಇದನ್ನು ಚುನಾವಣಾ ದಾಳವಾಗಿ ಬಳಸಿಕೊಳ್ಳಬಾರದು. ಈ ಬಗ್ಗೆ ಪ್ರತಿಯೊಬ್ಬರು ಎಚ್ಚರಿಕೆ ವಹಿಸಬೇಕು ಎಂದವರು ತಿಳಿಸಿದ್ದಾರೆ.


ಬೇಕಾಗಿದ್ದಾರೆ
WANTED
ಸೇಲ್ಸ್ ಮೆನ್ Salesmen
ಸೇಲ್ಸ್ ಗರ್ಲ್ಸ್ Sales Girls
Salary + ESI, PF
Get proper resume along with a photo attested & a xerox of your Adhaar Card.
ಆಶೂಜಿ ಡಿಸ್ಟ್ರಿಬ್ಯೂಟರ್ಸ್
# 323 / 1D, ಬಿನ್ನಿ ಕಂಪನಿ ರಸ್ತೆ, ದಾವಣಗೆರೆ




ಹೃತ್ಪೂರ್ವಕ ಕೃತಜ್ಞತೆಗಳು

ಹರಿಹರ ನಗರಸಭೆ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಲು ಸಹಕರಿಸಿದ **ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್‌ರವರಿಗೆ ಶಾಸಕರಾದ ಬಿ.ಪಿಹರೀಶ್‌ನವರಿಗೆ, ಜೆಡಿಎಸ್ ಪಕ್ಷದ ಜಿಲ್ಲಾ ಅಧ್ಯಕ್ಷರಾದ ಬಿ. ಚಿದಾನಂದಪ್ಪನವರಿಗೆ, ಮಾಜಿ ಶಾಸಕ ಎಸ್. ರಾಮಪ್ಪನವರಿಗೆ, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್‌ನವರಿಗೆ,** ನಗರಸಭೆ ಎಲ್ಲಾ ಸದಸ್ಯರಿಗೆ, ಜೆಡಿಎಸ್ ಪಕ್ಷದ ಎಲ್ಲಾ ಮುಖಂಡರಿಗೆ, ಕಾರ್ಯಕರ್ತರಿಗೆ, ಹರಿಹರ ನಗರದ 31ನೇ ವಾರ್ಡಿನ ಮತದಾರರಿಗೆ ಹಾಗೂ ನಮ್ಮ ಪೂಜ್ಯ ಮಾವನವರಾದ ಹನುಮಂತಪ್ಪ ಬೇಡರ್ ಹಾಗೂ ಅತ್ತೆ ಅಂಜನಮ್ಮ ಹನುಮಂತಪ್ಪ ಬೇಡರ್, ಮಾಜಿ ನಗರಸಭೆ ಉಪಾಧ್ಯಕ್ಷರು ಹಾಗೂ ಪ್ರತ್ಯೇಕವಾಗಿ ಮತ್ತು ಪರೋಕ್ಷವಾಗಿ ಸಹಕಾರ ನೀಡಿರುವ ಎಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಹೆಚ್. ಎಸ್ ಶಿವಶಂಕರ್
ಮಾಜಿ ಶಾಸಕರು, ಹರಿಹರ

ಕವಿತಾ ಮಾರುತಿ ಬೇಡರ್
ನಗರಸಭೆ ಅಧ್ಯಕ್ಷರು
ಹರಿಹರ


KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas